

# ಯಾವುದು ಸತ್ಯ ಯಾವುದು ಅಸತ್ಯ


ಗ್ರಂಥಕರ್ತ : ತ್ರಿಮತ ಐಕ್ಯೈಕ ಗುರುವು

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**


## ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**

---



ಗ್ರಂಥ ಮುದ್ರಣ

**ಇಂದೂ ಜ್ಞಾನ ವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 39 ಪ್ರಥಮ ಮುದ್ರಣ : ಡಿಸೆಂಬರ್–2017

ಪ್ರತಿಗಳು : 1000 **ಬೆಲೆ.** /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು–ಉತ್ತರಗಳು.
03. ಧರ್ಮ–ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ–ಅಸತ್ಯವಾ?)
06. ದೆವ್ವಗಳಹಾಗೂ–ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ–ಮಹಿಮೆ (ಸತ್ಯವಾ–ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ–ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ–ಗೀತ (ಹಾಡುಗಳ ಜ್ಞಾನ).
22. ತತ್ತ್ವಾರ್ಥ ಗೊಂಬೆಗಳ ಜ್ಞಾನ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ–ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಸಮಾಧಿ.
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು–963.
38. ಮತ–ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು–ಆಸ್ತಿಕರು.
44. ಹೇತುವಾದ–ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ರೂಪ ಬದಲಾದ ಗೀತೆ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತ ದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನ ವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ರಾಜಕೀಯ-ರಾಜಕೀಯ
96. ಉಗ್ರವಾದ ಸತ್ಯಕ್ಕೋಸ್ಕರವೇ
97. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
98. ಮಾನವತ್ವ
99. ದ್ಯಾನ - ಪ್ರಾರ್ಥನೆ - ನಮಾಜ್



 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು.
02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ.
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ.
09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ.
20. ಭಗವಂತುಡು.
21. ದ್ರಾವಿಡುಲು – ಆರ್ಯುಲು.
22. ಪ್ರಭುವು – ಪ್ರಭುತ್ವಂ.
23. ಭೂತಂ – ಮಹಾಭೂತಂ.
24. ಪ್ರಭು – ಪ್ರಜ.
25. ಯಾದವ್.
26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು.
28. ಪ್ರಕೃತಿ–ವಿಕೃತಿ.
29. ಮಾಟ–ಮಂದು.
30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ–
ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ–
ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–
ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–
ಮಾಯ ಮಹತ್ಯಮು.
46. ಸಮಾಧಿ.
47. ತಲ್ಲಿ ತಂಡ್ರಿ –
ಗುರುವು ದೈವಮು.
48. ಕಲಿಯುಗಮು.
49. ಮತಮು–ಪಥಮು.
50. ದಿವ್ಯಖುರಾನ್–ಹದೀಸು.
51. ತಲ್ಲಿ.
52. ಪುಟ್ಟುಟ – ಗಿಟ್ಟುಟ.
53. ಗೋರು – ಗುರು.
54. ಆತ್ಮ.
55. ಕರ್ಮ ಮರ್ಮಮು.
56. ತಾತ.
57. ಗುರುಪೌರ್ಣಮಿ.
58. ಯೋಗೀಶ್ವರುಲ
ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು – ಹಿಂದುವು.
61. ಸ್ತ್ರೀ–ಪು/ಲಿಂಗಮು.
62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ –
ದೇಹಂ ಮೋಹಂ.
65. ಜೀರ್ಣ+ಆಶಯಮು.

## ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು 05

**DVD's**

66. ಮೇಘಂ ಒಕಭೂತಂ–
ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ – ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು–
ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ.
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು–
ಕರ್ಮಉನ್ನ ಕೃಷ್ಣುಡು.
79. ಭಯಂ.
80. ಸುಖಮು–ಆನಂದಮು.
81. ದಶ–ದಿಶಲು.
82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು–
ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ
ಮಹೇಂದ್ರಜಾಲ,
ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ
(ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು–ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು?
88. ತೆಲುಗುಲೋ ಮೂಡು–
ಆರು–ತೊಮ್ಮಿದಿ
89. 6–3=6
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!
92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ–ಭಯಮು.
99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು–ಅಪಾರ್ಥಮು.
102. ತೋಲೇವಾಡು.
103. ಗುರು ಚಿಹ್ನಂ.
104. ಭಕ್ತಿ–ಶ್ರದ್ಧಲು.
105. ದೇವುಡು ಇದ್ದರಾ! ಒಕ್ಕರಾ!!
106. ಪುರುಷೋತ್ತಮ.
107. ಮತದ್ವೇಷಮು.
108. ನೀ ವೆನುಕ ವಾಡು.
109. ಗ್ರಂಥಮು – ಬೋಧ.
110. ಆಟ – ದೋಬೂಚುಲಾಟ.
111. ಪ್ರಜಲು – ಮಾನವುಲು.
112. ಆಸ್ತಿ – ದೋಸ್ತಿ
113. ದಂತಮು–ಅಂತಮು.
114. ಮಾಯ ಮರ್ಮಮು–ಆತ್ಮ ಧರ್ಮಮು
115. ಶ್ರೀಕೃಷ್ಣುಡು
ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು
117. ಅದುರು–ಬೆದುರು
118. ಶವಮು – ಶಿವಮು
119. ಧರ್ಮಚಕ್ರಮು
120. ಗ್ರಾಹಿತ ಶಕ್ತಿ
121. ಭೌತಿಕಮು – ಅಭೌತಿಕಮು
122. ದೇವುನಿ ಆಜ್ಞ ಮರಣಂ
123. ಮತ ಸಾಮರಸ್ಯಂ
124. ಮೋಕ್ಷಮು – ಮೋಸಮು
125. ಅಕ್ಷರ ಜ್ಞಾನಮು
126. ಲಲಾಜಲಮು
127. ದೈವ ಧರ್ಮಗಳು–ಮತಸಾಂಪ್ರದಾಯಗಳು
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ–ಮಂದು
130. ಕಾಲಚಕ್ರಂ
131. ಆಧ್ಯಾತ್ಮಿಕ ಪ್ರಶ್ನಲು–ಜವಾಬುಲು.

# ಇಂದೂ ಜ್ಞಾನವೇದಿಕೆ ಪುಸ್ತಕಗಳು ದೊರೆಯುವ ವಿಳಾಸ

## ಪ್ರಬೋಧಾಶ್ರಮ (ಶ್ರೀ ಕೃಷ್ಣಮಂದಿರ)

ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P
Cell : **ಲಕ್ಷ್ಮಿನಾರಾಯಣಾಚಾರಿ**–09440556968. **ವೆಂಕಟೇಶ್**–08096816963.

## (ಇಂದೂ ಜ್ಞಾನ ವೇದಿಕೆ ಸದಸ್ಯರು)

**ಎ. ರಾಘವೇಂದ್ರ ಶ್ರೇಷ್ಠಿ**
ಹೊಸಪೇಟೆ, ಬಳ್ಳಾರಿ (ಜಿಲ್ಲೆ). K. A
Cell : 9611133635, 7619545963, 09440645005

**ಜಿ. ರಾಧಾಕೃಷ್ಣಾ ರೆಡ್ಡಿ**
ಪ್ರಬೋಧಾ ನಿಲಯ. ರಿಂಗ್ ರೋಡ್,
ಮರಲೂರು, ತುಮಕೂರು (ಜಿ).
ಪಿನ್–572150, Cell : 9448177812

**ಶಿವರಾಜ**
(ಸಾ)(ಕಿ) ಕುಕನೂರು, ಚಿಕ್ಕಸೂಗುರು (ತಾ),
ರಾಯಚೂರು (ಜಿ), Cell:98443 69516

**R.S. ವೀರಾಚಾರಿ**
ಕತ್ತರಗುಪ್ಪೆ, ಬೆಂಗಳೂರು–560085
Cell : 9036892829

**G. ಮನೋಹರ್**
ಮಲ್ಲಸಂದ್ರ, ಟಿ. ದಾಸರಹಳ್ಳಿ
ಬೆಂಗಳೂರು–560057
Cell : 7411459912, 9448452963.

**B. ವಾತ್ಸಲ್ಯ**
ರೈಲ್ವೇ ಸ್ಟೇಷನ್ ಹತ್ತಿರ,
ಪಿ.ಬಿ.ರೋಡ್, ದಾವಣಗೆರೆ–577002
Cell : 9901534677, 8880666529

**ಯೋಗೇಶ್**.B
ವಡ್ಡೇಪಾಲ್ಯಂ (ಗ್ರಾ),
ಕುಂದುರ್ಪಿ(ಮಂ),ಅನಂತಪುರ(ಜಿಲ್ಲಾ)
ಸೆಲ್: 9620193341, 9739228639

**ಬಸವರಾಜ ಅಂಗಡಿ**
(ಸಾ) ಪೋತ್ನಾಳ, (ತಾ) ಮಾನವಿ,
ರಾಯಚೂರು (ಜಿ) Cell :**9632418716**

**ಸೂರ್ಯ ಪ್ರಕಾಶ**
ಟೈಪ್ 'ಸಿ' (ಸಾ) (ಪೊ) ಶಕ್ತಿನಗರ
(ತಾ), ರಾಯಚೂರು (ಜಿ)
Cell : 9611183107, 9164886981

**ಲೀಲಾವತಿ**
ಜನತಾನಗರ,ತೊಣಚಿಕೊಪ್ಪಲ್,ಮೈಸೂರ್
Cell : 9141109799, 9986369118

**T.V. ರಮಣ**
NGR ಲೇಔಟ್, ರೂಪೇನಾ
ಅಗ್ರಹಾರ, ಬೆಂಗಳೂರು–560068.
Cell : 08970772028, 07411459912, 07406039453

**M. ನಾರಾಯಣರೆಡ್ಡಿ**
(Bsc census department retired supervisor)
ರಾಮಗುಂಡನಲ್ಲಿ ಪೋಸ್ಟ್, ವೈಟ್
ಫೀಲ್ಡ್ ರೋಡ್, ಬೆಂಗಳೂರು–066
Cell : 9482516023

**ಪ್ರಕಾಶ್ ರೆಡ್ಡಿ**
ಸೆಲ್:9845656774,9482516023

**ಯೋಗೇಶ್**
ಸೂಲನಾಯಕನಹಳ್ಳಿ (ಗ್ರಾಮ),
ತುಮಕೂರು (ಜಿಲ್ಲೆ).
ಸೆಲ್:8762523963,9740744424

# ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.

2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.

3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.

4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.

5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.

6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.

7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.

8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.

9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.

10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.

11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.

12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲಿಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯೆಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ ಹಾಗೂ ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯಥಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ಗ್ರಂಥ ಓದುಗರ ಅಭಿಪ್ರಾಯಗಳು



**ಷೇಕ್ ನೂರ್‌ಭಾಷಾ ರವರ ಅಭಿಪ್ರಾಯ :-**

**9–123 "ಓ ವಿಶ್ವಾಸಿಗಳೇ! ನಿಮ್ಮ ಪರಿಸರಗಳಲ್ಲಿರುವ ಅವಿಶ್ವಾಸಿಗಳೊಂದಿಗೆ ಹೋರಾಡಿರಿ. ಅವರು ನಿಮ್ಮಲ್ಲಿನ ಕಠಿಣತ್ವವನ್ನು ಸವಿ ನೋಡಬೇಕು. ಅಲ್ಲಾಹ್ ಭಯ ಭಕ್ತಿಗಳಿರುವವರಿಗೆ ಜೊತೆಯಾಗಿ ಇದ್ದಾನೆ."**

ಎಂದು ಖುರಾನ್‌ನಲ್ಲಿ ದೈವ ಆಜ್ಞೆ ಇದೆ. ಅಂದರೇ ದೇವರು ಸತ್ಯವಂತರ ಪಕ್ಷದಲ್ಲಿ ಇದ್ದಾನೆಂದು ಅರ್ಥ. ಸತ್ಯವನ್ನು ಶೋಧಿಸುವವರು, ಸತ್ಯವನ್ನು ತೋರಿಸುವವರು, ಸತ್ಯವನ್ನು ಮಾತನಾಡುವವರೇ ಸತ್ಯವಂತರು. ದೇವರ ಆಜ್ಞೆ ಪಾಟಿಸುವುದೇ ವಿಶ್ವಾಸಿಗಳ ಧರ್ಮ. ವಿಶ್ವಾಸಿಯಾದ ನಾನು "ಷೇಕ್ ನೂರ್ ಭಾಷಾ", ಸತ್ಯವಂತನಾದ **ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ** ಜ್ಞಾನದಲ್ಲಿ ಇರುವುದೇ ನನ್ನ ಕರ್ತವ್ಯ, ನನ್ನ ಧರ್ಮ.

ಅಲ್ಲಾಹ್ ಒಬ್ಬನೇ ಎಂದು ನಂಬುತ್ತದೆ ಇಸ್ಲಾಮ್ ಪ್ರಪಂಚ. ಅಲ್ಲಾಹ್ ಒಬ್ಬನೇ ಆದಾಗ, ಅಲ್ಲಾಹ್ ಜ್ಞಾನ ಒಂದೇ ಆಗಿರಬೇಕು. ಈ ಸೃಷ್ಟಿಮೊತ್ತವು ಅಲ್ಲಾಹ್‌ದೇ, ತನ್ನ ಇಷ್ಟ ಬಂದಕಡೆ ಜ್ಞಾನವನ್ನು ಹೇಳಬಲ್ಲನು. ಅಲ್ಲಾಹ್ 3 ಪ್ರಾಂತಗಳಲ್ಲಿ, 3 ಭಾಷೆಗಳಲ್ಲಿ, 3 ಕಾಲಗಳಲ್ಲಿ, 3 ರೂಪಗಳಾಗಿ, 3 ಗ್ರಂಥಗಳಲ್ಲಿನ ಜ್ಞಾನವನ್ನು ಬೋಧಿಸಿದ್ದಾನೆ. ಈ ಮೂರು ಗ್ರಂಥಗಳಲ್ಲಿ ಒಂದು ಮಾತ್ರ ನಮ್ಮದು, ಉಳಿದಿರುವವು ನಮ್ಮವಲ್ಲ, ನಮಗೆ ಸಂಬಂಧವಿಲ್ಲ, ಬೇರೆ ದೇವರದ್ದು ಎಂದರೇ ಅವರು ಇಸ್ಲಾಮ್, ಮುಸ್ಲಿಮಾನ್‌ನಿಂದ ಬಹಿಷ್ಕರಣೆ ಆದಂತೆ, ಅವರು 'ಷಿರ್ಕ್' (ಬಹು ದೇವತಾರಾಧನೆ) ಮಾಡಿದಂತೆ. ದೇವರು ಖುರಾನ್‌ನಲ್ಲಿ ಯಾವ ತಪ್ಪನ್ನಾದರೂ ಮನ್ನಿಸುತ್ತೇನೆ ಆದರೆ ಷಿರ್ಕ್ ನಿಂದ ಶಿಕ್ಷೆ ತಪ್ಪುವುದಿಲ್ಲ ಎನ್ನುತ್ತಿದ್ದಾನೆ. ಎಲ್ಲಾ ಒಂದೇಯೆಂದು ಹೇಳುವವನೇ ವಿಶ್ವಾಸಿ. ವೇಷ ಧರಿಸಿದಷ್ಟು ಮಾತ್ರಕ್ಕೆ ವಿಶ್ವಾಸಿ ಆಗಲಾರರು. ಅಲ್ಲಾಹ್ ಒಬ್ಬನೇ ಆದಾಗ ಅಲ್ಲಾಹ್ ಜ್ಞಾನ ಕೂಡಾ ಒಂದೇ. ಎಲ್ಲಾ ವಿಧಗಳ ಹೆಸರುಗಳಿಂದ ಹೇಳಿದರೂ ದೈವಜ್ಞಾನ ಒಂದೇ. ಅಲ್ಲಾಹ್ ಒಬ್ಬನೇ, ಅಲ್ಲಾಹ್ ಜ್ಞಾನ ಒಂದೇ ಎಂದು ಈ ಪ್ರಪಂಚದಲ್ಲಿ

ಮೊಟ್ಟಮೊದಲು ಹೇಳಿದ ವ್ಯಕ್ತಿ **ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಸ್ವಾಮಿಯವರು** ನಿಜಕ್ಕೂ ಸತ್ಯವಂತರು.

ನಾನು ಅವರು ರಚಿಸಿದ **"ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು", ಮತ್ತು "ಅಂತಿಮ ದೈವಗ್ರಂಥದಲ್ಲಿ ಜ್ಞಾನ ವಾಕ್ಯಗಳು"** ಎನ್ನುವ ಗ್ರಂಥಗಳು ಓದಿದಾಗ ರೋಮಾಂಚನ ಹೊಂದಿದ ನನ್ನ ಮನಸ್ಸು ಒಂದು ವಿಷಯದ ಮೇಲೆ ಸಾಕ್ಷಿ ಕೊಟ್ಟಿದೆ. "ಖುರಾನ್ ಅರಬಿಕ್ ಭಾಷೆಯಲ್ಲಿ ಸೌದೀಯಲ್ಲಿ ಹುಟ್ಟಿದರೆ, ನಮ್ಮಂತವರಿಗಾಗಿ ಅಲ್ಲಾಹ್ ನಮ್ಮಮೇಲೆ ದಯೆ ತೋರಿ **"ಸ್ವಾಮಿಯವರ"** ಕೈಗಳಿಂದ ಭಾರತದೇಶದಲ್ಲಿ ನಮ್ಮ ಆಂಧ್ರಪ್ರದೇಶದ ಭೂಮಿ ಮೇಲೆ ಮತ್ತೆ ಖುರಾನ್‌ನನ್ನು ತೆಲುಗು ಭಾಷೆಯಲ್ಲಿ ಹೇಳುವುದಕ್ಕೇ ಹುಟ್ಟಿಸಿದ್ದಾನೆನಿಸುತ್ತದೆ."

ಗ್ರಂಥಗಳು ಓದಿದ ನಂತರ ನನ್ನ ಅಭಿಪ್ರಾಯ ಬರೆಯಬೇಕೆಂದು ಲೇಖನಿ, ಕಾಗದ ತೆಗೆದುಕೊಂಡಾಗ, ನನಗೆ ತಿಳಿಯದಂತೇ ಖುರಾನ್‌ನಲ್ಲಿನ 9–123 ಆಯತ್‌ನಲ್ಲಿನ ದೈವ ಆಜ್ಞೆ 'ಸತ್ಯವಂತರೊಂದಿಗೆ ಇರು' ಎನ್ನುವ ಸಂದೇಶ ನೋಡಿದ ನಂತರ ಇದು ಅದ್ಭುತವಾದ ಮಹಿಮೆಯಾಗಿ ನನಗೆ ತೋಚಿತು. ಬಿರುದು ಕೊಡುವ ಶಕ್ತಿ ಆದ್ದರಿಂದ ದೇವರು ನನಗೆ ಕೊಟ್ಟಿದ್ದರೆ ನಾನು ಸ್ವಾಮಿಯವರನ್ನು ಮಹಿಮೆ ಪುರುಷನಾಗಿ ಹೇಳುತ್ತೇನೆ. ಅಲ್ಲಾಹ್ ಒಬ್ಬನೇ ಆದ್ದರಿಂದ, ಮತಗಳೆಲ್ಲವನ್ನು ಒಂದು ಮಾಡಬೇಕೆಂದುಕೊಂಡ ಮಹಿಮೆ ಪುರುಷನನ್ನು ಆಯ್ಕೆ ಮಾಡಿಕೊಂಡಿದ್ದಾನೆ. ಆದ್ದರಿಂದ ವಿಶ್ವಾಸಿಗಳೇ ಬನ್ನಿ! "ಅಲ್ಲಾಹ್ (ದೇವರು) ಒಬ್ಬನೇ" ಎನ್ನುವ ನಿನಾದವನ್ನು ನಿಜ ಮಾಡೋಣ. ಸತ್ಯವಂತನ ಹತ್ತಿರವಿದ್ದು ಸತ್ಯವನ್ನು ಬದುಕಿಸೋಣ...

ಸ್ವಾಮಿಯವರಿಗೆ ನಮಸ್ಕಾರಗಳು...

ಇಂತಿ

**ಷೇಕ್ ನೂರ್ ಭಾಷಾ**

ಮಿಲಾದುನ್–ನಬಿ–ಕಮಿಟಿ (ಪೋರುಮಾಮಿಳ್ಳ, Y.S.R. ಕಡಪ (ಜಿಲ್ಲೆ)

**ಸಯ್ಯದ್ ನಾಗೂರ್ ಷರೀಫ್ ರವರ ಅಭಿಪ್ರಾಯ :–**

ನಾವು ಮುಸ್ಲಿಮರಾಗಿ ಹುಟ್ಟಿದರೂ ಎಲ್ಲರಿಗೂ ದೇವರು ಒಬ್ಬನೇ ಎಂದು ನಂಬುವವರು. ಆದರೆ ಜ್ಞಾನದ ಪ್ರಕಾರ ಹೇಗೆಂದು ತಿಳಿಯಲಿಲ್ಲ. ಖುರ್‌ಆನ್‌ನನ್ನು ಎಷ್ಟೋಸಲ ಓದಿದ್ದೇವೆ. ದೇವರು (ಅಲ್ಲಾಹ್) ದೊಡ್ಡವನು ಎಂದು ತಿಳಿದಿದೆ ಆದರೇ ಎಷ್ಟೋ ಜ್ಞಾನ ವಿಷಯಗಳು ಸಮಾಧಾನ ಇಲ್ಲದ ಪ್ರಶ್ನೆಗಳಾಗಿ ಉಳಿದುಹೋಗಿವೆ.

ಖುರಾನ್‌ನಲ್ಲಿ 3–7 ಆಯತ್ ಪ್ರಕಾರ ಮುತಷಾಬಿಹಾತ್ (ಸೂಕ್ಷ್ಮ) ವಾಕ್ಯಗಳು ಇವೆಯೆಂದು ತಿಳಿದುಕೊಂಡ ನಾವು "ಮುತಷಾಬಿಹಾತ್ ವಾಕ್ಯಗಳ ವಾಸ್ತವ ಅರ್ಥ ದೇವರಿಗೆ ಹೊರತು ಮತ್ಯಾರಿಗು ತಿಳಿದಿಲ್ಲ" ಎಂದು ನೋಡಿದ ನಂತರ ಮತ್ತೆ ಈ ಜ್ಞಾನ ನಮಗೆ ಹೇಗೆ ತಿಳಿಯುತ್ತದೆ? ಎಂದುಕೊಂಡಿದ್ದೆವು. ದೇವರು ನಮ್ಮೊಂದಿಗೆ ಮಾತನಾಡಿ ಹೇಳುತ್ತಾನಾ ಎಂದರೇ 42–51 ಆಯತ್ ಪ್ರಕಾರ "ದೇವರು ಯಾವ ಮಾನವನೊಂದಿಗೂ ಪ್ರತ್ಯಕ್ಷವಾಗಿ ಮಾತನಾಡುವುದಿಲ್ಲ ದೇವರೊಂದಿಗೆ ಮಾತನಾಡುವುದು ಮನುಷ್ಯನಿಗೆ ಸಾಧ್ಯವಾಗುವ ಕೆಲಸವಲ್ಲ" ಎಂದು ಇದೆ.

ಮತ್ತೆ ನಮಗೆ ಅಲ್ಲಾಹ್ ಜ್ಞಾನ ಹೇಗೆ ತಿಳಿಯುತ್ತದೆ? ಎಂದು ಬಾಧೆಪಟ್ಟ ನಾವು ಒಂದುದಿನ ಮಜೀದ್‌ಗೆ ಹೋಗಿ ಹಜ್ರತ್‌ನನ್ನು ಇದೇ ಪ್ರಶ್ನೆ ಕೇಳಿದ್ದೇವೆ. ದೇವರ ಜ್ಞಾನ ಮನುಷ್ಯರು ಹೇಳುತ್ತಾರಾ? ಎಂದು, ಆತನು ಅದು ಸಾಧ್ಯವಾಗುವುದಿಲ್ಲ ಎಂದನು. ಆದರೇ ದೇವರೇ ಮನುಷ್ಯನಾಗಿ ಬರುತ್ತಾನಾ? ಎಂದು ಕೇಳಿದೆವು. ದೇವರು ಜನ್ಮಿಸುವುದಿಲ್ಲ, ಹಾಗಾದರೆ ಅದು ಖುರಾನ್‌ಗೆ ವಿರುದ್ಧ ಆಗುತ್ತದೆ ಎಂದನು. ಆದರೆ ಖುರ್‌ಆನ್‌ನಲ್ಲಿ 89–21, 22 ವಾಕ್ಯಗಳಲ್ಲಿ **"ದೇವದೂತರು ಸಾಲುಸಾಲಾಗಿ ನಿಂತಿರುವಾಗ ದೇವರು ಅವತರಿಸುತ್ತಾನೆ"** ಎಂದು ಇದೆ. ಮತ್ತೆ ಖುರಾನ್‌ನಲ್ಲಿ ಅವತರಿಸುತ್ತಾನೆ ಎಂದು ಇದ್ದರೆ ನಮ್ಮ ಹಿರಿಯರು ಹೀಗೆ ಹೇಳುತ್ತಿದ್ದಾರಲ್ಲ ಅಂದುಕೊಂಡಿದ್ದೆವು.

ಹಾಗೇ 36–82 ಪ್ರಕಾರ ದೇವರು ಕೆಲಸ ಮಾಡಬೇಕಾದ ಅಗತ್ಯವಿಲ್ಲ ತಯಾರಾಗು ಎಂದರೆ ತಯಾರಾಗುತ್ತದೆ ಎಂದು ಇದೆ. ಇದಕ್ಕೆ ಭಿನ್ನವಾಗಿ 73–9, 6–102 ಸೂರಾದಲ್ಲಿ 'ದೇವರು ಕೆಲಸ ಮಾಡುವವನು, ಆತನೇ ಕಾರ್ಯಕರ್ತ' ಎಂದು ಇದೆ. ಈ ಎರಡು ವಾಕ್ಯಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೊ ಅರ್ಥವಾಗಲಿಲ್ಲ. ಈ ವಿಧವಾಗಿ ಜ್ಞಾನ ವಿಷಯದಲ್ಲಿ ಬಂದಿರುವ ಸಂಶಯಗಳು ನಮಗೆ ತೀರಲಿಲ್ಲ. ಒಂದುವೇಳೆ ನಮ್ಮ ಹಿರಿಯರು ಹೇಳಿದರೂ ಕೂಡಾ ಅವು ಖುರಾನ್‌ನಲ್ಲಿ ಇರುವ ಭಾವನೆಗೆ ವಿರುದ್ಧವೆಂದು ತಿಳಿದುಕೊಂಡಿದ್ದೇವೆ.

ಕೆಲವು ದಿನಗಳ ಕೆಳಗೆ ಷೇಕ್ ನೂರ್ ಭಾಷಾರವರ ಮೂಲಕ ಶ್ರೀಶ್ರೀಶ್ರೀ ಅಚಾರ್ಯ ಪ್ರಬೋಧಾನಂದ ಯೋಗೀಶ್ವರರು ರಚಿಸಿದ **"ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು"** ಎನ್ನುವ ಗ್ರಂಥವನ್ನು ನಾವು, ನಮ್ಮ ಗುರುಗಳು ಎಲ್ಲರೂ ಸೇರಿ ಓದಿದ್ದೇವೆ. ಅದು ಓದಿದನಂತರ ಇಲ್ಲಿಯವರೆಗು ಖುರಾನ್ ನಲ್ಲಿರುವ ಪ್ರಶ್ನೆಗಳು ಪ್ರಶ್ನೆಗಳಾಗಿರುವ ಎಷ್ಟೋ ಸೂಕ್ಷ್ಮ ವಿಷಯಗಳು, ಯಾರೂ ಸಮಾಧಾನ ಹೇಳಲಾರದ ಎಷ್ಟೋ ಜ್ಞಾನ ವಿಷಯಗಳು ತಿಳಿದುಕೊಂಡಿದ್ದೇವೆ. ಒಂದು ಹಿಂದೂಮತದಲ್ಲಿ ಹುಟ್ಟಿದ ವ್ಯಕ್ತಿ ಖುರಾನ್‌ನನ್ನು ಇಷ್ಟು ಅದ್ಭುತವಾಗಿ ಹೇಳಿದ್ದಾರೆಂದರೇ ಅದು ಅಲ್ಲಾಹ್ ಸ್ವಾಮಿಯವರ ಮೂಲಕ ಹೇಳಿಸಿದ್ದಾರೆ ಅನಿಸಿತು. ನಂತರ ಸ್ವಾಮಿಯವರು ರಚಿಸಿದ **"ಖುರ್‌ಆನ್‌ನಲ್ಲಿನ ವಜ್ರ ವಾಕ್ಯಗಳು"** ಎನ್ನುವ ಗ್ರಂಥವನ್ನು ಓದುವುದು ನಡೆದಿದೆ. ಅದು ಎಷ್ಟು ಅದ್ಭುತವಾಗಿ ಇದೆಯೆಂದರೆ 420 ಪುಟಗಳ ಗ್ರಂಥವನ್ನು 3 ದಿನಗಳಲ್ಲಿ 4 ಸಲ ಓದಿದ್ದೇವೆ. ಆ ಗ್ರಂಥದಲ್ಲಿರುವ ಅಲ್ಲಾಹ್ ಜ್ಞಾನವನ್ನು ಹೇಳಬೇಕೆಂದರೇ ಮಾತುಗಳು ಸಾಲುವುದಿಲ್ಲ. ಇಷ್ಟು ಅದ್ಭುತವಾದ ಜ್ಞಾನ ಖುರಾನ್‌ನಿಂದ ತೆಗೆದು ಈ ವಿಧವಾಗಿ ಎಲ್ಲಾ ಮತದವರಿಗೂ ಹತ್ತಿರ ಮಾಡುವುದು ಮುಸ್ಲಿಮ್‌ರಾಗಿ ನಮಗೆ ಎಷ್ಟೋ ಆನಂದವಾಗಿದೆ.

ನಿಜ ಹೇಳಬೇಕೆಂದರೇ ಇಷ್ಟುಕಾಲ ಖುರಾನ್‌ನನ್ನು ಎಷ್ಟೋಸಲ ಓದಿದರೂ ಅರ್ಥವಾಗದ ಎಷ್ಟೋ ವಿಷಯಗಳು ಇಷ್ಟು ಸುಲಭವಾಗಿ ತಿಳಿದಿವೆ ಯೆಂದರೆ ಅದು ಯಾರಿಂದ? ಪ್ರಬೋಧಾನಂದ ಗುರುಗಳ ಮುಖಾಂತರವೇ ಈ ದಿನ ಸಾಧ್ಯವಾಗಿದೆ. 'ದೇವರಿಗೆ ಮತ ಇಲ್ಲ, ಜ್ಞಾನ ಒಂದೇ ಮತಕ್ಕೆ ಪರಿಮಿತಿ ಆಗಿಲ್ಲ' ಎಂದು ಸ್ವಾಮಿಯವರು ಮತಾತೀತವಾಗಿ ಜ್ಞಾನವನ್ನು ನೀಡುತ್ತಿದ್ದರೆ ಮುಸ್ಲಿಮ್ ಆಗಿ ಹುಟ್ಟಿದ ನಾವು ಎಷ್ಟೋ ಹೆಮ್ಮೆಪಟ್ಟಿದ್ದೇವೆ. ಇದು ನಮ್ಮ ಮನಸ್ಫೂರ್ತಿಯಾಗಿ ಹೇಳುತ್ತಿರುವ ಮಾತು.

ಈ ದಿನ ಖುರಾನ್‌ಗೆ ವಿರುದ್ಧ ಭಾವನೆಗಳು ಮುಸ್ಲಿಮ್ ಸೋದರರಲ್ಲಿ ಗೂಡುಕಟ್ಟಿಕೊಂಡು ಹೋಗಿವೆಯೆಂದು ಜ್ಞಾನ ತಿಳಿದ ನಂತರ ತಿಳಿದಿದೆ. ಪುನರ್ಜನ್ಮಗಳು ಇಲ್ಲವೆಂದು ಇಲ್ಲಿಯವರೆಗು ನಮ್ಮ ಭಾವನೆಯಾದರೇ, ಖುರಾನ್ **"ಪುನರ್ಜನ್ಮಗಳಿವೆ"** ಎಂದು **7–29, 22–66, 36–68, 40–11** ಮೊದಲಾದ ಎಷ್ಟೋ ಆಯತ್‌ಗಳು ಸಾಕ್ಷಿಕೊಡುತ್ತಿವೆ. ಹಾಗೆಯೇ ದೇವರು ಹುಟ್ಟುವುದಿಲ್ಲ ಎಂದು ಅಂದುಕೊಳ್ಳುವವರು ಮುಸ್ಲಿಮ್‌ರು, ಆದರೆ **"ದೇವರು ಅವತರಿಸುತ್ತಾನೆ"** ಎಂದು **89–21, 22 ಮತ್ತು 2–30, 15–29, 30** ಆಯತ್‌ಗಳು ಸಾಕ್ಷಿ ಕೊಡುತ್ತಿವೆ. ಮತ್ತು ಇಲ್ಲಿಯವರೆಗು ನಮಗೆ ತಿಳಿದಿರುವುದು ಸತ್ಯವಾ? ಈಗ ಜ್ಞಾನ ತಿಳಿದ ನಂತರ ತಿಳಿದಿರುವುದು ಸತ್ಯವಾ? ಆಲೋಚಿಸಿರಿ ಸೋದರರೆ!

ಈ ದಿನ ಮುಸ್ಲಿಮ್‌ರಾಗಿ ನಾವು ಮಾಡಲಾರದ ಕೆಲಸ, ಹಿಂದೂ ಮತದಲ್ಲಿ ಹುಟ್ಟಿದ "ಶ್ರೀ ಸ್ವಾಮಿ ಪ್ರಬೋಧಾನಂದ ಯೋಗೀಶ್ವರರು" ಖುರಾನನ್ನು ಇಷ್ಟು ಹತ್ತಿರವಾಗಿ ಪ್ರಜೆಗಳೊಳಗೆ ತೆಗೆದುಕೊಂಡು ಹೋಗುತ್ತಿದ್ದಾರೆಂದರೇ ಅದಕ್ಕೆ ಮುಸ್ಲಿಮ್ ಪ್ರಪಂಚ ಎಷ್ಟೋ ಹೆಮ್ಮೆ ಪಡಬೇಕು. ಈತನ ಗ್ರಂಥಗಳು ಓದಿದ ಮೇಲೆ ಮನಸ್ಫೂರ್ತಿಯಾಗಿ ಹೇಳುತ್ತಿರುವ ಮಾತು. ಸ್ವಾಮಿಯವರು ಖುರಾನ್‌ನನ್ನು ಎಷ್ಟೋ ಉನ್ನತ ಸ್ಥಾನದಲ್ಲಿಟ್ಟು ಪವಿತ್ರ ವಾಕ್ಯಗಳು, ವಜ್ರವಾಕ್ಯಗಳು ಎಂದು ಹೆಸರುಗಳಿಟ್ಟು ಬರೆದು ಆ ಜ್ಞಾನವನ್ನು ಎಲ್ಲಾ ಮತದವರಿಂದ ಓದಿಸುತ್ತಿದ್ದಾರೆಂದರೇ ಯಾವ ಮುಸ್ಲಿಮ್ ಇಲ್ಲಿಯವರೆಗು ಪ್ರಪಂಚದಲ್ಲಿ

ಮಾಡಲಾರದ ಕೆಲಸ ಮಾಡುತ್ತಿದ್ದಾರೆಂದು ಹೇಳುವುದು ಅತಿಶಯೋಕ್ತಿ ಅಲ್ಲ. ಈ ಜ್ಞಾನವನ್ನು ತಿಳಿದುಕೊಳ್ಳುವುದು ಜನ್ಮ ಜನ್ಮಗಳ ಅದೃಷ್ಟವಾಗಿ ಭಾವಿಸುತ್ತಿದ್ದೇವೆ. ಆತನು ಇನ್ನೂ ಖುರಾನ್‌ನಲ್ಲಿನ ಜ್ಞಾನವನ್ನು ನಮಗೆ ನೀಡುತ್ತಾರೆಂದು, ನೀಡಬೇಕೆಂದು ದೇವರನ್ನು (ಅಲ್ಲಾಹ್) ನನ್ನು ಪ್ರಾರ್ಥಿಸುತ್ತಿದ್ದೇವೆ. ಸ್ವಾಮಿಯವರಿಗೆ ನಮಸ್ಕಾರಗಳು. . .

ಇಂತಿ

**ಸಯ್ಯದ್ ನಾಗೂರ್ ಷರೀಫ್**

ಪೋರುಮಾಮಿಳ್ಲ, Y.S.R. ಕಡಪ (ಜಿಲ್ಲೆ)

**ಷೇಕ್ ಮುನ್ನಾರವರ ಅಭಿಪ್ರಾಯ :–**

ನನ್ನ ಹೆಸರು ಷೇಕ್ ಮುನ್ನಾ, ನಮ್ಮದು ಕಡಪ ಜಿಲ್ಲೆ. ದೇವರ ಜ್ಞಾನ ಗುರು ಮುಖಾಂತರವೇ ತಿಳಿಯಲ್ಪಡುತ್ತದೆಂದು ನನ್ನ ಧೃಢ ವಿಶ್ವಾಸ. ದೇವರು ಎಲ್ಲಾ ಮತಗಳಲ್ಲಿ ತನ್ನ ದೂತರ ಮುಖಾಂತರ ಜ್ಞಾನ ಹೇಳಿದ್ದಾನೆಂದು, ಹಿಂದೂಮತದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು, ಕ್ರೈಸ್ತರಲ್ಲಿ ಯೇಸುನನ್ನು, ಇಸ್ಲಾಮ್‌ನಲ್ಲಿ ಮುಹಮ್ಮದ್ ಪ್ರವಕ್ತನನ್ನು ಗುರುಗಳಾಗಿ ಭಾವಿಸಿ ಗೌರವಿಸೆಂದು ನಮ್ಮ ಗುರುಗಳು ಹೇಳುತ್ತಿದ್ದರು.

ನಾನು ಈ ಮಧ್ಯ ಕಾಲದಲ್ಲಿ "ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು" ಎನ್ನುವ ಗ್ರಂಥ ಓದಿದ್ದೇನೆ. ಅದರಲ್ಲಿ ಸ್ವಾಮಿಯವರು ಖುರಾನ್ ನಲ್ಲಿರುವ ಆಯತ್‌ಗಳಿಗೆ ಎಷ್ಟೋ ಶ್ರೇಷ್ಠವಾದ ಜ್ಞಾನದಿಂದ, ಇಲ್ಲಿಯವರೆಗು ಯಾರೂ ಹೇಳದ ವಿವರಣೆಗಳು ಹೇಳಿದ್ದಾರೆ. ಖುರಾನ್‌ನನ್ನು ಒಬ್ಬ ಹಿಂದೂ ಗುರು ಇಷ್ಟು ದೊಡ್ಡದಾಗಿ ಹೇಳುವುದು ನೋಡಿದರೆ ಆಶ್ಚರ್ಯವಾಗಿದೆ. ಮತಕ್ಕೆ ಸಂಬಂಧವಿಲ್ಲದೆ ಜ್ಞಾನ ಇದೆಯೆಂದು, **ಭಗವದ್ಗೀತೆ, ಬೈಬಲ್, ಖುರಾನ್ ಈ**

**ಮೂರು ಗ್ರಂಥಗಳು ಮತಕ್ಕೆ ಸಂಬಂಧಿಸಿರುವವು ಅಲ್ಲವೆಂದು, ಜ್ಞಾನವನ್ನು ನೀಡುವ ಪ್ರಥಮ, ದ್ವಿತೀಯ, ಅಂತಿಮ ದೈವಗ್ರಂಥಗಳೆಂದು** ಸ್ವಾಮಿಯವರು ಹೇಳುವುದು ಈ ಯುಗಕ್ಕೆ ಹೊಸ ಮಾತೆನಿಸಿದೆ. ಸ್ವಾಮಿಯವರು ಬರೆದ "ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು" ಎನ್ನುವ ಇನ್ನೊಂದು ಗ್ರಂಥವನ್ನು ಓದಿದ ಮೇಲೆ ದೈವ ಭಾವನೆಯಿಂದ ನನ್ನ ಶರೀರ ರೋಮಾಂಚನ ಗೊಂಡು ಕಣ್ಣಿನಿಂದ ನೀರು ಸೋರಿವೆ. ಸತ್ಯ ತಿಳಿಯುವಾಗ ಹೊಂದುವ ಅನುಭೂತಿಯನ್ನು ನಾನು ಆ ಗ್ರಂಥವನ್ನು ಓದಿದ ನಂತರ ಅನುಭವಿಸಿದ್ದೇನೆ.

ಖುರಾನ್‌ನಲ್ಲಿ 6–91 ಆಯತ್ ಪ್ರಕಾರ "ಅಲ್ಲಾಹ್ ಯಾವ ಮಾನವನ ಮೇಲೆ ಜ್ಞಾನವನ್ನು ಅವತರಿಸುವಂತೆ ಮಾಡಲಿಲ್ಲ" ಎಂದು ಇರುವಾಗ ಈತನು ಈ ಜ್ಞಾನ ಹೇಗೆ ಹೇಳಿದ್ದಾರೆ? ಎಂದು ಸಂಶಯ ಬಂದಿದೆ. ಆದರೆ ಅಲ್ಲಾಹ್ ತನ್ನ ಜ್ಞಾನವನ್ನು ತಾನು ಆಯ್ಕೆ ಮಾಡಿಕೊಂಡ ಪ್ರತಿನಿಧಿ ಮೂಲಕ ಹೇಳಿಸುತ್ತಾನೆಂದು ಖುರಾನ್ ಮಾತು ಜ್ಞಾಪಕ ಬಂದಿದೆ. ದೇವರೇ ಹೀಗೆ ಈ ದಿನ ಇಷ್ಟು ಅದ್ಭುತವಾದ ಜ್ಞಾನವನ್ನು ನಮಗೆ ನೀಡುವುದು ನಮ್ಮ ಅದೃಷ್ಟ. ಈ ದಿನ ಮೂರು ದೈವಗ್ರಂಥಗಳ ಬಗ್ಗೆ ಅದರಲ್ಲಿ ಒಂದೇ ಜ್ಞಾನ ಇದೆಯೆಂದು, ಎಲ್ಲರಿಗೂ ಆರಾಧ್ಯನು ಒಬ್ಬನೇ ಎಂದು ಹೇಳಿದ 'ತ್ರಿಮತ ಏಕೈಕ ಗುರು' ಆಗಿ ಹೆಸರುಗಳಿಸಿದ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರವರಿಗೆ ಸಾಷ್ಟಾಂಗ ಪ್ರಣಾಮಗಳು ತಿಳಿಸುತ್ತಿದ್ದೇನೆ.

ತಮ್ಮ ಗ್ರಂಥಗಳಿಂದ ಖುರ್‌ಆನ್ ಜ್ಞಾನ ಈ ದಿನ ಇಷ್ಟಾಗಿ ಪ್ರಜೆಗಳೊಳಗೆ ಅರ್ಥವಂತವಾಗಿ ಹರಡಿದೆಯೆಂದರೇ ತಮ್ಮ ಋಣ ಹೇಗೆ ತೀರಿಸಿಕೊಳ್ಳಬೇಕು. ನಿನ್ನೆಯವರೆಗು ನಮ್ಮದು (ಮುಸ್ಲಿಮ್‌ರದ್ದು) ಎಂದುಕೊಂಡ ಖುರಾನ್‌ನನ್ನು ಎಲ್ಲರಿಗೂ ಹತ್ತಿರಮಾಡಿ, ಖುರಾನ್ ಎಲ್ಲರದ್ದು ಎಂದು ಹೇಳಿಸಿದ್ದೀರೆಂದರೇ ಮುಸ್ಲಿಮ್ಮಾಗಿ ನಾನು ಎಷ್ಟೋ ಗರ್ವಪಡುತ್ತಿದ್ದೇನೆ. ವಜ್ರ ವಾಕ್ಯಗಳೆಂದು ಹೇಳಿ ಖುರಾನ್ ಗ್ರಂಥವನ್ನು 'ವಜ್ರಗಳ ಭಾಂಡಾರ' ಎಂದು ಪ್ರಪಂಚಕ್ಕೆ ತಿಳಿಸಿದ ನಿಮಗೆ ಶತಕೋಟಿ ನಮಸ್ಕಾರಗಳು. ಇನ್ನೂ ನಮಗೆ ನೀವು ಎಷ್ಟೋ ಬೆಲೆಯುಳ್ಳ

ಜ್ಞಾನವನ್ನು ನೀಡಬೇಕೆಂದು ವಿನಯ ಪೂರ್ವಕವಾಗಿ ಪ್ರಾರ್ಥಿಸುತ್ತಾ... ಸ್ವಾಮಿಯವರಿಗೆ ಸಾಷ್ಟಾಂಗ ಪ್ರಣಾಮಗಳು.....

ಒಬ್ಬ ಜಿಜ್ಞಾಸಿ

**ಷೇಕ್ ಮುನ್ನಾ**

ಪೋರುಮಾಮಿಳ್ಳ, Y.S.R. ಕಡಪ (ಜಿಲ್ಲೆ)

**ಷೇಕ್ ಖಾಸಿಂ ಸಾಹೆಬ್ ರವರ ಅಭಿಪ್ರಾಯ :–**

ಸ್ವಾಮಿಯವರಿಗೆ ನಮಸ್ಕಾರಗಳು. . .

ನಾನು ಚಿಕ್ಕಂದಿನಿಂದ ಕಟ್ಟುಪಾಡುಗಳಿಂದ ಕೂಡಿದ ಇಸ್ಲಾಮ್ ಮತದಲ್ಲಿ ಬೆಳೆದಿದ್ದೇನೆ. ಆದರೆ ಪರಮತ ದ್ವೇಷ ಇರುತ್ತಿರಲಿಲ್ಲ. ಆದರೆ ಹಿಂದೂಗಳಲ್ಲಿನ ದೇವತಾರಾಧನೆ ಇಷ್ಟವಾಗುತ್ತಿರಲಿಲ್ಲ. ದೇವರು ಒಬ್ಬನೇ ಆದಾಗ ಅವರು ಇಷ್ಟುಜನರನ್ನು ಏಕೆ ಪೂಜಿಸುತ್ತಿದ್ದಾರೆ? ಎಂದು ಅನಿಸುತ್ತಿತ್ತು. ಆ ವಿಧವಾಗಿ ಅವರ ವಿಧಾನಗಳು ಇಷ್ಟವಾಗಲಿಲ್ಲ. ಆದರೆ ಮನುಷ್ಯರ ಮೇಲೆ ದ್ವೇಷವಿಲ್ಲ. ಖುರಾನ್‌ನನ್ನು ನಾನು ಎಷ್ಟೋ ಸಲ ಓದಿದ್ದೇನೆ. ಅಮೂಲಾಗ್ರ ತಿಳಿದಿದೆ ಎಂದುಕೊಂಡು ನಾವು ಸಂಘವಾಗಿ ಏರ್ಪಟ್ಟು ಪ್ರಚಾರ ಮಾಡುತ್ತಿದ್ದೆವು. ಖುರಾನ್ ಅರಬಿಕ್ ಭಾಷೆಯಲ್ಲಿ ಅವತರಿಸಿದೆ ಆದ್ದರಿಂದ ಆ ದಿವ್ಯ ಗ್ರಂಥವನ್ನು ಅರಬಿಕ್‌ನಲ್ಲಿಯೇ ಓದಬೇಕು ಎನ್ನುವ ಹಿರಿಯರ ಮಾತಿನ ಪ್ರಕಾರ ನಾನು ಕೂಡಾ ಅರಬಿಕ್ ಕಲಿತುಕೊಂಡು ಅದರಲ್ಲಿಯೇ ಓದಿದ್ದೇನೆ.

ಈ ಮಧ್ಯೆ ಸ್ವಾಮಿಯವರು ರಚಿಸಿದ “ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು” ಮತ್ತು “ಅಂತಿಮ ದೈವ ಗ್ರಂಥದಲ್ಲಿ ವಜ್ರ ವಾಕ್ಯಗಳು”

ಎನ್ನುವ ಗ್ರಂಥಗಳನ್ನು ಓದಿದ್ದೇನೆ. ಅದ್ಭುತ! ಅಮೋಘ!! ಖುರಾನ್‌ನಲ್ಲಿ ಇಷ್ಟು ಜ್ಞಾನವಿದೆಯಾ! ಎಂದು ನಾನು ಆಶ್ಚರ್ಯಹೋಗಿದ್ದೇನೆ. ಇಲ್ಲಿಯವರೆಗು ಅರ್ಥ ತಿಳಿಯದ ಎಷ್ಟೋ ಸೂಕ್ಷ್ಮ ಆಯತ್‌ಗಳಿಗೆ ಅರ್ಥ ತಿಳಿದುಕೊಂಡು, ಖುರಾನ್ ಜ್ಞಾನದ ಆಳವನ್ನು ತಿಳಿದುಕೊಂಡು ದೇವರೇ ನಮಗೋಸ್ಕರ ಕಳಿಸಿದ್ದಾನೆಂದು ಪುಳಕಿತನಾಗಿ ಹೋದೆನು.

ದೈವಜ್ಞಾನ ಬೇಕೆಂದುಕೊಂಡ ಪ್ರತಿ ಮನುಷ್ಯ ಸ್ವಾಮಿಯವರ ರಚನೆಗಳು ಓದಬೇಕು. ಈ ಜ್ಞಾನವನ್ನು ಅಲ್ಲಗಳೆದವನು ಅಸಲು ಮುಸ್ಲಿಮೇ ಅಲ್ಲವೆಂದು ನನ್ನ ಅಭಿಪ್ರಾಯ. ಮೋಕ್ಷಕ್ಕು, ಸ್ವರ್ಗಕ್ಕು ವ್ಯತ್ಯಾಸ ತಿಳಿಯದಂತೆ ನಮಗೆ ಖುರಾನ್ ಎಲ್ಲಾ ತಿಳಿದಿದೆಯೆಂದುಕೊಳ್ಳುವ ನಮ್ಮಂಥವರಿಗೆ ಜ್ಞಾನೋದಯ ಮಾಡಿಸಿ ಅಲ್ಲಾಹ್‌ವೊಂದರ ನಿಜ ಜ್ಞಾನವನ್ನು ನೀಡುತ್ತಿರುವ ನಿಮಗೆ ನಮ್ಮ ಧನ್ಯವಾದಗಳು.

ನೀವು ಹೇಳುವ ಜ್ಞಾನ ತಿಳಿದುಕೊಂಡರೆ ಮಾಯೆ ನಾಶವಾಗುತ್ತದೆ. ನೀವು ಹೇಳುವ ಜ್ಞಾನ ಅರ್ಥವಾದರೆ ಮತ ಮಾಯವಾಗಿಹೋಗುತ್ತದೆ.

ನೀವು ಹೇಳುವ ಜ್ಞಾನವನ್ನು ಅನುಸರಿಸಿದರೇ ಕರ್ಮಗಳು ಸುಟ್ಟು ಹೋಗುತ್ತವೆ. ಎಲ್ಲರಿಗೂ ದೇವರು ಒಬ್ಬನೇ, ಜ್ಞಾನ ಒಂದೇ ಎಂದು ಹೇಳುವ ನೀವು, ನಿಮ್ಮ ರಚನೆಗಳು ಸರ್ವಮಾನವರಿಗು ರಕ್ಷಣೆ ಕವಚ ಸ್ವಾಮಿ!

ಒಬ್ಬ ಮುಸ್ಲಿಮ್ (ವಿಶ್ವಾಸಿ) ಆಗಿ ಹೇಳುತ್ತಿದ್ದೇನೆ. ನೀವು ಹೇಳಿದ **ಮೂರು ದೈವ ಗ್ರಂಥಗಳು ಒಂದೇ** ಎನ್ನುವುದು ಅಕ್ಷರಷಃ ಸತ್ಯ. ಖುರಾನ್ ಹೇಳಿದ ತೌರಾತ್ ಭಗವದ್ಗೀತೆಯೇಯೆಂದು ಹೇಳುವುದು ಅದು ದೊಡ್ಡ ದೈವ ರಹಸ್ಯ. ಯಾವ ಮನುಷ್ಯ ಖಂಡಿಸಲಾರದ ಜ್ಞಾನವನ್ನು, ಯಾವ ಸಂಶಯ ಉಳಿಸದ ಜ್ಞಾನವನ್ನು ನೀಡುತ್ತಿರುವ ನೀವು ದೇವರು ಕಳಿಸಿದ ದೈವ ಸ್ವರೂಪರು.

**ಎಲ್ಲರಿಗೂ ಒಬ್ಬನೇ ದೇವರು**
**ಎಲ್ಲರಿಗೂ ಒಂದೇ ಜ್ಞಾನ**
**ಎಲ್ಲರಿಗೂ ಒಬ್ಬನೇ ಗುರು**
**ಆತನೇ "ತ್ರಿಮತ ಏಕೈಕ ಗುರು"**

ನಮಸ್ಕಾರಗಳೊಂದಿಗೆ ...

**ಷೇಕ್ ಖಾಸೀಂ ಸಾಹೇಬ್**
ಮಿಲಾದ್–ಉನ್–ನಬಿ (ಸಂಸ್ಥೆ)
ಪೋರುಮಾಮಿಳ್ಲ, Y.S.R. ಕಡಪ (ಜಿಲ್ಲೆ)

**ಷೇಕ್ ಷಫಿ ರವರ ಅಭಿಪ್ರಾಯ :–**

ಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರವರಿಗೆ ನಮಸ್ಕರಿಸುತ್ತಾ

ಈ ದಿನ ಪ್ರತಿಯೊಬ್ಬರು ದೇವರು ಒಬ್ಬನೇ ಎಂದು ಅನ್ನುತ್ತಿದ್ದಾರೆ ಹೊರತು, ಆ ಒಬ್ಬನು ಯಾರು? ಎಲ್ಲಿದ್ದಾನೆ? ಏನು ಮಾಡುತ್ತಿದ್ದಾನೆ? ಆತನನ್ನು ಪ್ರಾರ್ಥಿಸುವುದು ಹೇಗೆ? ಆತನನ್ನು ಸೇರಿಕೊಳ್ಳುವ ವಿಧಾನ ಏನು? ಎನ್ನುವ ವಿಷಯಗಳನ್ನು ಸಂಪೂರ್ಣವಾಗಿ ಹೇಳದೆ ಹೋಗುತ್ತಿದ್ದಾರೆ. ಯಾರಾದರೂ ಹೇಳುವ ಪ್ರಯತ್ನ ಮಾಡಿದರೂ ಅದು ಒಬ್ಬ ದೇವರಿಗಲ್ಲದೆ ಉಳಿದ ಕೆಲವರಿಗು ಕೂಡಾ ಅನ್ವಯಿಸುತ್ತಿದೆ. ದೇವರು ಎಲ್ಲರಿಗೂ ಒಬ್ಬನೇ ಆದಾಗ ದೇವರ ವಿಧಾನ ಎಲ್ಲರಿಗೂ ಸಮಾನ ಅಲ್ಲವಾ! ದೈವ ಗ್ರಂಥದಲ್ಲಿನ ದೇವರ ವಾಕ್ಯ ಯಾವಾಗಾದರೂ ಸತ್ಯವೇ ಆಗುತ್ತದೆ. ದೈವ ಗ್ರಂಥದಲ್ಲಿನ ಸೂಕ್ಷ್ಮ ವಾಕ್ಯಗಳ ವಿವರ ಮನುಷ್ಯನಿಗೆ ತಿಳಿಯದಿರುವುದರಿಂದ ಮೇಲಿನ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ.

ದೇವರ ಗ್ರಂಥ ನಮ್ಮ ಹತ್ತಿರವಿದ್ದು, ಅದರಲ್ಲಿನ ದೈವ ವಿಷಯಗಳು ತಿಳಿಯಲಾರದ ಸ್ಥಿತಿಯಲ್ಲಿ ನಾವಿರುವಾಗ, ನೀವು ದೈವ ಗ್ರಂಥದಲ್ಲಿನ ಸ್ಥೂಲ ಮತ್ತು ಸೂಕ್ಷ್ಮ ವಾಕ್ಯಗಳ ವಿವರವನ್ನು ಶಾಸ್ತ್ರಬದ್ಧವಾಗಿ ತಿಳಿಸುವುದೇ ಅಲ್ಲದೆ, ದೇವರ ಹತ್ತಿರದಿಂದ ಬಂದಿರುವ ಎಲ್ಲಾ ಗ್ರಂಥಗಳಲ್ಲಿನ ವಿಷಯಗಳನ್ನು ಸಮನ್ವಯಪಡಿಸಿ, **ಎಲ್ಲಾ ಗ್ರಂಥಗಳು ಒಬ್ಬ ದೇವರನ್ನೇ ತಿಳಿಸುತ್ತಿವೆಯೆಂದು** ತಿಳಿಸುವುದು ನಮಗೆಷ್ಟೋ ಆನಂದ ಉಂಟುಮಾಡಿದೆ. ನಿಮ್ಮ ಪ್ರಸಂಗಗಳು ಮತ್ತು ಗ್ರಂಥಗಳಲ್ಲಿನ ಜ್ಞಾನ ನೋಡಿದ ನಂತರ 'ಸತ್ಯ ಸತ್ಯವಾಗಿ ಅಸತ್ಯ ಅಸತ್ಯವಾಗಿ ರುಜು ಆಗಬೇಕೆನ್ನುವುದು ದೇವರ ಸಂಕಲ್ಪದಂತೆ ಎನಿಸುತ್ತಿದೆ. ಇಷ್ಟು ದೊಡ್ಡ ಜ್ಞಾನ ಪ್ರತಿಯೊಬ್ಬರು ತಿಳಿದುಕೊಂಡು ದೇವರಿಗೆ ಇಷ್ಟವಾದವರಾಗಿ ಬದಲಾಗಬೇಕೆಂದು ಕೋರುತ್ತಿದ್ದೇವೆ.

**ಓ ಮತ ಹಿರಿಯರೇ! ಮತಗಳಲ್ಲಿನ ಮನುಷ್ಯರೇ!! ನಿಮ್ಮೆಲ್ಲರಿಗೂ ಒಂದು ವಿಜ್ಞಪ್ತಿ.**

ಮತ ಎನ್ನುವುದು ಕೆಲವು ಕಟ್ಟುಪಾಡುಗಳಿಂದ ಕೂಡಿಕೊಂಡಿದೆ. ಕೆಲವು ನಿಯಮಗಳು, ಕೆಲವು ಶರತುಗಳು ಮತದಲ್ಲಿ ಇವೆ. ಆದರೇ ದೇವರ ಜ್ಞಾನದಲ್ಲಿ ಅಂತಹ ನಿಯಮ ನಿಬಂಧನೆಗಳು ಏನು ಇರುವುದಿಲ್ಲ. ಮುಸ್ಲಿಮ್ ಸಮಾಜದಲ್ಲಿನ ಪ್ರಜೆಗಳು ಅಮಾಯಕವಾಗಿ ತಮ್ಮ ಹಿರಿಯರು ಏನು ಹೇಳಿದರೇ ಅದೇ ದೈವಜ್ಞಾನವೆಂದು ನಂಬುತ್ತಿದ್ದಾರೆ. ಮುಸ್ಲಿಮ್‌ರಲ್ಲಿನ 'ವಿಶ್ವಾಸ' ಎನ್ನುವುದನ್ನು ಬಲಹೀನತೆಯಾಗಿ ಮಾಡಿಕೊಂಡು ಖುರ್‌ಆನ್ ಜ್ಞಾನವನ್ನು ಹೇಳದೆ ತಮಗೆ ತಿಳಿದಿರುವುದನ್ನೇ ಹೇಳಿ ಅದೇ ಜ್ಞಾನವೆಂದು ನಂಬಿಸುತ್ತಿದ್ದಾರೆ. ಹದೀಸುಗಳನ್ನು ಹೇಳಿ ಖುರ್‌ಆನ್ ಎಂದು ಭ್ರಮಿಸುವಂತೆ ಮಾಡುತ್ತಿದ್ದಾರೆ. ಮತ ಆಚಾರಗಳನ್ನು ಹೇಳಿ ಅದೇ ನಮ್ಮ ಮತಜ್ಞಾನ ಎಂದು ನಂಬಿಸುತ್ತಿದ್ದಾರೆ. ಮುಸ್ಲಿಮ್‌ರ ಜ್ಞಾನ ಬೇರೆಯೆಂದು, ಉಳಿದವರ ಜ್ಞಾನ ಬೇರೆಯೆಂದು ಹಾಗೇ ಮುಸ್ಲಿಮ್‌ರ ದೇವರು ಅಲ್ಲಾಹ್‌ಯೆಂದು ಉಳಿದವರ ದೇವರು ಬೇರೆಯೆಂದು ಹೇಳುವುದರಿಂದ ಮುಸ್ಲಿಮ್‌ರು ನಮ್ಮ ದೇವರು ಬೇರೆಯೆಂದು, ಉಳಿದ ಮತದವರ ದೇವರು

ಬೇರೆಯೆಂದು ನಂಬಿ ಅಜ್ಞಾನ ದಾರಿ ಹಿಡಿದುಹೋಗುತ್ತಿದ್ದಾರೆ. **ಸರ್ವ ಪ್ರಪಂಚಕ್ಕೆ ದೇವರು ಒಬ್ಬನೇಯೆಂದು** ಹೇಳದೆ ಬೇರೆಬೇರೆ ದೇವರುಗಳಿದ್ದಾರೆಂದು ಹೇಳುವು ದರಿಂದ ದೇವರ ಏಕತ್ವಕ್ಕೆ ಮುಸ್ಲಿಮ್ ಹಿರಿಯರೇ ಬಿಲಗಳನ್ನು ಕೊರೆದಂತಾಗುತ್ತದೆ. ಅಂತಹ ಅಜ್ಞಾನ ಭಾವನೆಗಳೆಲ್ಲ ಇಲ್ಲದಂತೆ ಮಾಡಿ, ಎಲ್ಲರಿಗೂ ಒಂದೇ ದೇವರು ಎಂದು ಬೋಧಿಸುವ ಪ್ರಬೋಧಾನಂದ ಯೋಗಿಶ್ವರರ ಜ್ಞಾನವನ್ನು ಕೇಳಿ ದೇವರ ಏಕತ್ವವನ್ನು ಗ್ರಹಿಸೋಣ.

ದೇವರ ಸಂಪೂರ್ಣ ಜ್ಞಾನ ತಿಳಿದುಕೊಂಡು, ದೇವರಿಗೆ ಇಷ್ಟವಾದವ ರಾಗಿ ಬದಲಾಗುವುದಕ್ಕೆ ಶ್ರೀ **ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ** ಪ್ರವಚನಗಳನ್ನು ಕೇಳಿರಿ (ಕುಡಿಯಿರಿ) ಮತ್ತು ಗ್ರಂಥಗಳನ್ನು ಓದಿರಿ (ತಿನ್ನಿರಿ).

ಇಂತಿ

**ಷೇಕ್ ಷಫಿ (ಚೆನ್ನೈ)**

**ಶಿವಕೃಷ್ಣ ರವರ ಅಭಿಪ್ರಾಯ :–**

**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರವರಿಗೆ ನಮಸ್ಕಾರ ಗಳೊಂದಿಗೆ...**

“ಅಂತಿಮ ದೈವ ಗ್ರಂಥದಲ್ಲಿ ವಜ್ರವಾಕ್ಯಗಳು” ಎನ್ನುವ ಗ್ರಂಥ ಸ್ವಾಮಿಯವರ ‘90’ನೇ ಗ್ರಂಥ.

ಒಬ್ಬ ವ್ಯಕ್ತಿ 90 ಗ್ರಂಥಗಳು ಬರೆಯುವುದು, ಅದೂ ಯಾವ ವಿಧವಾದ ಅಶಾಸ್ತ್ರೀಯತೆ, ಕಪಟ ಕಲ್ಮಷ, ಪ್ರಪಂಚ ಸ್ವಾರ್ಥ, ಮತ ದ್ವೇಷ, ಗುಣ ಪ್ರೇರೇಪಣೆ ಇಲ್ಲದೇ ಕೇವಲ ‘ಆತ್ಮಜ್ಞಾನ’ವನ್ನು ಸರ್ವ ಮತಗಳೂ ತಿಳಿದು ಧನ್ಯವಾಗುವಂತೆ ಬರೆಯುವುದು ಒಂದು ಅದ್ಭುತ.

ಶ್ರೀ ಸ್ವಾಮಿಯವರ ಜೀವನ ಎಷ್ಟೋಜನ ಇತರೆ ಪೀಠಾಧಿಪತಿಗಳಂತೆ, ಮತ ಹಿರಿಯರಂತೆ ಬಡಿಸಿದ ಊಟದ ಎಲೆ ಅಲ್ಲ. ಅವರಂತೆ ತಮ್ಮ ಹಾಸಿಗೆ ಹತ್ತಿರಕ್ಕೆ ಎಲ್ಲಾ ಸಮಕೂಡಿಸುವಷ್ಟು ಹಣ ಅಂತಸ್ತು ಇಲ್ಲ. ಇತರರಂತೆ ಯಾರ ಹತ್ತಿರ ಯಾವ ವಿಧವಾದ ಚಂದಾಗಳು, ಹಣವನ್ನು, ಕಾಣಿಕೆಗಳನ್ನು ಕೇಳಿ ಎಂದಿಗೂ ತೆಗೆದುಕೊಂಡಿರುವುದಿಲ್ಲ. ಇತರರು ಎಲ್ಲಾ ತಮಗೆ ತಮ್ಮ ಭಕ್ತರ ಮೂಲಕ ಸ್ವೀಕರಿಸಿಕೊಂಡು, ಬಹಳ ಸಮಯ ಇದ್ದರೂ ಕೂಡಾ ಇಷ್ಟು ಗ್ರಂಥಗಳು ಬರೆಯಲಾರರು. ಅಂತಾದ್ದು ಸ್ವಾಮಿಯವರು, ತಾನು ಕರ್ಮಯೋಗಪದ್ಧತಿಯಲ್ಲಿ ಎಲ್ಲಾ ಕೆಲಸಗಳು ಮಾಡುತ್ತಾ, ತನ್ನ ಹತ್ತಿರದವರಿಂದ ಮಾಡಿಸುತ್ತಾ ಆ ಸಂಪಾದನೆಯಿಂದಲೇ ತನ್ನ ಬೆಲೆಯುಳ್ಳ ದೈವಜ್ಞಾನವನ್ನು ಮತಾತೀತವಾಗಿ ನಮಗೆ ನೀಡುತ್ತಿದ್ದಾರೆ, ಪ್ರಚಾರ ಮಾಡುತ್ತಿದ್ದಾರೆ.

ಈ ದಿನ ತಮ್ಮ ಪೀಠಗಳನ್ನು ವ್ಯಾಪಾರ, ಮತ ಕೇಂದ್ರಗಳಾಗಿ ಮಾಡುವ ಪೀಠಾಧಿಪತಿಗಳನ್ನು, ಬಿಡುವಿನಲ್ಲಿ ಗೋಲ್ಫ್ ಆಡಿಕೊಳ್ಳುತ್ತಾ, ಸೆಲಬ್ರಿಟೀಗಳಿಂದ ಯೋಗಾ ಹೆಸರಿನಿಂದ ಡ್ಯಾನ್ಸು ಮಾಡಿಸುವ ಸದ್ಗುರುಗಳನ್ನೂ, ಬಾಬಾಗಳನ್ನೂ, ಟಿವಿ ಷೋಗಳಲ್ಲಿ ಸೆಲಬ್ರಿಟಿಗಳ ಪ್ರಶ್ನೆಗಳಿಗೆ ಸಮಾಧಾನ ಹೇಳುವ ನೆಪದಿಂದ ತಮ್ಮನ್ನು ತಾವು ಪ್ರಚಾರ ಮಾಡಿಕೊಳ್ಳುವ ಕೆಲವರು ಸ್ವಾಮಿಗಳನ್ನು, ತಮ್ಮ ವೇದಗಳು, ಪುರಾಣಗಳು ತೋರಿಸಿ ತಮ್ಮ ಕಣ್ಣನ್ನೇ ತಿವಿಯುತ್ತಾ ಇಸ್ಲಾಮ್ ಮತ ಪ್ರಚಾರ ಮಾಡುವ ಇಸ್ಲಾಂ ಮತ ಬೋಧಕರನ್ನೂ, ದೇವರು ಹೇಳದ ಸ್ವಸ್ಥತೆ ಸಭೆಗಳು ಮಾಡುತ್ತಾ ವಾಕ್‌ಚಾತುರ್ಯದಿಂದ ಮತದೊಳಗೆ ಸೆಳೆಯುವ ಕ್ರೈಸ್ಥವ ಮತ ಬೋಧಕರನ್ನು ಪ್ರಜೆಗಳು ಸುಲಭವಾಗಿ ನಂಬುತ್ತಿದ್ದಾರೆ.

ತಮ್ಮ ಆರೋಗ್ಯವನ್ನು ಸಹಿತ ಲೆಕ್ಕಮಾಡದೆ, ದಿನಕ್ಕೆ ಎರಡು ಗಂಟೆಗಳು ಕೂಡಾ ಸರಿಯಾಗಿ ನಿದ್ರೆಹೋಗದಂತೆ, ನಾವು ಜ್ಞಾನವನ್ನು ತಿಳಿಯಬೇಕೆಂದು, ಸ್ವಂತ ಮತದವರೇ ಪರ ಮತಬೋಧನೆ ಎಂದು ಅರಚುತ್ತಿದ್ದರೂ, ದಾಳಿಗಳು ಮಾಡುತ್ತಿದ್ದರೂ **'ಹೆದರದೆ'** ಮುಸ್ಲಿಮ್‌ರು ಅವರ ಮತಪೂರಿತ ಮನೋ

ಭಾವನೆಗಳು ಆತಂಕಕ್ಕೊಳಗಾಗುತ್ತಿವೆಯೆಂದು ಎಚ್ಚರಿಸುತ್ತಿದ್ದರೂ **'ಬೆದರದೆ',** ಕ್ರೈಸ್ಥವ ಮತ ಬೋಧಕರ ಅಸೂಯೆಯಿಂದ ಕೂಡಿದ ಆರೋಪಣೆಗಳಿಗೆ **'ಜಗ್ಗದೆ'** ಸತ್ಯ ಪ್ರಕಟಣೆ ಧ್ಯೇಯವಾಗಿ, ಸರ್ವರನ್ನು ಸ್ವಧರ್ಮದ ಕಡೆ ನಡೆಸುತ್ತಾ, ಮೋಕ್ಷಗಾಮಿಗಳು ಆಗಬೇಕೆನ್ನುವ ಆಕಾಂಕ್ಷೆಯಿಂದ 90 ಸಂಚಲನಾತ್ಮಕ ಗ್ರಂಥಗಳನ್ನು, 200 ಉಪನ್ಯಾಸಗಳನ್ನು ತಿಳಿಸಿದ 'ಗುರು'ವಿಗೆ ನಾವು ಏನುಕೊಟ್ಟು ಋಣ ತೀರಿಸಿಕೊಳ್ಳುತ್ತೇವೆ!

ನಮ್ಮಿಂದ ಸ್ವಾಮಿಯವರು ಕೇಳುವುದು ಒಂದೇ. ಈ ದಿವ್ಯ ಗ್ರಂಥಗಳನ್ನು ಓದಿರಿ, ಬುದ್ಧಿ ವಿಚಕ್ಷಣೆಯಿಂದ ಸತ್ಯಾಸತ್ಯಗಳನ್ನು ಗ್ರಹಿಸಿರಿ. ಆತ್ಮ ಮೇಲೆ ಶ್ರದ್ಧೆ ಇಟ್ಟು, ದೇವರ ಜ್ಞಾನಕ್ಕೆ ಸಮಯವನ್ನು ನಿಗಧಿಪಡಿಸಿರಿ. ಸಾಧ್ಯವಾದರೆ ನಿಮ್ಮ ಸಹಪಾಠಿಗಳಿಗೆ ಈ ಜ್ಞಾನವನ್ನು ಪ್ರಚಾರ ಮಾಡಿರಿ.

ಮೇಲಿನ ಎಲ್ಲವುಗಳಿಂದ ನಮಗೆ 'ಉಪಯೋಗವೇ' ಹೊರತು... ಸ್ವಾಮಿಯವರಿಗೆ ಅಲ್ಲವೆಂದು ಗ್ರಹಿಸಿರಿ!!!

ಇಂತಿ

**ಶಿವಕೃಷ್ಣ (U.S.A)**

ಒಬ್ಬ ಶಿಷ್ಯ ಪರಮಾಣುವು

# ಮೊದಲ ಮಾತು

ರಚನಕಾರನಾಗಿ ನಾನು ಮೊದಲು ಹೇಳುವ ವಿಷಯವನ್ನು ನೀವು ಚೆನ್ನಾಗಿ ಗ್ರಹಿಸುತ್ತೀರೆಂದು ಅಂದುಕೊಳ್ಳುತ್ತೇನೆ. ಈ ದಿನ ಇರುವ ಸತ್ಯವನ್ನು ಹೇಳಿದರೆ, ಎಲ್ಲರೂ ದೇವರು ಎಂದು ಹೇಳುತ್ತಿದ್ದಾರೆ, ದೇವರ ಜ್ಞಾನ ನಾವು ಹೊಂದಿದ್ದೇವೆಂದು ಅನ್ನುತ್ತಿದ್ದಾರೆ. ಆದರೇ ಪ್ರತಿಯೊಬ್ಬರು ನಾನು ದೊಡ್ಡ ಜ್ಞಾನಿ ಎಂದು ಉಳಿದವರು ನನಗಿಂತ ಕಡಿಮೆ ತಿಳಿದವರೆಂದು ಅಂದುಕೊಳ್ಳುವುದು ನಡೆಯುತ್ತಿದೆ. ಸಾಧಾರಣ ಮನುಷ್ಯರೇ ಹಾಗೆ ಇರುವಾಗ ಕೆಲವರು ಗುರುಗಳಾಗಿ, ಬೋಧಕರಾಗಿರುವವರು ಉಳಿದ ಮತ ಬೋಧಕರಿಗಿಂತ, ಉಳಿದ ಮತ ಗುರುಗಳಿಗಿಂತ ನಾವೇ ದೊಡ್ಡವರೆಂದು, ನಮಗಿಂತ ಜ್ಞಾನ ತಿಳಿದವರು ಇಲ್ಲವೆಂದು ಅಂದುಕೊಳ್ಳುತ್ತಾ, ತಮ್ಮನ್ನು ತಾವು ಆಕಾಶದಷ್ಟು ಎತ್ತರದಲ್ಲಿ ಊಹಿಸಿಕೊಂಡು ತಾವೇ ದೊಡ್ಡವರೆಂದುಕೊಳ್ಳುತ್ತಿದ್ದಾರೆ. ಈ ದಿನ ಭೂಮಿಮೇಲೆ ಗುರುಗಳಾಗಿ, ಅವರ ಶಿಷ್ಯರಾಗಿರುವವರು ತಮಗೆ ತಾವು ಇತರರಿಗಿಂತ ತಿಳಿದವರೆಂದುಕೊಳ್ಳುವುದರಿಂದ ಜ್ಞಾನ ವಿಷಯದಲ್ಲಿ ಉಳಿದ ಮತದವರೊಂದಿಗೆ ವಿಭೇದಿಸುವುದು ನಡೆಯುತ್ತಿದೆ. ಅದರಿಂದ ಮತಸಾಮರಸ್ಯ ಇಲ್ಲದಂತೆಹೋಗಿ ಹಿಂಸಾ ಮಾರ್ಗಕ್ಕೆ ದಾರಿ ಮಾಡುತ್ತಿದೆ. ಆದ್ದರಿಂದ ಈ ದಿನ ದೇಶಗಳ ಮಧ್ಯ ವಿಭೇದಗಳು ಏರ್ಪಟ್ಟು ಯುದ್ಧ ವಾತಾವರಣ ಜಾಗ ಮಾಡಿಕೊಳ್ಳುತ್ತಿದೆ.

ದೇವರು ಮನುಷ್ಯರನ್ನು ಜ್ಞಾನಿಗಳನ್ನಾಗಿ ಮಾಡುವುದಕ್ಕೆ ಮಾಡಿದ ಪ್ರಯತ್ನದಲ್ಲಿ ಮನುಷ್ಯರ ಕೈಗೆ ಬಿಡಿಬಿಡಿಯಾಗಿ ಮೂರು ದೈವ ಗ್ರಂಥಗಳನ್ನು ಕೊಟ್ಟಿದ್ದಾನೆ. ಮೂರು ದೈವ ಗ್ರಂಥಗಳಲ್ಲಿ ಮೂರು ಕೋನಗಳಿಂದ ಒಂದೇ ದಿಕ್ಕನ್ನು ಸೂಚಿಸುವಂತೆ, ಮೂರು ಗ್ರಂಥಗಳು ಒಂದೇ ದೇವರನ್ನು ಸೂಚಿಸುವ ಜ್ಞಾನವನ್ನು ಬೋಧಿಸಿವೆ. ಆದರೇ ದೇವರು ಗ್ರಂಥರೂಪದಲ್ಲಿ ನೀಡಿದ ಜ್ಞಾನ ಮಾನವ ಶರೀರವನ್ನು ಹೋಲಿದಂತೆ ಶೇ. 40 ರಷ್ಟು ಸ್ಥೂಲವಾಗಿ, ಶೇ. 60 ರಷ್ಟು ಸೂಕ್ಷ್ಮವಾಗಿ ಇರುವುದರಿಂದ ಕೆಲವರಿಗೆ ಸ್ಥೂಲ ಜ್ಞಾನ ಅರ್ಥವಾದರೂ ಸೂಕ್ಷ್ಮಜ್ಞಾನ ಅರ್ಥವಾಗದಂತೆ ಹೋಗಿದೆ. ಸೂಕ್ಷ್ಮಜ್ಞಾನ ಅರ್ಥವಾಗಬೇಕೆಂದರೆ

ಅದು ಮನುಷ್ಯನಿಗೆ ದೇವರು ನೀಡಿದ ಬುದ್ಧಿ ಚತುರತೆಯನ್ನನುಸರಿಸಿ ಇರುತ್ತದೆ. ದೇವರು ತನಗೆ ಇಷ್ಟವಾದವರಿಗೇ ಬುದ್ಧಿ ಗ್ರಾಹಿತ ಶಕ್ತಿಯನ್ನು ಕೊಡುವುದರಿಂದ ದೇವರಿಗೆ ಇಷ್ಟರಾಗಿರುವವರಿಗೇ ದೇವರ ಜ್ಞಾನ ಅರ್ಥವಾಗಬಲ್ಲದು. ಒಟ್ಟಾರೆ ಸೂಕ್ಷ್ಮ ಜ್ಞಾನ ಅರ್ಥವಾದವನನ್ನೇ ನಿಜವಾದ ಜ್ಞಾನಿಯೆಂದು ಹೇಳಬಹುದು. ಸೂಕ್ಷ್ಮ ಜ್ಞಾನ ಅರ್ಥವಾಗದವನು ಪ್ರಪಂಚದಲ್ಲಿ ಎಷ್ಟು ದೊಡ್ಡ ಗುರುವಾದರೂ ಅವನನ್ನು ಅಜ್ಞಾನಿಯಾಗಿಯೇ ಲೆಕ್ಕಿಸಬಹುದು. ಈ ದಿನ ಕೆಲವರಿಗೆ ದೈವ ಗ್ರಂಥದಲ್ಲಿ ಸ್ಥೂಲ, ಸೂಕ್ಷ್ಮ ಜ್ಞಾನವಿರುವ ವಿಷಯ ಕೂಡಾ ತಿಳಿದಿಲ್ಲ.

ಈ ದಿನ ದೇವರ ಸೂಕ್ಷ್ಮ ಜ್ಞಾನವನ್ನು ತಿಳಿದವರು ಭೂಮಿಮೇಲೆ ಅಪರೂಪವಾಗಿದ್ದಾರೆ. ಅವರನ್ನು ಬಿಟ್ಟು ನೋಡಿದರೆ ಸ್ವಲ್ಪವೂ ಜ್ಞಾನ ತಿಳಿಯದವರು ಕೆಲವರಿರುವಾಗ, ದೇವರ ಸ್ಥೂಲ ಜ್ಞಾನವನ್ನು ತಿಳಿದವರು ಮಾತ್ರವೇ ಕೆಲವರಿದ್ದಾರೆ. ದೇವರ ಸ್ಥೂಲ ಜ್ಞಾನವನ್ನು ತಿಳಿದವರನ್ನು ಕೇವಲ ಶೇ.40 ರಷ್ಟು ಜ್ಞಾನ ಇರುವವರಾಗಿ ಲೆಕ್ಕಿಸಬಹುದು. ಸೂಕ್ಷ್ಮ, ಸ್ಥೂಲ ಎರಡು ಜ್ಞಾನಗಳನ್ನು ತಿಳಿದವರನ್ನು ಶೇ.ನೂರರಷ್ಟು ಜ್ಞಾನಿಗಳನ್ನಾಗಿ ಲೆಕ್ಕಿಸಬಹುದು. ಈ ದಿನ ಶೇ.ನೂರರಷ್ಟು ಜ್ಞಾನಿಗಳು ಬಹಳ ಕಡಿಮೆ ಇರುವಾಗ, ಹೆಚ್ಚಾಗಿರುವ ಸ್ಥೂಲ ಜ್ಞಾನ ಇರುವವರು ಸೂಕ್ಷ್ಮ ಜ್ಞಾನಿಗಳೊಂದಿಗೆ ಪೋಟಿಬಿದ್ದು ನಿಮಗಿಂತ ನಾವೇ ದೊಡ್ಡ ಜ್ಞಾನಿಗಳೆಂದು ಹೇಳುತ್ತಿದ್ದಾರೆ. ಶೇ.40 ರಷ್ಟು ಇರುವವರು ಶೇ. ನೂರರಷ್ಟು ಇರುವವರನ್ನು ನಿಮಗಿಂತ ನಾವೇ ದೊಡ್ಡವರೆಂದರೆ 100ಕ್ಕಿಂತ 40 ದೊಡ್ಡದು ಎನ್ನುವಂತಿರುತ್ತದೆ. ಇಂತಹ ಅಜ್ಞಾನ ದಶೆಯಲ್ಲಿರುವ ಮನುಷ್ಯರು ಅವರವರ ತಾರತಮ್ಯಗಳು ತಿಳಿಯುವಂತೆ ನಾವು ವಿವರವನ್ನು ಕೊಡುತ್ತಾ ಈ ಗ್ರಂಥವನ್ನು ಬರೆಯುವುದಾಗಿದೆ. ಇದನ್ನು ಓದಿದವರೆಲ್ಲಾ ಇದರಲ್ಲಿ ಹೇಳಿದ ಸತ್ಯವನ್ನು, ಅಸತ್ಯವನ್ನು ಗ್ರಹಿಸಬಲ್ಲರೆಂದು ತಿಳಿಸುತ್ತಿದ್ದೇನೆ,

ಇಂತಿ

**ಪ್ರಬೋಧಾನಂದ ಯೋಗೀಶ್ವರರು.**

# ಯಾವುದು ಸತ್ಯ – ಯಾವುದು ಅಸತ್ಯ

ಸತ್ಯ ಎಂದರೆ ಬದ್ಧವಾದುದೆಂದು, ಅಸತ್ಯವೆಂದರೇ ಅಬದ್ಧವಾದುದೆಂದು ಎಲ್ಲರಿಗೂ ತಿಳಿದಿದೆ. ಕಣ್ಣಿಗೆ ಕಾಣಿಸುವವಾಗಲಿ ಕಿವಿಗೆ ಕೇಳಿಸುವವಾಗಲಿ ಉಳಿದ ಮೂರು ಅವಯವಗಳಿಗು ತಿಳಿಯುವ ವಿಷಯಗಳೆಲ್ಲವೂ ಸಂಭವಿಸಿದ ಸಂಭವಗಳೆಲ್ಲ ಸತ್ಯವಾದವೆಂದು ಹೇಳಬಹುದು. ಸಂಭವಗಳು ಅಲ್ಲದಿರುವವೆಲ್ಲ ಅಸತ್ಯಗಳೆಂದು, ಅಬದ್ಧಗಳೆಂದು ಅಶಾಸ್ತ್ರಗಳೆಂದು ಹೇಳಬಹುದು. ಭೌತಿಕ ಶರೀರದಲ್ಲಿ ಹೊರಗಿನ ವಿಷಯಗಳನ್ನು ಗ್ರಹಿಸುವ ಐದು ಭೌತಿಕ ಅವಯವಗಳಿವೆ. ಅವುಗಳನ್ನು ಕ್ರಮವಾಗಿ ಹೇಳಿದರೆ 1) ಕಣ್ಣು 2) ಕಿವಿ 3) ಚರ್ಮ 4) ನಾಲಿಗೆ 5) ಮೂಗು. ಈ ಐದಲ್ಲದೆ ಅಭೌತಿಕವಾಗಿ ಮತ್ತೊಂದು ಗ್ರಹಿಸುವುದಿದೆ. ಅದನ್ನೇ 'ಬುದ್ಧಿ' ಎನ್ನುತ್ತಿದ್ದೇವೆ. ಮನುಷ್ಯನ ಶರೀರದಲ್ಲಿ ಬುದ್ಧಿಯಿದೆ ಆದರೆ ಅದು ಕಾಣಿಸುವುದಿಲ್ಲ.

ಐದು ಭೌತಿಕ ಗ್ರಹಿಸುವ ಭಾಗಗಳನ್ನು ಜ್ಞಾನೇಂದ್ರಿಯಗಳೆಂದು ಕರೆಯುತ್ತಿದ್ದೇವೆ. ಆರನೆಯದಾದ ಬುದ್ಧಿ ಶರೀರ ಅಂತರೇಂದ್ರಿಯ ಆಗಿರುವುದರಿಂದ ಅದು ಕಾಣಿಸುವುದಿಲ್ಲ, ಹಾಗೇ ಅದನ್ನು ಕುರಿತಾದ ವಿವರ ಯಾರಿಗೂ ತಿಳಿದಿಲ್ಲ. ಬುದ್ಧಿ ಗ್ರಹಿಸುವ ಕೆಲಸವನ್ನು ಒಂದನ್ನು ಮಾತ್ರವೇ ಮಾಡದೆ ಉಳಿದ ಕೆಲಸಗಳನ್ನು ಕೂಡಾ ಮಾಡುತ್ತಿರುವುದರಿಂದ ಬುದ್ಧಿ ವಿಷಯ ಎಲ್ಲರಿಗೂ ತಿಳಿಯದಂತೆ ಹೋಗಿದೆ. ಬುದ್ಧಿಯೊಂದಿಗೆ ಸಹ ಹೊರಗಿನ ಐದು ಇಂದ್ರಿಯಗಳು ತಿಳಿಸುವ ಸಮಾಚಾರ ಸತ್ಯವಾದುದು, ಆದರೇ ಅಸತ್ಯ ಕೂಡಾ ಅವಯವಗಳ ಹತ್ತಿರವೇ ಉಂಟಾಗುತ್ತಿದೆ. ಉದಾಹರಣೆಗೆ ಕಣ್ಣು ಸತ್ಯವನ್ನೇ ತೋರಿಸುತ್ತಿದ್ದರೂ, ಅದನ್ನು ಗ್ರಹಿಸುವುದರಲ್ಲಿ ಸತ್ಯವನ್ನು ಗ್ರಹಿಸಬಹುದು, ಅಸತ್ಯವನ್ನು ಗ್ರಹಿಸಬಹುದು. ಕಣ್ಣು ನೋಡುವಂತಹ ಅವಯವ ಮಾತ್ರ. ಕಣ್ಣು ನೋಡಿರುವುದನ್ನು ಗ್ರಹಿಸುವುದು ಶರೀರದೊಳಗಿನ ಬುದ್ಧಿ. ಕಣ್ಣು ಚಲನೆ ವಲನೆ ಇಲ್ಲದ ಹಗ್ಗವನ್ನು ನೋಡಿದರೂ ಒಳಗಿನ ಬುದ್ಧಿ ಅದನ್ನು ಹಾವಾಗಿ ಗ್ರಹಿಸಬಹುದು. ಆಗ ಸತ್ಯವಾದ ಹಗ್ಗ ಅಸತ್ಯವಾದ ಹಾವಾಗಿ ತಿಳಿಯುತ್ತಿದೆ.

ನೋಡುವ ಅವಯವವಾಗಲಿ ಕೇಳುವ ಅವಯವವಾಗಲಿ ಸತ್ಯವನ್ನೇ ನೋಡಿದರೂ, ಸತ್ಯವನ್ನೇ ಕೇಳಿದರೂ ಗ್ರಹಿಸುವ ಬುದ್ಧಿ ಅದನ್ನು ಸತ್ಯವಾಗಿಯೋ ಅಸತ್ಯವಾಗಿಯೋ ಗ್ರಹಿಸುತ್ತಿದೆ. ಕಣ್ಣು ತೋರಿಸಿರುವುದು ಸತ್ಯವಾದ ಹಗ್ಗವನ್ನೇ ಆದರೂ ಬುದ್ಧಿ ಅದನ್ನು ಅಸತ್ಯವಾದ ಹಾವಾಗಿ ತಿಳಿಸುತ್ತಿರುವುದರಿಂದ ಮನುಷ್ಯ ಸತ್ಯವನ್ನು ಬಿಟ್ಟು ಇರುವ ಹಗ್ಗವನ್ನು ಅಲ್ಲವೆಂದು ಇಲ್ಲದ ಹಾವನ್ನು ತಿಳಿಯುವುದರಿಂದ ಅಸತ್ಯವನ್ನು ತಿಳಿದಂತಾಗಿದೆ.

ಇದೇ ಪದ್ಧತಿಯಲ್ಲಿ ಮನುಷ್ಯನಾದ ಜೀವಿ ಪ್ರಪಂಚದಲ್ಲಿನ ಸತ್ಯಾಸತ್ಯಗಳನ್ನು ತಿಳಿಯುತ್ತಿದ್ದಾನೆ. ಬುದ್ಧಿ ಒದಗಿಸಿರುವುದನ್ನು ನಂಬುವುದರಿಂದ ಒಂದು ವಿಷಯದಲ್ಲಿ ಒಬ್ಬನೇ ಮನುಷ್ಯ ಸತ್ಯವಾದಿಯಾಗಿ, ಮತ್ತೊಂದು ವಿಷಯದಲ್ಲಿ ಅಸತ್ಯವಾದಿಯಾಗಿ ಉಳಿದುಹೋಗುತ್ತಿದ್ದಾನೆ. ಮನುಷ್ಯರೆಲ್ಲರೂ ಹೊರಗಿನ ಎಲ್ಲಾ ವಿಷಯಗಳನ್ನು ತಮಗಿರುವ ಐದು ಜ್ಞಾನೇಂದ್ರಿಯಗಳ ಮೂಲಕ ತಿಳಿಯುತ್ತಿರುತ್ತಾರೆ. ಹೊರಗೆ ತಿಳಿಯುವ ಎಲ್ಲಾ ವಿಷಯಗಳು ಯಥಾರ್ಥಗಳೇ ಆದರೂ, ಸತ್ಯಗಳೇ ಆದರೂ ಮನುಷ್ಯನಲ್ಲಿನ ಬುದ್ಧಿಯನ್ನು ಅನುಸರಿಸಿ ಆತನು ಸತ್ಯವನ್ನೊ ಅಸತ್ಯವನ್ನೊ ಗ್ರಹಿಸಬಹುದು. ಒಂದು ದಾರಿಯಲ್ಲಿ ಹತ್ತುಜನ ಹೋಗುವಾಗ ಕತ್ತಲಲ್ಲಿನ ಹಗ್ಗ ಕಾಣಿಸಿದರೂ ಅದು ಕದಲದಿರುವು ದರಿಂದ ಅದನ್ನು ಒಂಭತ್ತು ಜನರು ಹಗ್ಗವಾಗಿಯೇ ಗ್ರಹಿಸಿದ್ದಾರೆ. ಅವರಲ್ಲಿ ಒಬ್ಬನು ಮಾತ್ರ ವಕ್ರವಾಗಿ ತಿರುಗಿ ಬಿದ್ದಿರುವ ಹಗ್ಗದ ಆಕಾರವನ್ನು ಹಾವಾಗಿ ಗುರುತಿಸಿದ್ದಾನೆ. ಈ ವಿಧವಾಗಿ ಹತ್ತುಜನರಲ್ಲಿ ಕತ್ತಲಲ್ಲಿನ ಹಗ್ಗ ಒಂಭತ್ತು ಜನರಿಗೆ ಸತ್ಯವಾಗಿ, ಒಬ್ಬನಿಗೆ ಮಾತ್ರ ಅಸತ್ಯವಾಗಿ ತಿಳಿಯುವುದರಿಂದ ಒಂಭತ್ತು ಜನ ಹೇಳಿದ ಸತ್ಯವನ್ನು ಅಲ್ಲವೆಂದು ತನಗೆ ತಿಳಿದ ಅಸತ್ಯವನ್ನೇ ಸತ್ಯವೆಂದು ಒಬ್ಬನು ವಾದಿಸುವುದು ನಡೆದಿದೆ.

ಕತ್ತಲಲ್ಲಿನ ಹಗ್ಗವು ಕೆಲವರಿಗೆ ಸತ್ಯವಾಗಿ ಕಾಣಿಸಿದಾಗ ಒಬ್ಬನಿಗೆ ಅಸತ್ಯವಾಗಿ ಕಾಣಿಸಿದೆ ಅಲ್ಲವೆ! ಅದೇ ವಿಧವಾಗಿ ಐದು ಜ್ಞಾನೇಂದ್ರಿಯಗಳ ಮುಖಾಂತರ ತಿಳಿಯುವ ವಿಷಯಗಳೆಲ್ಲವನ್ನು ಮನುಷ್ಯ ಸತ್ಯವಾಗಿ ಕೆಲವನ್ನು

ಮತ್ತು ಅಸತ್ಯವಾಗಿ ಕೆಲವನ್ನು ಗ್ರಹಿಸುತ್ತಿದ್ದಾನೆ. ತನಗೆ ತಿಳಿದಿರುವುದನ್ನನುಸರಿಸಿ ಅಸತ್ಯವನ್ನು ಕೂಡಾ ಸತ್ಯವೆಂದು ವಾದಿಸುತ್ತಿದ್ದಾನೆ. ಹೊರಗೆ ಕಾಣಿಸುವ ಪ್ರತ್ಯಕ್ಷ ಭೌತಿಕ ವಿಷಯಗಳಲ್ಲಿಯೇ ಈ ವಿಧವಾಗಿ ಬುದ್ಧಿಯಿಂದ ಸತ್ಯವನ್ನೇ ಅಲ್ಲದೆ ಅಸತ್ಯವನ್ನು ಹೊಂದುವ ಅವಕಾಶವಿದೆ. ಹಾಗಿರುವಾಗ ಪರೋಕ್ಷ ವಿಷಯವಾದ, ಅಭೌತಿಕ ವಿಷಯವಾದ ಆಧ್ಯಾತ್ಮಿಕ ವಿಷಯದಲ್ಲಿ ಸತ್ಯವನ್ನು ಹೊಂದುವ ಅವಕಾಶ ಬಹಳ ಕಡಿಮೆ, ಅಸತ್ಯವನ್ನು ಹೊಂದುವ ಅವಕಾಶ ಬಹಳ ಹೆಚ್ಚಾಗಿದೆ. ಈ ದಿನ ಆಧ್ಯಾತ್ಮಿಕ (ಆತ್ಮ ಅಧ್ಯಯನ) ವಿಷಯಗಳಲ್ಲಿ ಅಂದರೇ ದೈವಜ್ಞಾನ ವಿಷಯಗಳಲ್ಲಿ ಇರುವ ಸತ್ಯವನ್ನು ಬಹಳಜನ ತಿಳಿಯಲಾರದೆಹೋಗುತ್ತಿದ್ದಾರೆ. ದೈವ ವಿಷಯದಲ್ಲಿ ಸತ್ಯವಾದ ಭಾವವನ್ನು ಅಪರೂಪವಾಗಿ ಬಹು ಸ್ವಲ್ಪಜನ ಮಾತ್ರವೇ ಗ್ರಹಿಸುತ್ತಿದ್ದಾರೆ. ಬುದ್ಧಿಗೆ ಗ್ರಹಿಸುವ ಶಕ್ತಿ ಒಬ್ಬೊಬ್ಬ ಮನುಷ್ಯನಲ್ಲಿ ಒಂದೊಂದು ವಿಧವಾಗಿರುತ್ತದೆ. ಬುದ್ಧಿ ಸ್ಥೂಲವಾದುದಲ್ಲ, ಸೂಕ್ಷ್ಮವಾದುದು. ಆದ್ದರಿಂದ ಬುದ್ಧಿಗಿರುವ ಗ್ರಹಿಸುವ ಶಕ್ತಿ ಶರೀರದಲ್ಲಿ ಸೂಕ್ಷ್ಮವಾಗಿ ತಿಳಿಯದಂತಿರುವ ಆತ್ಮದಿಂದಲೇ ಲಭಿಸುತ್ತಿದೆ. ಎಲ್ಲ ಶರೀರದಲ್ಲಿರುವ ಆತ್ಮ ಅವರವರ ಬುದ್ಧಿಗೆ ಗ್ರಾಹಿತ ಶಕ್ತಿಯನ್ನು ಕೊಡುತ್ತಿದೆ. ಆದ್ದರಿಂದ ಇದೇ ವಿಷಯವನ್ನೇ ಭಗವದ್ಗೀತೆ ಪುರುಷೋತ್ತಮ ಪ್ರಾಪ್ತಿ ಯೋಗ ಎನ್ನುವ ಅಧ್ಯಾಯದಲ್ಲಿ 15ನೇ ಶ್ಲೋಕದಲ್ಲಿ ಈ ವಿಧವಾಗಿ ಹೇಳಿದ್ದಾರೆ.

**ಶ್ಲೋ॥ 15: ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟೋ ಮತ್ತಃಸ್ಮೃತಿರ್ ಜ್ಞಾನ ಮಪೋಹನಂಚ।**
**ವೇದೈಶ್ಚ ಸರ್ವೈರಹ ಮೇವ ವೇದ್ಯೋ ವೇದಾನ್ತಕೃ ದ್ವೇದವಿ ದೇವ ಚಾಹಮ್॥**

ಐದು ಇಂದ್ರಿಯಗಳ ಮುಖಾಂತರ ಮನುಷ್ಯ ತಿಳಿದುಕೊಳ್ಳುತ್ತಿರುವ ವಿಷಯಗಳು ಎರಡು ವಿಧಗಳಿವೆ. ಹೆಚ್ಚಿನ ವಿಷಯಗಳು ಸ್ಥೂಲ ವಿಷಯಗಳು, ಕಡಿಮೆ ವಿಷಯಗಳು ಸೂಕ್ಷ್ಮ ವಿಷಯಗಳು. ಸ್ಥೂಲ ವಿಷಯಗಳನ್ನು ಯಾರಾದರೂ ತಿಳಿಯಬಹುದು. ಸೂಕ್ಷ್ಮ ವಿಷಯಗಳು ಎಲ್ಲರೂ ತಿಳಿಯಲಾರರು. ಕೆಲವರು ಮಾತ್ರವೇ ತಿಳಿಯಬಲ್ಲರು. ಭೌತಿಕವಾದ ಪ್ರತ್ಯಕ್ಷ ಸ್ಥೂಲ ವಿಷಯಗಳು, ಅಭೌತಿಕವಾದ ಪರೋಕ್ಷ ಸೂಕ್ಷ್ಮ ವಿಷಯಗಳೆಂದು ಎರಡು ವಿಧಗಳೆನ್ನುವವುಗಳಲ್ಲಿ

ಸೂಕ್ಷ್ಮ ವಿಷಯಗಳು ಮೇಧಾವಿಗಳಿಗೆ ಹೊರತು ಉಳಿದವರಿಗೆ ಅರ್ಥ ಆಗುವುದಿಲ್ಲ. ಸ್ಥೂಲ, ಸೂಕ್ಷ್ಮಗಳು ಪ್ರಪಂಚವೆಲ್ಲಾ ತುಂಬಿವೆ. ಮನುಷ್ಯನ ಶರೀರದಲ್ಲಿ ಹತ್ತು ಭಾಗಗಳು ಸ್ಥೂಲವಾಗಿದ್ದು, ಹದಿನೈದು ಭಾಗಗಳು ಸೂಕ್ಷ್ಮವಾಗಿವೆ. ಇದನ್ನನುಸರಿಸಿ ಸೂಕ್ಷ್ಮಗಳು ಇಲ್ಲವೆಂದು ಹೇಳಲಾರೆವು. ಮನುಷ್ಯನಲ್ಲಿನ 25 ಭಾಗಗಳಲ್ಲಿ ಅರ್ಧಕ್ಕಿಂತ ಮೇಲ್ಪಟ್ಟು ಹದಿನೈದು ಭಾಗಗಳು ಸೂಕ್ಷ್ಮಗಳಿರುವಾಗ ಆತ್ಮ ವಿಷಯದಲ್ಲಿ ಮತ್ತು ಪರಮಾತ್ಮ ವಿಷಯದಲ್ಲಿ ಎಲ್ಲಾ ಸೂಕ್ಷ್ಮ ವಿಷಯಗಳೇ ಇವೆ.

ಆದ್ದರಿಂದ ಆತ್ಮ, ಪರಮಾತ್ಮರ ಜ್ಞಾನವೆಲ್ಲವೂ ಸೂಕ್ಷ್ಮದಿಂದಲೇ ಕೂಡಿಕೊಂಡಿರುತ್ತದೆ. ಜೀವಾತ್ಮ, ಆತ್ಮ, ಪರಮಾತ್ಮರ ವಿಷಯವನ್ನು ಹೇಳುತ್ತಿರುವ ಮೂರು ದೈವ ಗ್ರಂಥಗಳು ಕಡಿಮೆ ಸ್ಥೂಲ ಹೆಚ್ಚಾಗಿ ಸೂಕ್ಷ್ಮದಿಂದ ಕೂಡಿ ಕೊಂಡಿರುತ್ತವೆ. ಪ್ರಥಮ ದೈವಗ್ರಂಥವಾದ ಭಗವದ್ಗೀತೆ, ದ್ವಿತೀಯ ದೈವಗ್ರಂಥವಾದ ಬೈಬಲ್, ಅಂತಿಮ ದೈವಗ್ರಂಥವಾದ ಖುರ್‌ಆನ್ ಮೂರು ಶೇ.40 ರಷ್ಟು ಸ್ಥೂಲ ವಿಷಯಗಳು, ಶೇ.60 ರಷ್ಟು ಸೂಕ್ಷ್ಮ ವಿಷಯಗಳಿಂದ ಕೂಡಿಕೊಂಡಿವೆ. ಆದ್ದರಿಂದ ಸೂಕ್ಷ್ಮ ವಿಷಯಗಳನ್ನು ಗ್ರಹಿಸಲಾರದವರು ಮೂರು ದೈವ ಗ್ರಂಥಗಳಲ್ಲಿನ ವಿಷಯಗಳನ್ನು ತಿಳಿಯಲಾರರು. ಕೇವಲ ಅವರ ಶರೀರದಲ್ಲಿನ ದೇವರು ಅವರಿಗೆ ಸೂಕ್ಷ್ಮ ವಿಷಯಗಳ ವಿವರವನ್ನು ನೀಡಿದರೇನೆ ಅವರು ಮೂರು ಗ್ರಂಥಗಳಲ್ಲಿ ನಿಕ್ಷಿಪ್ತವಾಗಿರುವ ಜ್ಞಾನ ತಿಳಿಯಬಲ್ಲರು. ಕೆಲವರು ಗ್ರಂಥದಲ್ಲಿನ ವಿಷಯಗಳನ್ನು ಸ್ಥೂಲವಾಗಿಯೇ ಹೇಳಿಕೊಳ್ಳುತ್ತಿರುತ್ತಾರೆ. ಅದರಿಂದ ಅವರು ಹೊರಗೆ ಎಷ್ಟು ದೊಡ್ಡವರಾದರೂ ಗ್ರಂಥಗಳಲ್ಲಿನ ಜ್ಞಾನವನ್ನು ತಿಳಿಯಲಾರರು. ಅಂತಹವರು ತಾವು ಜ್ಞಾನಿಗಳೆಂದು ಹೇಳಿಕೊಳ್ಳುತ್ತಿದ್ದರೂ ಅವರು ಜ್ಞಾನ ಶೂನ್ಯರೇ ಎಂದು ಹೇಳಬಹುದು.

**ಪ್ರಶ್ನೆ :– ನೀವು ತ್ರಿಮತ ಗುರುಗಳಾಗಿ ಹೇಳಲ್ಪಡುತ್ತಿದ್ದೀರ ಅಲ್ಲವೆ! ನಿಮಗೆ ಮೂರು ಗ್ರಂಥಗಳ ಸೂಕ್ಷ್ಮ ಜ್ಞಾನ ತಿಳಿಯುತ್ತದಾ?**

**ಉತ್ತರ :–** ಮೂರು ಗ್ರಂಥಗಳ ಸೂಕ್ಷ್ಮ ಜ್ಞಾನ ತಿಳಿದಾಗಲೇ ಯಾವ ಮನುಷ್ಯನಾದರೂ ಸಂಪೂರ್ಣ ಜ್ಞಾನಿ ಆಗುತ್ತಾನೆ. ಮೂರು ದೈವ ಗ್ರಂಥಗಳ ಜ್ಞಾನ ಸಮಾನವೇಯೆಂದು, ಮೂರು ದೈವ ಗ್ರಂಥಗಳು ಒಂದೇ ಜ್ಞಾನವನ್ನು ಬೋಧಿಸುತ್ತಿವೆಯೆಂದು, ಮೂರು ದೈವ ಗ್ರಂಥಗಳು ಒಂದೇ ದೇವರನ್ನು ಕುರಿತು ಬೋಧಿಸುತ್ತಿವೆಯೆಂದು ತಿಳಿದಾಗಲೇ ಯಾವ ಮನುಷ್ಯನಾದರೂ ದೈವಮಾರ್ಗದಲ್ಲಿ ಇದ್ದಂತಾಗುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿ ಸ್ವಾಮೀಜಿಯಾಗಾಗಲಿ, ಗುರುವಾಗಿ ಆದರೂ ಇತರರಿಂದ ಕರೆಯಲ್ಪಡುತ್ತಿರುವಾಗ ಆ ವ್ಯಕ್ತಿ ಮೂರು ದೈವಗ್ರಂಥಗಳ ಜ್ಞಾನ ತಿಳಿದಿರಬೇಕು. ಒಂದು ಗ್ರಂಥವನ್ನು ಮಾತ್ರ ತಿಳಿದು, ಒಂದು ಮತವನ್ನು ಕುರಿತು ಹೇಳುವ ವ್ಯಕ್ತಿ ಯಾರಾದರೂ ಜ್ಞಾನಿ ಎಂದು ಕರೆಯಲ್ಪಡುವುದಕ್ಕೆ ಅರ್ಹನಲ್ಲ. ಅವನು ಯಾವ ಧರ್ಮವನ್ನು ತಿಳಿಯದವನೇ ಯೆಂದು ಹೇಳಬಹುದು. ನಾನು ಮೂರು ದೈವಗ್ರಂಥಗಳ ಜ್ಞಾನವನ್ನು ತಿಳಿಯದೇ ಜ್ಞಾನಿಯಾಗಿ ಚಲಾವಣೆ ಆಗುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ನಾನು ಮೂರು ದೈವ ಗ್ರಂಥಗಳ ಜ್ಞಾನವನ್ನು ಸ್ಪಷ್ಟವಾಗಿ ತಿಳಿದಿದ್ದೇನೆಂದು ಹೇಳದೆ ತಪ್ಪುವುದಿಲ್ಲ. ಮೂರು ದೈವ ಗ್ರಂಥಗಳಲ್ಲಿ ಯಾವ ಗ್ರಂಥದಲ್ಲಿನ ವಾಕ್ಯವನ್ನು ಕೇಳಿದರೂ ನಾನು ಸುಲಭವಾಗಿ ವಿವರಿಸಿ ಹೇಳಬಲ್ಲೆನು.

**ಪ್ರಶ್ನೆ :– ಪ್ರಥಮ ದೈವ ಗ್ರಂಥವಾದ ಭಗವದ್ಗೀತೆ ಹಿಂದೂಮತಕ್ಕೆ, ಹಾಗೆ ದ್ವಿತೀಯ ದೈವ ಗ್ರಂಥವಾದ ಬೈಬಲ್ ಕ್ರೈಸ್ಥವ ಮತಕ್ಕೆ, ಅಂತಿಮ ದೈವ ಗ್ರಂಥವಾದ ಖುರ್‌ಆನ್ ಇಸ್ಲಾಮ್ ಮತಕ್ಕೆ ಮುಖ್ಯ ಗ್ರಂಥಗಳಾಗಿ ಆ ಮತಗಳಿಗೆ ಮಾರ್ಗ ದರ್ಶಕಗಳಾಗಿ, ಆಯಾ ಮತ ಗ್ರಂಥಗಳಾಗಿ ಹೇಳಲ್ಪಡುತ್ತಿವೆ ಅಲ್ಲವೆ! ಹಾಗಿರುವಾಗ ನೀವು ಹಿಂದೂಮತದಲ್ಲಿ ಹುಟ್ಟಿದವನಾಗಿರುವುದರಿಂದ ನೀವು ಭಗವದ್ಗೀತೆಯನ್ನಾಗಲಿ, ಹಿಂದೂ ಮತವನ್ನಾಗಲಿ, ಹೇಳಬಹುದು. ಆದರೆ ಉಳಿದ ಎರಡು ಮತ ಗ್ರಂಥಗಳಾದ ಬೈಬಲ್, ಖುರ್‌ಆನ್ ಗ್ರಂಥಗಳಲ್ಲಿನ ಜ್ಞಾನ ನಿಮಗೆ ಹೇಗೆ ಅರ್ಥ ವಾಗುತ್ತದೆ? ಆ ಗ್ರಂಥಗಳ ವಾಕ್ಯಗಳ ವಿವರ ನಿಮಗೆ ಹೇಗೆ ತಿಳಿಯುತ್ತದೆ? ನೀವು ಆ ಗ್ರಂಥಗಳನ್ನು ಎಲ್ಲಿ ಕಲಿತಿದ್ದೀರ? ಯಾರ ಹತ್ತಿರ ತರಭೇತಿ ಪಡೆದಿದ್ದೀರ?**

**ಉತ್ತರ :–** ನಾನು ಯಾವ ಮತ ಗುರುಗಳ ಹತ್ತಿರ ತರಭೇತಿ ಪಡೆಯುವುದಾಗಲಿ, ಅವರ ಬೋಧನೆಗಳು ಕೇಳುವುದಾಗಲಿ ನಡೆಯಲಿಲ್ಲ. ಆದ್ದರಿಂದ ನನ್ನೊಬ್ಬನಲ್ಲಿ ಮತಗಳಿಗೆ ಅತೀತವಾದ ಜ್ಞಾನ ಉಂಟಾಗಿದೆ. ಯಾವ ಮತದಲ್ಲಿನ ವಾಕ್ಯಗಳಿಗಾದರೂ ಜ್ಞಾನ ವಿವರವನ್ನು ಹೇಳುತ್ತಿದ್ದೇನೆ. ಹಾಗೆ ಹೇಳುವುದಕ್ಕೆ ಕಾರಣ ಒಂದೇವೊಂದು ಇದೆ. ಅದು ಏನೆಂದರೆ! ನಾನು ಮೊಟ್ಟಮೊದಲು ಭಗವದ್ಗೀತೆ ಗ್ರಂಥವನ್ನು ಓದಿ ಅರ್ಥಮಾಡಿಕೊಂಡಿದ್ದೇನೆ. ಆದ್ದರಿಂದ ಉಳಿದ ದೈವ ಗ್ರಂಥಗಳಿಗೆ ವಿವರ ಸುಲಭವಾಗಿ ಹೇಳುತ್ತಿದ್ದೇನೆ.

**ಪ್ರಶ್ನೆ :– ನಿಮ್ಮಹಾಗೆ ಬಹಳಜನ ಭಗವದ್ಗೀತೆಯನ್ನು ಓದಿದ್ದಾರೆ ಅಲ್ಲವೆ! ಅವರಿಗ್ಗೇಕೆ ನಿಮಗೆ ತಿಳಿದ ಜ್ಞಾನ ತಿಳಿಯಲಿಲ್ಲ? ಮೂರು ಗ್ರಂಥಗಳ ವಿವರ ಹೇಳಲಿಲ್ಲ?**

**ಉತ್ತರ :–** ಅವರು ಮೊದಲು ಸ್ವಲ್ಪ ಬೇರೆಬೇರೆ ಜ್ಞಾನಗಳನ್ನು ಕೇಳಿದ ನಂತರ ಭಗವದ್ಗೀತೆಯನ್ನು ಓದಿದ್ದಾರೆ. ಮೊಟ್ಟಮೊದಲನೆಯದಾಗಿ ಭಗವದ್ಗೀತೆಯನ್ನು ಅವರು ಓದಲಿಲ್ಲ. ಇತರರು ಹೇಳಿದ ಭಗವದ್ಗೀತೆಯನ್ನು ಮೊದಲು ಕೇಳುವುದರಿಂದ ಹೇಳಿದವರ ಭಾವನೆಗಳು ಕೇಳಿದವರಲ್ಲಿ ಕೂಡಾ ಸೇರುತ್ತಿವೆ. ನಾನು ಹಾಗಲ್ಲ, ಯಾವ ಜ್ಞಾನ ತಿಳಿಯದಮೊದಲು, ಯಾರ ಜ್ಞಾನವನ್ನು ಕೇಳದಮೊದಲು ಭಗವದ್ಗೀತೆಯನ್ನು ಓದಿದ್ದೇನೆ. ಆದ್ದರಿಂದ ಎಲ್ಲರಿಗಿಂತ ಸತ್ಯವಾದ ವಿಧಾನದಲ್ಲಿ ಭಗವದ್ಗೀತೆ ಅರ್ಥವಾಗಿದೆ. ಭಗವದ್ಗೀತೆಯಲ್ಲಿನ ರಹಸ್ಯವೆಲ್ಲವೂ ನನ್ನಿಂದಲೇ ವಿವರವಾಗಿ ತಿಳಿಯುವುದು ನಡೆದಿದೆ. ಭಗವದ್ಗೀತೆಯಲ್ಲಿ ಮುಖ್ಯವಾದ **ತ್ರೈತ ಸಿದ್ಧಾಂತ** ತಿಳಿಯಲ್ಪಟ್ಟಿದೆ. ಯಾವಾಗಾದರೆ ತ್ರೈತ ಸಿದ್ಧಾಂತ ತಿಳಿದಿದೆಯೋ ಆಗಲೇ ದೇವರ ನಿಜವಾದ ಜ್ಞಾನ ಸಂಪೂರ್ಣ ವಾಗಿ ತಿಳಿದುಹೋಗಿದೆ. ಆ ದಿನದಿಂದ ನಾನು ದೇವರ ಜ್ಞಾನವನ್ನು ತಿಳಿದಿದ್ದೇನೆ ಎನ್ನುವ ಧೈರ್ಯ ಬಂದಿದೆ. ನಂತರ ಸ್ವಲ್ಪ ಕಾಲಕ್ಕೆ ಬೈಬಲ್ ಓದಿದ್ದೇನೆ ಆಗ ಬೈಬಲ್‌ನಲ್ಲಿನ ಸತ್ಯ ಜ್ಞಾನ ಕ್ರೈಸ್ಥರಿಗಿಂತ ನನಗೆ ಚೆನ್ನಾಗಿ ಅರ್ಥವಾಗಿದೆ. ನಂತರ ಖುರ್‌ಆನ್ ಓದಿದ್ದೇನೆ ಆಗ ಖುರ್‌ಆನ್‌ನಲ್ಲಿರುವ ದೈವಜ್ಞಾನ ಎಲ್ಲರಿಗಿಂತ ಚೆನ್ನಾಗಿ ಅರ್ಥವಾಗಿದೆ. ಹಾಗೆ ಅರ್ಥವಾಗುವುದಕ್ಕೆ ಕಾರಣ ನನ್ನಲ್ಲಿರುವ

ಆತ್ಮವೇ ನನಗೆ ಸರಿಯಾದ ದಾರಿತೋರಿಸಿ ಸರಿಯಾದ ಜ್ಞಾನವನ್ನು ತಿಳಿಸಿದೆಯೆಂದು ತಿಳಿದಿದೆ. ಆ ದಿನದಿಂದ ನನಗೆ ತಿಳಿದಿರುವ ಜ್ಞಾನವನ್ನು ಮತಗಳಿಗೆ ಅತೀತವಾಗಿ ಬೋಧಿಸುತ್ತಿದ್ದೇನೆ. ಆದರೆ ನನ್ನ ಜ್ಞಾನ ಬಹಳ ಜನರಿಗೆ ಅರ್ಥವಾಗಿದೆ, ಸ್ವಲ್ಪಜನರಿಗೆ ಮಾತ್ರ ಅರ್ಥವಾಗಲಿಲ್ಲ. ಕೆಲವರಿಗೆ ಅರ್ಥವಾದರೂ ಮತವನ್ನು ಅಡ್ಡ ಇಟ್ಟುಕೊಂಡು ನಮ್ಮನ್ನು ವಿಮರ್ಶಿಸುತ್ತಿದ್ದಾರೆ.

**ಪ್ರಶ್ನೆ :– ನಿಮಗೆ ಯಾವ ಮತದಿಂದ ವಿಮರ್ಶೆಗಳು ಬಂದಿವೆ?**

**ಉತ್ತರ :–** ಒಂದು ಮತ ಎನ್ನುವುದು ಇಲ್ಲದಂತೆ ಹಿಂದೂ, ಕ್ರೈಸ್ಥವ, ಇಸ್ಲಾಮ್ ಎನ್ನುವ ಮೂರು ಮತಗಳಿಂದ ವಿಮರ್ಶೆಗಳು ಬಂದಿವೆ. ನಾವು ಬರೆದ ಗ್ರಂಥವನ್ನು ಪೂರ್ತಿ ಓದಿದರೆ ಯಾರೂ ವಿಮರ್ಶಿಸುವುದಕ್ಕೆ ಸಾಧ್ಯವಿಲ್ಲ. ಆದರೆ ಕೆಲವರು ಪೂರ್ತಿ ಓದದೆ ಮಧ್ಯದಲ್ಲಿ ಅಲ್ಲಲ್ಲಿ ಓದಿದವರೆ ನಮ್ಮನ್ನು ವಿಮರ್ಶಿಸಿದ್ದಾರೆ. ಅವರ ಎಲ್ಲಾ ವಿಮರ್ಶೆಗಳಿಗೆ ನನ್ನ ಹತ್ತಿರ ಸಮಾಧಾನ ಇದೆ. ಆದರೆ ಅವರು ಸಮಾಧಾನಕ್ಕಾಗಿ ವಿಮರ್ಶಿಸದೆ ಅವರ ಮತಕ್ಕಾಗಿ ವಿಮರ್ಶಿಸುತ್ತಿದ್ದಾರೆ. ಮತವನ್ನು ತೋರಿಸಿ ನಮ್ಮನ್ನು ಅಜ್ಞಾನಿಗಳನ್ನಾಗಿ ಹೇಳಬೇಕೆಂದುಕೊಂಡಿದ್ದಾರೆ. ಅಂತಹವರು ಹೇಳಿದರೂ ಕೇಳುವುದಿಲ್ಲ. ಅವರ ದಾರಿ ಅವರಿಗೆ ಒಳ್ಳೆಯದಾಗಿಯೇ ತೋಚುತ್ತಿರುತ್ತದೆ. ಅವರು ಮತ ಎನ್ನುವ ಮಾಯೆಯಲ್ಲಿ ಸಿಲುಕಿಕೊಂಡಿದ್ದಾರೆ. ಆದ್ದರಿಂದ ಅವರನ್ನು ಕುರಿತು ಅವರ ವಿಮರ್ಶೆಗಳನ್ನು ಕುರಿತು ನಾವು ಯಾವುದು ತಲೆ ಕೆಡಿಸಿಕೊಳ್ಳುತ್ತಿಲ್ಲ. ನಾನು ಹಿಂದೂವಾಗಿ ಹುಟ್ಟಿದರೂ ಮೂರು ಮತ ಗ್ರಂಥಗಳನ್ನು ಸಮನ್ವಯ ಮಾಡಿ ಹೇಳುತ್ತಿದ್ದೇವೆ. ಮೂರು ಮತಗಳನ್ನು ಸಮಾನವಾಗಿಯೇ ನೋಡುತ್ತಿದ್ದೇವೆ. ಮತಾಂತರಗಳನ್ನು ವಿರೋಧಿಸುತ್ತಿದ್ದೇವೆ. ಯಾವ ಮತದವರು ಆ ಮತದಲ್ಲಿಯೇ ಇರಬೇಕೆಂದು ಹೇಳುತ್ತಿದ್ದೇವೆ. ಆದರೂ ಹಿಂದೂಗಳು ನಮ್ಮನ್ನು ಕ್ರೈಸ್ಥರಕೆಳಗೆ ಜಮಕಟ್ಟಿ ಮಾತನಾಡಿದಾಗ, ಮುಸ್ಲಿಮ್‌ರು ನಮ್ಮನ್ನು ಹಿಂದೂ ಮತ ಅಭಿಮಾನಿಗಳಾಗಿ ಹೇಳಿದಾಗ, ಕ್ರೈಸ್ಥರು ತಮ್ಮ ಮತ ದ್ವೇಷಕರಾಗಿ ಮುಸ್ಲಿಮ್ ಅಭಿಮಾನಿಗಳನ್ನಾಗಿ ಪ್ರಶಂಶಿಸಿದ್ದಾರೆ. ಹೇಗೊ ಮಾಡಿ ನಮ್ಮನ್ನು ಅವರ ದಾರಿಗೆ ಆತಂಕ ಉಂಟುಮಾಡುವವರನ್ನಾಗಿ ವರ್ಣಿಸಿ ಹೇಳುತ್ತಿದ್ದಾರೆ.

**ಪ್ರಶ್ನೆ :– ನೀವು ಹಿಂದೂ ಮತ ಗ್ರಂಥವಾದ ಭಗವದ್ಗೀತೆಗೆ ವಿವರವನ್ನು ಬರೆದಿದ್ದೀರ. ಅಲ್ಲಿಗೆ ಸುಮ್ಮನಾಗದೆ ಮುಸ್ಲಿಮ್‌ರ ಗ್ರಂಥವಾದ ಖುರ್‌ಆನ್‌ನಲ್ಲಿನ ಕೆಲವು ವಾಕ್ಯಗಳಿಗು, ಕ್ರೈಸ್ಥರ ಗ್ರಂಥವಾದ ಬೈಬಲ್‌ನಲ್ಲಿನ ಕೆಲವು ವಾಕ್ಯಗಳಿಗು ವಿವರ ಬರೆದಿದ್ದೀರ. ನೀವು ಬರೆದ ವಿವರ ಸರಿಯಾದುದೇ ಆದರೂ ಎಲ್ಲರೂ ಅಲ್ಲದೇ ಕೆಲವರು ಮುಸ್ಲಿಮ್‌ರು ಅದು ಸರಿಯಾದ ಭಾವನೆ ಅಲ್ಲವೆಂದು ಅನ್ನುತ್ತಿದ್ದಾರೆ ಅಲ್ಲವೆ! ಇದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** ನಾನು ಪ್ರಥಮ ದೈವಗ್ರಂಥವಾದ ಭಗವದ್ಗೀತೆಯನ್ನು ಕುರಿತು ಮೊದಲಿನಿಂದ ಕೊನೆಯವರೆಗು ಶ್ಲೋಕಗಳಿಗೆ ಭಾವವನ್ನು ಬರೆದಿರುವುದು ನಿಜ. ಆದರೆ ಅಂತಿಮ ದೈವ ಗ್ರಂಥವಾದ ಖುರ್‌ಆನ್ ಗ್ರಂಥಕ್ಕೆ ಅಲ್ಲಲ್ಲಿ ಕೆಲವು ವಾಕ್ಯಗಳಿಗೆ ಮಾತ್ರವೇ ವಿವರವನ್ನು ಬರೆದಿದ್ದೇವೆ ಹೊರತು ಖುರ್‌ಆನ್ ಒಟ್ಟಾರೆ ಗ್ರಂಥಕ್ಕೆ ವಿವರವನ್ನು ಬರೆಯಲಿಲ್ಲ. **"ಅಂತಿಮ ದೈವಗ್ರಂಥದಲ್ಲಿ ಜ್ಞಾನ ವಾಕ್ಯಗಳು"** ಎನ್ನುವ ಒಂದು ಗ್ರಂಥವನ್ನು ಮೂರು ವರ್ಷಗಳ ಕೆಳಗೇ ಬರೆದಿದ್ದೇವೆ. ಪ್ರಸ್ತುತ **"ಅಂತಿಮ ದೈವ ಗ್ರಂಥದಲ್ಲಿ ವಜ್ರ ವಾಕ್ಯಗಳು"** ಎನ್ನುವ ಗ್ರಂಥವನ್ನು ಬರೆಯುತ್ತಿದ್ದೇವೆ. ಎರಡು ಗ್ರಂಥಗಳಲ್ಲಿನ ವಾಕ್ಯಗಳೆಲ್ಲವನ್ನು ಸೇರಿಸಿದರೂ ನಾಲ್ಕು ನೂರು ಕೂಡಾ ಇಲ್ಲ. ಎಲ್ಲಾದರೆ ಸೂಕ್ಷ್ಮ ವಾಕ್ಯಗಳು ಇವೆಯೋ, ಎಲ್ಲಾದರೆ ಖುರ್‌ಆನ್ ವಾಕ್ಯಗಳನ್ನು ಮುಸ್ಲಿಮ್‌ರು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೊ ಅಲ್ಲಿ ಆ ವಾಕ್ಯಗಳಿಗೆ ಮಾತ್ರವೇ ನಾವು ಸರಿಯಾದ ವಿವರವನ್ನು ಕೊಡುವುದು ನಡೆದಿದೆ. ಹಾಗೆ ನಾವು ವಿವರಿಸಿ ಹೇಳಿದ ವಾಕ್ಯಗಳನ್ನು ಗ್ರಹಿಸಿಕೊಳ್ಳುವ ಗ್ರಾಹಿತ ಶಕ್ತಿ ಇಲ್ಲದವರು, ನಾವು ಬರೆದ ಸತ್ಯವನ್ನು ನುಂಗಲಾರದವರು ಮತ್ತು ನಮ್ಮ ಮಾತುಗಳು ಕೇಳಿದರೆ ತಮ್ಮ ದೊಡ್ಡಸ್ತಿಕೆ ಕಡಿಮೆ ಆಗುತ್ತದೆನ್ನುವ ಮತ ಹಿರಿಯರು ಕೆಲವರು ನಮ್ಮ ಬರಹಗಳನ್ನು ಒಪ್ಪಿಕೊಳ್ಳದೆ ವಿಮರ್ಶಿಸುತ್ತಿದ್ದಾರೆ.

ಭಗವದ್ಗೀತೆ ಹಿಂದೂಗಳ ಗ್ರಂಥವೆಂದು, ಬೈಬಲ್ ಕ್ರೈಸ್ಥರ ಗ್ರಂಥವೆಂದು, ಖುರ್‌ಆನ್ ಮುಸ್ಲಿಮ್‌ರ ಗ್ರಂಥವೆಂದು ನೀವು ಕೇಳಿದ ಪ್ರಶ್ನೆಯಲ್ಲಿ ಹೇಳಿದ್ದೀರ.

ಮೂರು ಗ್ರಂಥಗಳು ಯಾವ ಮತಕ್ಕೆ ಸಂಬಂಧಿಸಿರುವವಲ್ಲ. ಮೂರು ಸಮಾನವಾದ ದೈವ ಗ್ರಂಥಗಳು. ಆಯಾ ಗ್ರಂಥಗಳಲ್ಲಿ ಒಂದು ಮತದ ಹೆಸರಿಟ್ಟು ಇಂತಹ ಮತಕ್ಕೆ ಸಂಬಂಧಿಸಿರುವವೆಂದು ಎಲ್ಲಿಯೂ ಹೇಳಲಿಲ್ಲ. ಆದ್ದರಿಂದ ಮೂರು ಮತದವರಿಗು ಮೂರು ಗ್ರಂಥಗಳು ಸಂಬಂಧಿಸಿರುವ ವೇಯೆಂದು ಹೇಳಬಹುದು.

**ಪ್ರಶ್ನೆ :– ಹಾಗಾದರೆ ಮುಸ್ಲಿಮ್‌ರು ಖುರಾನ್ ಗ್ರಂಥ ನಮ್ಮ ಗ್ರಂಥವೆಂದು, ಇತರೆ ಮತಸ್ಥರು ಯಾರಾಗಲಿ ಅದನ್ನು ಕುರಿತು ಮಾತನಾಡುವುದಾಗಲಿ, ಬರೆಯುವುದಾಗಲಿ ಮಾಡಬಾರದೆಂದು, ಯಾರಾದರೂ ಖುರ್‌ಆನ್ ಗ್ರಂಥವನ್ನು ಕುರಿತು ಬರೆಯಬೇ ಕೆಂದುಕೊಂಡರೆ ಅಂತಹವರು ತಮ್ಮ ಅನುಮತಿ ತೆಗೆದುಕೊಳ್ಳಬೇಕೆಂದು, ತಮ್ಮ ಅನುಮತಿ ಇಲ್ಲದೆ ತಮ್ಮ ಗ್ರಂಥವಾದ ಖುರ್‌ಆನ್ ಕುರಿತಾಗಲಿ, ಖುರ್‌ಆನ್‌ನಲ್ಲಿನ ಒಂದು ಆಯತ್‌ನ್ನು ಕುರಿತು ಕೂಡಾ ಬರೆಯಬಾರದು ಎಂದು ಹೇಳುತ್ತಿರುತ್ತಾರೆ. ಇದಕ್ಕೆ ನಿಮ್ಮ ಸಮಾಧಾನ ಏನು ಇರುತ್ತದೆ. ನೀವು ಬರೆದ ಖುರ್‌ಆನ್ ಗ್ರಂಥದ ವಾಕ್ಯಗಳು ಮುಸ್ಲಿಮ್‌ರ ಅನುಮತಿಯಿಂದಲೇ ಬರೆದಿದ್ದೀರಾ?**

**ಉತ್ತರ :–** ನಾನು ಯಾರ ಅನುಮತಿ ತೆಗೆದುಕೊಳ್ಳದೆ ಖುರ್‌ಆನ್ ಗ್ರಂಥದಲ್ಲಿನ ಕೆಲವು ವಾಕ್ಯಗಳಿಗೆ ವಿವರವನ್ನು ಬರೆಯುವುದು ನಡೆದಿದೆ. ಹಾಗೆ ಏಕೆ ಅವರ ಅನುಮತಿ ತೆಗೆದುಕೊಳ್ಳಲಿಲ್ಲವೆಂದರೇ ವಿಶಧೀಕರಿಸಿ ಹೇಳುತ್ತೇನೆ ಕೇಳಿರಿ. ಒಬ್ಬ ತಂದೆಗೆ ಮೂವರು ಕುಮಾರರಿದ್ದಾರೆಂದು ಅಂದುಕೊಳ್ಳಿ, ಮೂವರಿಗು ಒಬ್ಬನೆ ತಂದೆ ಆದಾಗ ತಂದೆಯೊಂದಿಗೆ ಯಾವ ಮಗನಾದರೂ ಯಾವಾಗಾದರೂ ಮಾತನಾಡಬಹುದು. ಅಷ್ಟೇಹೊರತು ಚಿಕ್ಕ ಮಗ ದೊಡ್ಡ ಮಗನೊಂದಿಗೆ ನನ್ನ ಅನುಮತಿ ಇಲ್ಲದೇ ತಂದೆಯೊಂದಿಗೆ ಮಾತನಾಡಬೇಡ ಎಂದು ಹೇಳುವುದು ಎಷ್ಟು ವಿಡ್ಡೂರವಾಗಿ ಇರುತ್ತದೊ, ಹಾಗೇ ಮುಸ್ಲಿಮ್‌ರು ನಮ್ಮ ಅನುಮತಿ ಇಲ್ಲದ್ದು ದೈವ ಗ್ರಂಥವಾದ ಖುರ್‌ಆನ್ ಓದಬಾರದು, ಬರೆಯಬಾರದು ಎಂದು ಹೇಳುವುದು ಅಷ್ಟೇ ವಿಡ್ಡೂರವಾಗುತ್ತದೆ. ಮೂರು ದೈವ ಗ್ರಂಥಗಳು ಒಂದೇ ದೇವರನ್ನು ಕುರಿತು ಹೇಳಿದಾಗ, ಮೂರು ಮತದವರಿಗು ಒಬ್ಬನೇ

ದೇವರು ಆದಾಗ, ಎಲ್ಲರಿಗೂ ಸಂಬಂಧಿಸಿದ ದೇವರನ್ನು ಕುರಿತು ಯಾವ ಗ್ರಂಥದಲ್ಲಿ ಯಾದರೂ ಓದಬಹುದು, ವಾಕ್ಯಕ್ಕೆ ಸರಿಯಾದ ಭಾವವನ್ನು ಬರೆದು ಹೇಳಬಹುದು.

ಅಂತಿಮ ದೈವ ಗ್ರಂಥ ಮಾನವರೆಲ್ಲರಿಗೂ ಹೇಳಿದ ಹಿತೋಪದೇಶ ವೆಂದು ಅದೇ ಗ್ರಂಥವಾದ ಖುರ್‌ಆನ್ ಗ್ರಂಥದಲ್ಲಿ ಹೇಳಿದ್ದಾರೆ. ಆ ವಿಷಯವನ್ನು ಖುರ್‌ಆನ್ ಗ್ರಂಥದಲ್ಲಿ 81ನೇ ಸೂರಾ, 27ನೇ ಅಯತ್‌ನಲ್ಲಿಯೂ, ಹಾಗೇ ಆರನೇ ಸೂರಾ 90ನೇ ಆಯತ್‌ನಲ್ಲಿಯೂ ಹೇಳಿದ್ದಾರೆ.

**(81–27) "ಇದು (ಈ ಖುರ್‌ಆನ್ ಗ್ರಂಥ) ಸಮಸ್ತ ಲೋಕವಾಸಿಗಳಿಗಾಗಿ ಹಿತೋಪದೇಶ"**

**(6–90) "ಅಲ್ಲಾಹ್ ಸನ್ಮಾರ್ಗ ತೋರಿಸುವಂತವರು ಇವರೇ. ಆದ್ದರಿಂದ ನೀನು ಕೂಡಾ ಅವರ ಮಾರ್ಗವನ್ನೇ ಅನುಸರಿಸು. ಇದಕ್ಕಾಗಿ ನಾನು ನಿಮ್ಮಿಂದ ಎಂಥಹ ಪ್ರತಿ ಫಲವನ್ನು ಆಶಿಸುತ್ತಿಲ್ಲ. 'ಇದು ಸಮಸ್ತ ಲೋಕವಾಸಿಗಳಿಗಾಗಿ ಹಿತೋಪದೇಶ' ಎಂದು ಓ ಪ್ರವಕ್ತಾ ಅವರಿಗೆ ಹೇಳು"**

ಈ ವಿಧವಾಗಿ ಖುರ್‌ಆನ್ ಗ್ರಂಥದಲ್ಲಿಯೇ ಮನುಷ್ಯರೆಲ್ಲರಿಗೂ ಎಂದು ಹೇಳಿದ್ದಾರೆ ಹೊರತು, ಖುರ್‌ಆನ್ ಗ್ರಂಥ ಒಂದು ಮುಸ್ಲಿಮ್‌ರಿಗೇಯೆಂದು ಹೇಳಲಿಲ್ಲ. ಖುರ್‌ಆನ್ ತಿಳಿದ ಯಾರಾದರೂ, ಯಾವ ಮುಸ್ಲಿಮ್ ಆದರೂ ಖುರ್‌ಆನ್ ಎಲ್ಲರ ಗ್ರಂಥವೆಂದು, ಮುಸ್ಲಿಮ್‌ರಿಗೆ ಮಾತ್ರವೇ ಅಲ್ಲವೆಂದು ಹೇಳುತ್ತಿದ್ದಾರೆ. ಆ ವಿಧಾನದಿಂದ "ಖುರ್‌ಆನ್ ಭಾವಾಮೃತಂ" ಎನ್ನುವ ಗ್ರಂಥವನ್ನು ತೆಲುಗು ಭಾಷೆಗೆ ಅನುವಾದ ಮಾಡಿದ ಅಬುಲ್ ಇರ್ಫಾನ್ ಎನ್ನುವಾತನು ತನ್ನ ಮೊದಲಮಾತಿನಲ್ಲಿ ಹೇಳಿದ ಒಂದು ಪೇರಾವನ್ನು ನೋಡಿದರೆ ಹೀಗಿದೆ ನೋಡಿರಿ.

**"ಏನಾದಲ್ಲಿಯೂ ಖುರ್‌ಆನ್ ಯಾವತ್ ಮಾನವರಿಗಾಗಿ ಅವತರಿಸಿದ ಅಂತಿಮ ದೈವಗ್ರಂಥ. ಇದು ಪ್ರಪಂಚ ಮನುಷ್ಯರೆಲ್ಲರ ಸೊತ್ತು. ಇದರ ಮೇಲೆ**

**ಯಾವೊಂದು ಜಾತಿಗು, ವರ್ಗಕ್ಕು ಗುತ್ತಾಧಿಪತ್ಯ ಇಲ್ಲ. ಗಾಳಿ, ನೀರು, ಸೂರ್ಯರಶ್ಮಿ ಮೊದಲಾದ ಪ್ರಕೃತಿ ಸೌಲಭ್ಯಗಳನ್ನು ಮಾನವನು ಹೇಗೆ ವಿನಿಯೋಗಿಸಿಕೊಂಡು ಪ್ರಯೋಜನೆ ಹೊಂದುತ್ತಿದ್ದಾನೊ ಖುರ್‌ಆನ್ ನಿಂದ ಕೂಡಾ ಹಾಗೆಯೇ ಪ್ರಯೋಜನೆ ಪಡೆಯುಬಹುದು. ಇದು ಇಹ ಲೋಕದಲ್ಲಿ ಮಾನವರ ಮಾರ್ಗದರ್ಶನಕ್ಕಾಗಿ, ಪರಲೋಕದಲ್ಲಿ ಅವರ ಮುಕ್ತಿ ಮೋಕ್ಷಗಳಿಗಾಗಿ ಸರ್ವೇಶ್ವರನು ಕಳಿಸಿದ ಏಕೈಕ ಹಿತವಾಣಿ. ಇದರಲ್ಲಿ ಸತ್ಯಾನ್ವೇಷಕರಿಗೆ ಆಸಕ್ತಿಕರವಾದ ಅನೇಕ ವಿಷಯಗಳಿವೆ. ಅದರಿಂದ ಸತ್ಯವನ್ನು ಪ್ರೀತಿಸಿ ಮೋಕ್ಷವನ್ನು ಕೋರಿಕೊಳ್ಳುವ ಪ್ರತಿಯೊಬ್ಬರೂ ಕನಿಷ್ಟ ಒಂದುಸಲವಾದರೂ ಪ್ರಶಾಂತವಾಗಿ ಆಲೋಚಿಸಿ ಇದನ್ನು ಅಧ್ಯಯನ ಮಾಡಬೇಕಾದ ಅವಶ್ಯಕತೆ ಎಷ್ಟಾದರೂ ಇದೆ."**

ಇಂತಿ

ಅಬುಲ್ ಇರ್ಫಾನ್

**(ಅನುವಾದಕರು)**

ಒಬ್ಬ ಮುಸ್ಲಿಮ್ ಪಂಡಿತನು, ಖುರ್‌ಆನ್ ಅನುವಾದಕನು ಹೇಳಿದ ವಿಷಯ (81–27), (6–90) ಆಯತ್‌ಗಳಿಗೆ ಸಮಾನವಾಗಿ, ಅನುಬಂಧವಾಗಿದೆ. ವಾಸ್ತವವಾಗಿ ಖುರ್‌ಆನ್ ದೈವಗ್ರಂಥ. ಮೂರು ದೈವಗ್ರಂಥಗಳಲ್ಲಿ ಕೊನೆಯದು ಎಂದು ಹೇಳಿದರೂ ಮೂರು ಗ್ರಂಥಗಳನ್ನು ಸೇರಿಸಿ ಒಂದೇ ದೈವ ಗ್ರಂಥವಾಗಿ ಹೇಳಬಹುದು. ಏಕೆಂದರೇ! (6–91)ನೇ ವಾಕ್ಯದಲ್ಲಿ ತೌರಾತ್‌ನ್ನು ದೈವ ಗ್ರಂಥವಾಗಿ ಹೇಳಿ ಅದು ಮಾನವರಿಗೆ ಒಂದು ಜ್ಯೋತಿಯೆಂದು, ಮಾರ್ಗದರ್ಶಕತ್ವವೆಂದು ಹೇಳಿದ್ದಾರೆ. ಅಷ್ಟೇಅಲ್ಲದೆ ಆ ಗ್ರಂಥವನ್ನು ನಿವು ಬೇರೆಬೇರೆ ಕಾಗದಗಳಾಗಿ (ಬೇರೆಬೇರೆ ಗ್ರಂಥಗಳಾಗಿ) ವಿಭಜಿಸಿ ತೋರಿಸುತ್ತಿದ್ದೀರೆಂದು ಹೇಳಿದ್ದೀರ. ಮೂರು ಗ್ರಂಥಗಳೆಂದರೇ **ಪ್ರಥಮ ದೈವಗ್ರಂಥ ಭಗವದ್ಗೀತೆ, ದ್ವಿತಿಯ ದೈವಗ್ರಂಥ ಬೈಬಲ್, ಅಂತಿಮ ದೈವ ಗ್ರಂಥ ಖುರ್‌ಆನ್** ಎಂದು ತಿಳಿಯಬೇಕು. ಸಮಸ್ತ ಮಾನವರು ದೇವರು ಹೇಳಿದ ತೌರಾತ್ ಗ್ರಂಥವನ್ನೇ ಬೇರೆಬೇರೆ ಭಾಗಗಳಾಗಿ ಹೇಳಿಕೊಂಡು

ಇದು ನಮ್ಮ ಗ್ರಂಥ, ಅದು ನಿಮ್ಮ ಗ್ರಂಥ ಎಂದು ಹೇಳುತ್ತಿದ್ದಾರೆ. **ನಿಜಕ್ಕೆ ಯಾವ ಗ್ರಂಥವಾದರೂ ಒಂದೇ ದೇವರನ್ನು ಒಂದೇ ಜ್ಞಾನವನ್ನು ಬೋಧಿಸುತ್ತಿವೆ.**

ಖುರ್‌ಆನ್ ಗ್ರಂಥ ಮುಸ್ಲಿಮ್‌ರದ್ದಲ್ಲ, ಬೈಬಲ್ ಕ್ರೈಸ್ಥರದ್ದಲ್ಲ. ಭಗವದ್ಗೀತೆ ಹಿಂದೂಗಳದ್ದಲ್ಲ. ಮೂರು ಗ್ರಂಥಗಳಲ್ಲಿ ಯಾವ ಮತದ ಹೆಸರು ಹೇಳದಂತೆ "ಸಮಸ್ತ ಮಾನವರಿಗು" ಎನ್ನುವಂತೆ ಹೇಳಿದ್ದಾರೆ. ಹಾಗಿರುವಾಗ ಖುರ್‌ಆನ್ ಮೇಲೆ ಮುಸ್ಲಿಮ್‌ರಿಗೆ ಎಷ್ಟು ಹಕ್ಕು ಇದೆಯೋ ಉಳಿದ ಮತದವರಿಗೆ ಅಷ್ಟೇ ಹಕ್ಕು ಇರುತ್ತದೆ. ಆದ್ದರಿಂದ ದೇವರು ಮಾನವರಿಗೆ ಎಷ್ಟು ಹತ್ತಿರದವನೋ ಹಾಗೇ ದೈವ ಗ್ರಂಥವಾದ ಖುರ್‌ಆನ್ ಕೂಡಾ ಎಲ್ಲಾ ಮತದವರಿಗು ಅಷ್ಟು ಹತ್ತಿರವಾಗಿಯೇ ಇದೆ. ಈ ವಿಧವಾಗಿ ಎಲ್ಲಾ ಗ್ರಹಿಸಿದ ನಂತರ ನಾನು ಖುರ್‌ಆನ್ ಗ್ರಂಥದಲ್ಲಿ ಎಲ್ಲರಿಗೂ ಅರ್ಥವಾಗದಂತಹ ಸೂಕ್ಷ್ಮ ಅರ್ಥವಿರುವ ವಾಕ್ಯಗಳಿಗೆ ವಿವರವನ್ನು ಬರೆಯುವುದು ನಡೆದಿದೆ. ನಾನು ಮಾಡಿರುವುದು ಒಳ್ಳೆಯ ಕೆಲಸವೇ ಆಗಿರುವುದರಿಂದ ಎಲ್ಲರೂ ನನ್ನನ್ನು ಅಭಿನಂದಿಸಬೇಕೇ ಹೊರತು, ಇದು ನಮ್ಮ ಗ್ರಂಥ, ನಮ್ಮ ಅನುಮತಿ ಇಲ್ಲದೇ ಬರೆಯ ಬಾರದೆನ್ನುವುದು ಒಂದು ವಿಧವಾಗಿ ನಮ್ಮನ್ನು ಅವಮಾನಿಸಿದಂತೆ ಆಗುತ್ತದೆ. ನಾನು ಕೆಲವು ಸೂಕ್ಷ್ಮವಾಕ್ಯಗಳಿಗೆ ವಿವರ ಬರೆಯದೆ ಹೋದರೆ ಭವಿಷ್ಯತ್ತಿನಲ್ಲಿ ಕೂಡಾ ಅವುಗಳ ವಿವರ ತಿಳಿಯುವುದಕ್ಕೆ ಅವಕಾಶವಿಲ್ಲ. ನನ್ನ ವಿವರದಿಂದ ಬಹಳಜನ ಖುರ್‌ಆನ್ ಗ್ರಂಥದಲ್ಲಿನ ಸತ್ಯವನ್ನು ತಿಳಿದುಕೊಂಡಿದ್ದಾರೆ. ಶೇ.90ರಷ್ಟು ಮುಸ್ಲಿಮ್‌ರು ಖುರ್‌ಆನ್ ನಿಜಭಾವ ತಿಳಿದಿರುವುದರಿಂದ ಬಹಳ ಸಂತೋಷ ಪಟ್ಟಿದ್ದಾರೆ. ಅವರಲ್ಲಿ ಒಬ್ಬ ಮುಸ್ಲಿಮ್ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದರು.

**"ಖುರ್‌ಆನ್ ಗ್ರಂಥದಲ್ಲಿನ ಆಯತ್‌ಗಳ ಅರ್ಥ ತಿಳಿಯದೆ ಸರಿಯಾದ ವಿವರ ಹೇಳುವವರು ಇಲ್ಲದೆ ಶಾಸ್ತ್ರಬದ್ಧವಾಗಿ ಹೇಳುವವರಿಗಾಗಿ ಕಾದು ನೋಡಿದಾಗ ಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರ ಪ್ರಸಂಗಗಳು ಹಾಗೂ ಗ್ರಂಥಗಳಲ್ಲಿನ ಜ್ಞಾನವನ್ನು ನೋಡಿದ ನಂತರ ಎಷ್ಟೋ ಆನಂದ ಉಂಟಾಗಿದೆ.**

**ಮುಖ್ಯವಾಗಿ ಹೇಳಬೇಕೆಂದರೆ ಮನುಷ್ಯನ ನಂಬಿಕೆ ಪ್ರಕಾರ ದೇವರ ವಿಧಾನ ಇರುವುದಿಲ್ಲ. ದೇವರ ವಿಧಾನವೇ ಮನುಷ್ಯನ ನಂಬಿಕೆ ಆಗಬೇಕು. ಕೊನೆಯದಾಗಿ ಪ್ರತಿಯೊಬ್ಬರನ್ನು ಕೇಳುವುದು ಏನೆಂದರೇ ಓ ಮನುಷ್ಯಾ! ನಿನ್ನ ನಂಬಿಕೆ ಸತ್ಯವಾ ಅಥವಾ ಅಸತ್ಯವಾ ನೋಡಿಕೊ ಎಂದು ಕೋರುತ್ತಿದ್ದೇನೆ.**

(81-27) **"ಇದು ಸಮಸ್ತ ಲೋಕವಾಸಿಗಳಿಗಾಗಿ ಹಿತೋಪದೇಶ." ನಿಜ ಹೇಳಬೇಕೆಂದರೇ ಖುರ್‌ಆನ್ ಗ್ರಂಥ ಓದುವವರೆಗು ಖುರ್‌ಆನ್ ಕೇವಲ ಮುಸ್ಲಿಮ್‌ರ ಗ್ರಂಥ ಮಾತ್ರವೇ ಅಂದುಕೊಳ್ಳುವವರಲ್ಲಿ ನಾನೂ ಒಬ್ಬನು. ಈ ದಿನ ಕೂಡಾ ಬಹಳಜನ ಮುಸ್ಲಿಮ್‌ರು ಅದೇ ಭಾವನೆಯಿಂದ ಇದ್ದಾರೆ ಎಂದರೇ ಆಶ್ಚರ್ಯ ಪಡಬೇಕಾದ ಅವಶ್ಯಕತೆಯಿಲ್ಲ. ಈ ದಿನ ಸಮಾಜದಲ್ಲಿ ಮನುಷ್ಯರಿಗೆ ಖುರ್‌ಆನ್ ಗ್ರಂಥ ಕೇವಲ ಮುಸ್ಲಿಮ್‌ರದೇ ಎನ್ನುವ ಭಾವನೆ ಉಂಟುಮಾಡಿದ ಪಾಪ ಯಾರದು?"**

(ಷೇಕ್ ಷಫೀ)

ನಾವು ಖುರ್‌ಆನ್ ಗ್ರಂಥದಲ್ಲಿನ ಕೆಲವು ವಾಕ್ಯಗಳಿಗೆ ವಿವರವನ್ನು ಬರೆದಾಗ ಸುಮಾರು 30 ಸಾವಿರ ಮಂದಿ ಹಿಂದೂಗಳು ಓದಿ ಖುರ್‌ಆನ್‌ನಲ್ಲಿ ಒಳ್ಳೆಯ ಜ್ಞಾನವಿದೆಯೆಂದು ಹೇಳಿದ್ದಾರೆ. ಹಾಗೆಯೇ 15 ಸಾವಿರ ಜನ ಖುದಾ ಇಸ್ಲಾಮಿಕ್ ಸಂಸ್ಥೆಯವರು ಓದಿ ನಮಗೆ ಇಲ್ಲಿಯವರೆಗು ತಿಳಿಯದ ದೊಡ್ಡ ಜ್ಞಾನ ತಿಳಿದಿದೆಯೆಂದು ಸಂತೋಷಪಟ್ಟಿದ್ದಾರೆ. ನಾನು ಬರೆದ ವಿವರಗಳು ಇಲ್ಲಿಯವರೆಗು ಯಾರೂ ಬರೆಯದಿರುವುದರಿಂದ ನಮ್ಮ ಭಾವ ವಿವರ ಬಹಳ ಶ್ರೇಷ್ಠವಾಗಿ ಕಾಣಿಸಿದೆ. ಅಷ್ಟುಜನರಿಗು ಖುರ್‌ಆನ್ ಅರ್ಥವಾಗುವುದು ಸಂತೋಷಿಸುವ ವಿಷಯ. ಆದರೂ ಕೆಲವರು ಮುಸ್ಲಿಮ್ ಹಿರಿಯರು ತಮ್ಮ ದೊಡ್ಡಸ್ತಿಕೆಗೆ ಬೆಲೆ ಇಲ್ಲದಂತಾಗುತ್ತದೆಂಬ ಉದ್ದೇಶದಿಂದ ಅದೇ ಕೆಲಸವಾಗಿ ನಾವು ಬರೆದ ಭಾವನೆ ತಪ್ಪುಯೆಂದು, ಖುರ್‌ಆನ್ ಗ್ರಂಥಕ್ಕೆ ವಿರುದ್ಧವಾಗಿ ಬರೆದಿದ್ದಾನೆಂದು ಪ್ರಚಾರ ಮಾಡಿ ಅಮಾಯಕ ಮುಸ್ಲಿಮ್‌ರನ್ನು ನಮ್ಮ ಮೇಲೆ

ರೊಚ್ಚಿಗೆಬ್ಬಿಸುವುದು ಕೂಡಾ ನಡೆದಿದೆ. ಅದಕ್ಕೆ ಸಮಾಧಾನವಾಗಿ ನಾವು ತಪ್ಪು ಬರೆದಂತಾಗಲಿ, ಖುರ್‌ಆನ್‌ಗೆ ವಿರುದ್ಧವಾಗಿ ಬರೆದಂತಾಗಲಿ ತೋರಿಸಿರೆಂದು ಕೇಳಿದರೆ ಯಾರೂ ನಮ್ಮ ತಪ್ಪನ್ನು ತೋರಿಸಲಾರದೆ ಹೋಗಿದ್ದಾರೆ.

**ಪ್ರಶ್ನೆ :– ಮುಸ್ಲಿಮ್‌ರು ಎಲ್ಲರೂ ಅಲ್ಲದಿದ್ದರೂ ಕೆಲವರು ಮಾತ್ರ ನಮ್ಮ ಗ್ರಂಥದಲ್ಲಿನ ವಾಕ್ಯಗಳು ಬರೆಯಬಾರದೆಂದು ಆಕ್ಷೇಪಣೆ ತಿಳಿಸಿದಾಗ ನೀವು ಏಕೆ ಬರೆಯಬೇಕು.? ಬರೆಯದಂತೆ ಬಿಟ್ಟುಬಿಡಬಹುದು ಅಲ್ಲವೆ!**

**ಉತ್ತರ :–** ಮುಸ್ಲಿಮ್‌ರಲ್ಲಿ ಮುಖ್ಯವಾಗಿ ಇಸ್ಲಾಮ್ ನಮ್ಮ ಮತವೆಂದು ಹೇಳಿಕೊಳ್ಳುವ ಕೆಲವರು ಮುಸ್ಲಿಮ್ ಹಿರಿಯರು ಮಾತ್ರ ಆಕ್ಷೇಪಣೆ ತಿಳಿಸಿದ ಮಾತು ನಿಜ. ನಾನು ಬರೆಯದಂತೆ ಬಿಟ್ಟುಹಾಕುವುದರಿಂದ ನನಗೆ ಬರುವ ನಷ್ಟವಿಲ್ಲ. ಆದರೆ ಅದು ಒಟ್ಟಾರೆ ಮಾನವರೆಲ್ಲರಿಗೂ ಖುರ್‌ಆನ್‌ನಲ್ಲಿರುವ ಆಳವಾದ ಜ್ಞಾನ ಸಿಗದಂತೆ ಹೋಗುವುದಲ್ಲದೆ, ಖುರ್‌ಆನ್‌ವೊಂದರ ಹಿರಿಮೆ ಯಾರಿಗೂ ತಿಳಿಯದೇ ಹೋಗುತ್ತದೆ. ದೇವರು ಮಾನವರಿಗೆಲ್ಲರಿಗೂ ಜ್ಞಾನ ಹೇಳಿದರೆ ಕೆಲವರು ಮನುಷ್ಯರು ಇಟ್ಟಿರುವ ಷರತುಗಳಿಗೆ ನಾನು ಒಳಗಾಗಿ ದೈವಜ್ಞಾನವನ್ನು ಮುಚ್ಚಿಟ್ಟಂತಾಗುತ್ತದೆ. ಆದ್ದರಿಂದ ಸಮಾನ ಬೆಲೆಯುಳ್ಳ ಮೂರು ದೈವ ಗ್ರಂಥಗಳನ್ನು ನಾನು ಬರೆಯಬೇಕೆಂದುಕೊಂಡಿದ್ದೇನೆ. ನನ್ನನ್ನು ಬರೆಯಬಾರದೆನ್ನುವವರನ್ನು ನಾನು ಕೂಡಾ ಒಂದು ಮಾತನ್ನು ಕೇಳಬೇಕೆಂದು ಕೊಂಡಿದ್ದೇನೆ. ಖುರ್‌ಆನ್ ಗ್ರಂಥ ಮುಸ್ಲಿಮ್‌ರದು ಎಂದು ಅವರು ಹೇಳಿದಾಗ ಭಗವದ್ಗೀತೆ ಹಿಂದೂಗಳದೆಂದು, ಬೈಬಲ್ ಕ್ರೈಸ್ಥರದೆಂದು ಹೇಳಬೇಕಾಗಿ ಬರುತ್ತದೆ. ಹಾಗೆ ಖುರ್‌ಆನ್ ನಮ್ಮದು ಉಳಿದ ಎರಡು ಗ್ರಂಥಗಳು ನಮ್ಮವಲ್ಲ ಎಂದಾಗ, ಉಳಿದ ಎರಡು ಗ್ರಂಥಗಳನ್ನು ಕುರಿತು ಅವರು ಬರೆದ ಪುಸ್ತಕಗಳಲ್ಲಿ ಏಕೆ ಬರೆದಿದ್ದಾರೆ? ಭಗವದ್ಗೀತೆ ಶ್ಲೋಕಗಳನ್ನು ಕುರಿತು ವಿವರ ಮತ್ತು ಬೈಬಲ್ ವಾಕ್ಯಗಳು ಅವರು ಬರೆದ ಪುಸ್ತಕಗಳಲ್ಲಿ ಇವೆ. ಹಾಗೆ ಅವರು ಭಗವದ್ಗೀತೆಯನ್ನು, ಬೈಬಲ್‌ನನ್ನು ಕುರಿತು ಯಾರ ಅನುಮತಿ ಇಲ್ಲದೆ ಬರೆದಾಗ ಹಿಂದೂವಾದ ನಾನು ಉಳಿದ ಗ್ರಂಥಗಳನ್ನು ಕುರಿತು ಏಕೆ ಬರೆಯಬಾರದು? ಅವರು

ಬರೆಯುವುದಕ್ಕೆ ಹಿಂದೂಗಳ ಅನುಮತಿ, ಕ್ರೈಸ್ಥರ ಅನುಮತಿ ಪಡೆಯಬೇಕೆಂದು ಅಂದುಕೊಳ್ಳಲಿಲ್ಲ ಅಲ್ಲವೆ! ಹಾಗಿರುವಾಗ ನನಗೆ ಮುಸ್ಲಿಮ್‌ರ ಅನುಮತಿ ಅಗತ್ಯವೆಂದು ಹೇಳುವುದು ಸರಿಯಾದ ಕೆಲಸವಲ್ಲ ಅಲ್ಲವೆ! ನಿಮಗೆ ಇಲ್ಲದ ಅನುಮತಿ ನಮಗೇಕೆ ಅಗತ್ಯವೆಂದು ನಾನು ಕೇಳಬಹುದು ಅಲ್ಲವೆ! ದೇವರು ಎಲ್ಲರಿಗೂ ಸಮಾನವೇಯೆನ್ನುವ ಉದ್ದೇಶದಿಂದ ಹಿಂದೂಗಳಾಗಲಿ, ಕ್ರೈಸ್ಥರಾಗಲಿ ಮುಸ್ಲಿಮರನ್ನು ನಮ್ಮ ಅನುಮತಿ ಪಡೆಯಬೇಕೆಂದು ಹೇಳಲಿಲ್ಲ. ಹಾಗಿರುವಾಗ ಖುರ್‌ಆನ್ ಎಲ್ಲರ ಗ್ರಂಥವೆನ್ನುವ ಉದ್ದೇಶದಿಂದ ಅದರಲ್ಲಿನ ವಾಕ್ಯಗಳನ್ನು ಬರೆಯುವುದು ತಪ್ಪು ಹೇಗಾಗುತ್ತದೆ? ದೇವರ ವಿಧಾನದಲ್ಲಿ ಮುಸ್ಲಿಮ್‌ರಿಗೆ ಒಂದು ಪದ್ಧತಿ, ಉಳಿದ ಮತಗಳಿಗೆ ಮತ್ತೊಂದು ಪದ್ಧತಿ ಏನು ಇಲ್ಲವಲ್ಲ! ಇತರೆ ಮತದವರು ಖುರ್‌ಆನ್ ವಾಖ್ಯಗಳನ್ನು ಬರೆಯಬಾರದೆಂದು ಹೇಳಿದಾಗ ಭಗವದ್ಗೀತೆಯನ್ನು ಕುರಿತು, ಬೈಬಲ್‌ಗೆ ಸಂಬಂಧಿಸಿದ ವಾಕ್ಯಗಳನ್ನು ಕುರಿತು ಬರೆಯುವುದಿಲ್ಲ ಎಂದು ನೀವು ಹೇಳಬಲ್ಲಿರಾ ಎಂದು ಕೇಳುತ್ತಿದ್ದೇವೆ?

ಎಲ್ಲರಿಗೂ ಒಬ್ಬನೇ ದೇವರು, ಒಬ್ಬನೇ ಸೃಷ್ಟಿಕರ್ತನಾದಾಗ ನಿಮ್ಮದು, ನಮ್ಮದು ಎನ್ನುವ ಮತ ನಿಯಮಗಳೇಕೆ? ಎಂದು ನಾವು ಕೇಳುತ್ತಿದ್ದೇವೆ. ದೇವರ ವಿಷಯದಲ್ಲಿ ನಿಮಗೊಂದು ನ್ಯಾಯ, ನಮಗೊಂದು ನ್ಯಾಯ ಇರುವುದಿಲ್ಲ ಅಲ್ಲವೆ! "ಸರ್ವಮಾನವರಿಗೂ ಇದು ಹಿತೋಪದೇಶ" ಎಂದು ಹೇಳಿದ ಖುರ್‌ಆನ್ ವಾಕ್ಯಕ್ಕೆ ಮುಸ್ಲಿಮ್‌ರು ವಿರುದ್ಧವಾಗಿ ಮಾತನಾಡಿದಂತೆ ಅಲ್ಲವೆ! ನಿಮಗೆ ಒಬ್ಬ ದೇವರು ನಮಗೆ ಮತ್ತೊಬ್ಬ ದೇವರು ಇಲ್ಲದಿರುವಾಗ, ಎಲ್ಲರಿಗೂ ಒಬ್ಬನೇ ದೇವರಾದಾಗ, ದೇವರು ಹೇಳಿದ ವಾಕ್ಯಗಳನ್ನು ಇತರರಿಗೆ ವಿವರಿಸಿ ಹೇಳುವುದರಲ್ಲಿ ತಪ್ಪಿಲ್ಲ ಅಲ್ಲವೆ! ದೇವರು ಯಾವ ಭೇದ ಇಲ್ಲದೆ ಮನುಷ್ಯರೆಲ್ಲರಿಗೂ ನನ್ನ ಜ್ಞಾನ ಎಂದು ಮೂರು ಗ್ರಂಥಗಳಲ್ಲಿ ಹೇಳಿರುವಾಗ ಮೂರು ಮತದವರು ಯಾರು ಯಾವ ಗ್ರಂಥವನ್ನು ಕುರಿತಾದರೂ ಹೇಳಿಕೊಳ್ಳಬಹುದೆಂದು ದೇವರೇ ಅಧಿಕಾರ ಕೊಟ್ಟಂತಿರುವಾಗ ಇಂತಹ ಗ್ರಂಥ ನಮ್ಮದೆಂದು ಅದನ್ನು ಕುರಿತು ಇತರ ಮತದವರು ಮಾತನಾಡಿಕೊಳ್ಳಬಾರದು,

ಬರೆಯಬಾರದು ಎಂದು ಹೇಳುವುದು ದೇವರ ಮಾತುಗಳನ್ನು ವಿರೋಧಿಸಿದಂತಾಗುತ್ತದಲ್ಲವೆ! ಆದ್ದರಿಂದ ನಾನು ಮನುಷ್ಯರ ಮಾತನ್ನು ಲೆಕ್ಕ ಮಾಡದೆ ದೇವರ ಮಾತನ್ನೇ ದೊಡ್ಡದಾಗಿ ಲೆಕ್ಕಿಸುತ್ತೇನೆ. ಎಲ್ಲರಿಗೂ ಸಮಾನವಾದ ದೇವರನ್ನು ಕುರಿತು ಮನುಷ್ಯರು ಆಂಕ್ಷೆಗಳನ್ನಿಡುವುದು ಮನುಷ್ಯರಿಗೆ ತಕ್ಕ ಕೆಲಸವಲ್ಲ. ನಾನು ಖುರಾನ್ ಗ್ರಂಥದಲ್ಲಿನ ದೇವರ ಜ್ಞಾನವನ್ನು ದೊಡ್ಡದಾಗಿಯೇ ಹೇಳುತ್ತಿದ್ದೇನೆ. ಬಹಳ ಜನರು ಮೂರು ಮತದವರು ಸಂತೋಷವಾಗಿ ತಿಳಿದುಕೊಳ್ಳುತ್ತಿದ್ದಾರೆ. ಹಾಗಿರುವಾಗ ಕೆಲವರು ನಮ್ಮ ಮತವನ್ನು ಕುರಿತು ಬರೆಯಬೇಡವೆಂದು ಹೇಳುವುದು ಒಳ್ಳೆಯದಲ್ಲ. ಅದು ದೇವರಿಗೆ ವಿರುದ್ಧವಾದ ಮಾತಾಗುತ್ತದೆ.

ಮುಸ್ಲಿಮ್‌ರ ಮಾತು ನಾನು ಕೇಳಬೇಕೆಂದರೆ ಹಿಂದೂವಾಗಿ ನಾನು ಹೇಳುವ ಮಾತನ್ನು ಸಹ ಅವರು ಕೇಳಬೇಕಾಗಿರುತ್ತದೆ. ಭಗವದ್ಗೀತೆ, ಬೈಬಲ್‌ನ್ನು ಕುರಿತು ನೀವೇಕೆ ಬರೆದಿದ್ದೀರೆಂದು ನಾವು ಕೇಳಬೇಕಾಗಿ ಬರುತ್ತದೆ. ಆದರೂ ಆ ಮಾತನ್ನು ನಾವು ಕೇಳುವುದಿಲ್ಲ. ದೇವರ ವಾಕ್ಯವನ್ನು ಕುರಿತು ವಿವರಿಸಿ ಹೇಳುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಹಾಗೆ ಹೇಳಬಾರದು ಎನ್ನುವ ಅಧಿಕಾರ ಯಾರಿಗೂ ಇಲ್ಲ. ಆ ವಿಷಯವನ್ನು ದೇವರೇ ತನ್ನ ಗ್ರಂಥಗಳಲ್ಲಿ ತಿಳಿಸಿದ್ದಾನೆ. ದೇವರ ಮಾತನ್ನು ಲೆಕ್ಕಮಾಡದೆ ಮಾತನಾಡುವವರು ಯಾರಾದರೂ ದೈವಕ್ಕೆ ದೂರವಾಗದೆ ತಪ್ಪುವುದಿಲ್ಲ. ಕ್ರೈಸ್ತವ ಬೈಬಲ್‌ನ್ನು ಕುರಿತು ಮುಸ್ಲೀಮ್‌ರು ಕೆಲವರು ಯೇಸು ಮರಣಿಸಲಿಲ್ಲ ಶಿಲುಬೆಗೆ ಹಾಕಲ್ಪಡಲಿಲ್ಲ ಎಂದು ವಾದಿಸುತ್ತಿದ್ದಾರೆ. ಅವರು ಕ್ರೈಸ್ತರನ್ನು ಕುರಿತು ಬೈಬಲ್‌ನ್ನು ಕುರಿತು ಜೋಕ್ಯ ಮಾಡಿಕೊಂಡು ಚರ್ಚಾವೇದಿಕೆಗಳ ಮೇಲೆ ವಾದೋಪವಾದಗಳು ಮಾಡಿದಾಗ ನನ್ನನ್ನು ಖುರಾನ್ ಗ್ರಂಥದಲ್ಲಿನ ವಾಕ್ಯಗಳನ್ನು ಬರೆಯಬಾರದೆನ್ನುವುದಕ್ಕೆ ಯಾವ ಅವಕಾಶವಿಲ್ಲವೆಂದು ಹೇಳಬಹುದು.

**ಪ್ರಶ್ನೆ :– ದೇವರು (ಅಲ್ಲಾಹ್) ಮನುಷ್ಯರಿಗೆ ಒಟ್ಟು ನಾಲ್ಕು ಗ್ರಂಥಗಳನ್ನು ನಾಲ್ವರು ಪ್ರವಕ್ತರ ಮೂಲಕ ಕೊಟ್ಟಿದ್ದಾನೆಂದು, ಆ ಗ್ರಂಥಗಳೇ 1) ಜಬೂರ 2) ತೌರಾತ್**

**3) ಇಂಜೀಲ್ 4) ಖುರಾನ್ ಎಂದು ಹೇಳುತ್ತಿದ್ದಾರೆ. ಮೊದಲನೆಯದಾದ ಜಬೂರ ಗ್ರಂಥ ದಾವೂದ್ ಪ್ರವಕ್ತರ ಮುಖಾಂತರ, ಎರಡನೆಯದಾದ ತೌರಾತ್ ಮೂಸಾ ಪ್ರವಕ್ತರ ಮುಖಾಂತರ, ಮೂರನೆಯದಾದ ಇಂಜೀಲ್ ಈಸಾ ಪ್ರವಕ್ತರ ಮೂಲಕ, ನಾಲ್ಕನೆಯದಾದ ಖುರಾನ್ ಗ್ರಂಥ ಮುಹಮ್ಮದ್ ಪ್ರವಕ್ತರ ಮೂಲಕ ಬಂದಿವೆಯೆಂದು ಮುಸ್ಲಿಮ್‌ರು ಹೇಳುತ್ತಿದ್ದಾರೆ. ಹಾಗಿರುವಾಗ ನೀವು ತೌರಾತ್ ಗ್ರಂಥವನ್ನು ಭಗವದ್ಗೀತೆಯೆಂದು ಹೇಳುವುದನ್ನು ಮುಸ್ಲಿಮ್‌ರು ಒಪ್ಪಿಕೊಳ್ಳುತ್ತಿಲ್ಲ. ತೌರಾತ್ ಭಗವದ್ಗೀತೆ ಅಲ್ಲವೆಂದು ತೌರಾತ್‌ನ್ನು ಮೂಸಾ ಹೇಳಿದ್ದಾನೆಂದು ಹೇಳುತ್ತಿದ್ದಾರೆ. ಭಗವದ್ಗೀತೆಯನ್ನು ತೌರಾತ್ ಎಂದು ಹೇಳುವುದು ಮುಸ್ಲಿಮ್‌ರು ಅಲ್ಲಗಳೆಯುತ್ತಿದ್ದಾರೆ. ಅದಕ್ಕೆ ನೀವು ಯಾವ ಉತ್ತರ ಹೇಳುತ್ತೀರಾ? ನೀವು ಎಲ್ಲಾ ಸತ್ಯವೇ ಹೇಳುತ್ತೇವೆಂದು ಹೇಳಿದಾಗ, ತೌರಾತ್ ಭಗವದ್ಗೀತೆಯೆಂದು ಅಸತ್ಯವನ್ನು ಹೇಳಬೇಕಾದ ಅವಶ್ಯ ಏನು ಬಂದಿದೆ?**

**ಉತ್ತರ :–** ನನಗೆ ಅಸತ್ಯವನ್ನು ಹೇಳಬೇಕಾದ ಅವಶ್ಯವಿಲ್ಲ. ಪ್ರಜೆಗಳು ಜ್ಞಾನಿಗಳು ಆಗಬೇಕೆಂದು ನಾನು ಸತ್ಯವನ್ನೇ ಹೇಳಿ ಸರಿಯಾದ ಜ್ಞಾನ ಮಾರ್ಗದಲ್ಲಿ ಪ್ರಜೆಗಳನ್ನು ಕಳುಹಿಸಬೇಕೆಂದುಕೊಂಡಿದ್ದೇನೆ. ಹಾಗಿರುವಾಗ ಸತ್ಯವನ್ನು ಹೊರತು ಅಸತ್ಯವನ್ನು ನಾನು ಹೇಗೆ ಹೇಳಬಲ್ಲೆನು? ನಾಲ್ಕು ಗ್ರಂಥಗಳನ್ನು ನಾನು ಸಹ ಒಪ್ಪಿಕೊಳ್ಳುತ್ತಿದ್ದೇನೆ. ಉದಾಹರಣೆಗೆ ಎರಡನೆ ಗ್ರಂಥವಾದ ಇಂಜೀಲ್ ಸಹ ಖುರಾನ್ ಗ್ರಂಥಕ್ಕಿಂತ 600 ವರ್ಷಗಳ ಹಿಂದೆಯೇ ಹೇಳಲ್ಪಟ್ಟಿದೆ. ಆರು ನೂರು ವರ್ಷಗಳ ಮುಂಚೆ ಯೇಸು ಎನ್ನುವ ಪ್ರವಕ್ತ ಹೇಳಿದ ಬೋಧನೆಯನ್ನು ಆಧಾರ ಮಾಡಿಕೊಂಡು ಬೈಬಲ್ ಗ್ರಂಥವನ್ನು ಬರೆಯುವುದು ನಡೆದಿದೆ. ಆದರೆ 600 ವರ್ಷಗಳು ಕಳೆದ ನಂತರ ತಯಾರಾದ ಖುರಾನ್ ಗ್ರಂಥವು ಬೈಬಲ್‌ನ್ನು ಇಂಜೀಲ್ ಎಂದು, ಯೇಸನ್ನು ಈಸಾ ಎಂದು ಹೇಳುವುದು ನಡೆದಿದೆ. ಖುರಾನ್ ಗ್ರಂಥದಲ್ಲಿ ಹೇಳಲ್ಪಟ್ಟ ಇಂಜೀಲ್ ಮೊದಲು ಬೈಬಲ್ ಆದಂತೆ, ಹಾಗೆಯೇ ಖುರಾನ್ ಗ್ರಂಥದಲ್ಲಿ ಹೇಳಲಾಗಿರುವ ಈಸಾ ಮೊದಲು ಯೇಸಾಗಿ ಇದ್ದಂತೆ ಈಗ ತೌರಾತ್ ಎಂದು ಖುರಾನ್‌ನಲ್ಲಿ ಹೇಳಲ್ಪಟ್ಟಿರುವುದು ಐದು ಸಾವಿರ ವರ್ಷಗಳ ಕೆಳಗೆ ಭಗವದ್ಗೀತೆ ಎನ್ನುವ ಹೆಸರೊಂದಿಗೆ ಇದೆಯೆಂದು

ಸತ್ಯವನ್ನೇ ಹೇಳುತ್ತಿದ್ದೇವೆ. ಹಾಗೆಯೇ 5000 ವರ್ಷಗಳ ಪೂರ್ವದಲ್ಲಿ ಕೃಷ್ಣ ಎಂದು ಕರೆಯಲ್ಪಟ್ಟಿರುವ ಆತನೇ ಮೂಸಾಯೆಂದು ಹೇಳಲ್ಪಡುತ್ತಿದ್ದಾನೆಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ ಅಲ್ಲವೆ! ಮೂಸಾ ಎಂದು ಖುರಾನ್ ಗ್ರಂಥದಲ್ಲಿ ಹೇಳಲ್ಪಟ್ಟಿರುವ ಆತನು ಅದಕ್ಕು ಮೊದಲು ಆರು ನೂರು ವರ್ಷಗಳ ಕೆಳಗೆ ಅಂದರೆ ಇಲ್ಲಿಗೆ 2000 ವರ್ಷಗಳ ಸಮಯದಲ್ಲಿ ಹೇಳಿದ ಬೈಬಲ್ (ಇಂಜೀಲ್) ನಲ್ಲಿ ಮೋಷೇ ಎಂದು ಹೇಳಿದಂತೆ ತಿಳಿಯುತ್ತಿದೆ. ಮೋಸೆ ಮೂಸಾ ಎಂದು ಹೆಸರು ಬದಲಾದಂತೆ, ಕೃಷ್ಣ ಮೋಸೇಯಾಗಿ ನಂತರ ಮೂಸಾ ಎಂದು ಹೆಸರು ಬದಲಾಗಿದ್ದಾನೆಂದು ನಾವು ಹೇಳುವುದರಲ್ಲಿ ಸತ್ಯ ಇಲ್ಲವೆನ್ನುವವರು ನಮ್ಮ ಮಾತು ಸತ್ಯವಲ್ಲವೆಂದು ಹೇಗೆ ಹೇಳಬಲ್ಲಿರಿ?

ತೌರಾತ್ ಗ್ರಂಥವೊಂದರ ಹೆಸರು ಮಾತ್ರ ತಿಳಿದವರು ಆ ಗ್ರಂಥವನ್ನು ಯಾರೂ ನೋಡಿರಲಿಲ್ಲ. ಯಾರೂ ನೋಡದ ತೌರಾತ್‌ನ್ನು ಭಗವದ್ಗೀತೆ ಅಲ್ಲವೆಂದು ಹೇಗೆ ಹೇಳಬಲ್ಲರು? ಹಾಗೆ ತೌರಾತ್ ಭಗವದ್ಗೀತೆ ಅಲ್ಲವೆಂದು ಹೇಳುವವರು ಯಾರಾದರೂ ತೌರಾತ್ ಗ್ರಂಥವನ್ನು ತಂದು ತೋರಿಸಬಲ್ಲಿರಾ? ವಾಸ್ತವಕ್ಕೆ ತೌರಾತ್ ಬೈಬಲ್ ಗ್ರಂಥದಲ್ಲಿ ಧರ್ಮಶಾಸ್ತ್ರಯೆಂದು ಹೇಳಲ್ಪಟ್ಟಿದೆ. ನಂತರ ಖುರಾನ್‌ನಲ್ಲಿ ತೌರಾತ್‌ಯೆಂದು ಹೇಳಲ್ಪಟ್ಟಿದೆ. ವಾಸ್ತವವಾಗಿ ದ್ವಾಪರ ಯುಗದ ಕೊನೆಯಲ್ಲಿ, ಕಲಿಯುಗ ಪ್ರಾರಂಭದಲ್ಲಿ ಅಂದರೆ ಸುಮಾರು ಐದು ಸಾವಿರ ವರ್ಷಗಳ ಪೂರ್ವದಲ್ಲಿ ವ್ಯಾಸನಿಂದ ಬರೆಯಲ್ಪಟ್ಟ ಗ್ರಂಥಕ್ಕೆ ಮನುಷ್ಯನಾದ ವ್ಯಾಸನು 'ಭಗವದ್ಗೀತೆ' ಎಂದು ಹೆಸರು ಇಟ್ಟಿದ್ದಾನೆ. ಆದರೆ ಗ್ರಂಥದಲ್ಲಿನ ಜ್ಞಾನವನ್ನು ಹೇಳಿದ ಕೃಷ್ಣ ಎನ್ನುವ ಪ್ರವಕ್ತ ಸ್ವತಃವಾಗಿ ತನ್ನ ಗ್ರಂಥಕ್ಕೆ 'ತೌರಾತ್'ಯೆಂದು ಹೆಸರು ಇಡುವುದು ನಡೆದಿದೆ. ತೌರಾತ್ ಗ್ರಂಥವನ್ನು ಅಂದರೆ ಆಗ ಪ್ರಜೆಗಳಿಂದ ಭಾರತದೇಶದಲ್ಲಿ ಭಗವದ್ಗೀತೆಯೆಂದು ಕರೆಯಲ್ಪಡುವ ಗ್ರಂಥವನ್ನು ಸ್ವತಃವಾಗಿ ಆ ಗ್ರಂಥ ಬೋಧಕನು ಆದ ಕೃಷ್ಣ ಪ್ರವಕ್ತ ತೌರಾತ್‌ಯೆಂದು ಹೆಸರಿಟ್ಟು, ಮೂಸಾಪ್ರವಕ್ತರಿಗೆ ನೇರವಾಗಿ ಗ್ರಂಥವನ್ನೇ ಕೊಟ್ಟಿದ್ದಾನೆ. ಮೂಸಾ ಆದಿನ ಮೋಷೇಯಾಗಿ ಕರೆಯಲ್ಪಡುತ್ತಿದ್ದನೆಂದು ಈದಿನ ಬಹಳ ಜನರಿಗೆ ತಿಳಿದಿಲ್ಲ. ಮೂಸಾಗೆ (ಮೊಷೇಗೆ) ದೇವರು (ಅಲ್ಲಾಹ್) ಜ್ಞಾನವನ್ನು ಕೊಡಲಿಲ್ಲ.

ನೇರವಾಗಿ ಗ್ರಂಥವನ್ನೇ ಕೊಟ್ಟಿದ್ದಾನೆ. ಆದ್ದರಿಂದ ಖುರ್‌ಆನ್ ಗ್ರಂಥದಲ್ಲಿ ಸೂರಾ ಆರು, ಆಯತ್ 91ರಲ್ಲಿ ಹೀಗೆ ಇದೆ. **"ಯಾವ ಮಾನವ ಮಾತ್ರನ ಮೇಲೆ ಅಲ್ಲಾಹ್ ತನ್ನ ಜ್ಞಾನವನ್ನು ಪ್ರಸರಿಸುವಂತೆ ಮಾಡಲಿಲ್ಲ"** ಎಂದು ಇರುವುದನ್ನು ನೋಡಬಹುದು. ಅದೇ ವಾಕ್ಯದಲ್ಲಿ **"ಮೂಸಾಗೆ ಗ್ರಂಥವನ್ನು ಕೊಟ್ಟವನು ಅಥವಾ ಅವತರಿಸುವಂತೆ ಮಾಡಿದವನು ಅಲ್ಲಾಹ್‌ನೇ"** ಎಂದು ಇದೆ.

ಇದೆಲ್ಲವೂ ಖುರ್‌ಆನ್ ಗ್ರಂಥದಲ್ಲಿ ಗಮನಿಸಿದರೇ ಗತ ಚರಿತ್ರೆ ಸ್ವಲ್ಪ ಅರ್ಥವಾಗಬಲ್ಲದು. ಈ ದಿನ ಮೇಧಾವಿಗಳಾಗಿ ಇರುವ ಮುಸ್ಲಿಮ್‌ರು ಕೂಡಾ ಸ್ವತಃವಾಗಿ ಖುರ್‌ಆನ್ ಗ್ರಂಥವನ್ನು ಓದದಂತೆ, ತಮ್ಮ ಹಿರಿಯರು ಹೇಳಿದ ಮಾತುಗಳನ್ನೇ ನಂಬುತ್ತಿದ್ದಾರೆ. ಆದ್ದರಿಂದ ಪವಿತ್ರ ಖುರ್‌ಆನ್ ಗ್ರಂಥದಲ್ಲಿರುವ ಎಷ್ಟೋ ಸತ್ಯಗಳು ಬಹಳ ಜನ ಮುಸ್ಲಿಮ್‌ರಿಗೆ ತಿಳಿಯದಂತೆ ಹೋಗಿವೆ. ಖುರ್‌ಆನ್ ಗ್ರಂಥ ಮುಸ್ಲಿಮ್‌ರದೇ ಎನ್ನುವ ಊಹಾಪೋಹ ಇರುವುದರಿಂದ ಉಳಿದ ಪ್ರಜೆಗಳು ಸಹ ಸತ್ಯವನ್ನು ತಿಳಿಯಲಾರದೆ ಹೋಗಿದ್ದಾರೆ. ಈದಿನ ನಮ್ಮ ಬರಹಗಳಿಂದ ಖುರ್‌ಆನ್ ಗ್ರಂಥದಲ್ಲಿನ ಸತ್ಯವನ್ನು ಎಲ್ಲ ಮತಗಳ ಪ್ರಜೆಗಳು ತಿಳಿಯುತ್ತಿದ್ದಾರೆ. ನಮ್ಮ ದೃಷ್ಠಿಯಲ್ಲಿ ಖುರ್‌ಆನ್ ಒಂದು ಮತ ಗ್ರಂಥ ಅಲ್ಲ. **"ಖುರ್‌ಆನ್ ಸಮಸ್ತ ಪ್ರಜೆಗಳಿಗೆ ಮಾರ್ಗದರ್ಶನವಾಗಿ, ಜ್ಯೋತಿಯಾಗಿ ಇದೆಯೆಂದು"** ನಾವು ಹೇಳುತ್ತಿದ್ದೇವೆ. ತೌರಾತ್ ಎನ್ನಲ್ಪಡುವ ಭಗವದ್ಗೀತೆ, ಇಂಜೀಲ್‌ಯೆನ್ನುವ ಬೈಬಲ್, ಅಂತಿಮ ದೈವ ಗ್ರಂಥವಾದ ಖುರ್‌ಆನ್ ಮೂರೂ ದೈವ ಗ್ರಂಥಗಳೇಯೆಂದು ಹೇಳುತ್ತಿದ್ದೇವೆ. ಯಾರಾದರೂ ಈ ಮೂರು ದೈವಗ್ರಂಥಗಳಲ್ಲಿನ ಜ್ಞಾನವನ್ನು ತಿಳಿದಾಗ ಅವನು ಆಗ ದೇವರ (ಅಲ್ಲಾಹ್) ಧರ್ಮದಲ್ಲಿ ಇರುವಂತೆ ಲೆಕ್ಕಿಸಲ್ಪಡುತ್ತಾನೆ. ಹಾಗಲ್ಲದೆ ಒಂದು ದೈವ ಗ್ರಂಥವನ್ನು ಮಾತ್ರ ಆಶ್ರಯಿಸಿ ಉಳಿದ ಎರಡು ಗ್ರಂಥಗಳನ್ನು ಓದದವನು (ತಿಳಿಯದವನು) ಯಾವ ಧರ್ಮದಲ್ಲಿ ಇಲ್ಲದಂತೆಯೆಂದು ಹೇಳಬಹುದು. ಈ ವಿಷಯವನ್ನು ನಾನು ಹೇಳುವುದೇ ಅಲ್ಲ ಸ್ವತಃವಾಗಿ ಅಂತಿಮ ದೈವ ಗ್ರಂಥವಾದ ಖುರ್‌ಆನ್‌ನಲ್ಲಿ ಸೂರಾ 5, ಆಯತ್ 68ರಲ್ಲಿ ಹೀಗೆ ಇದೆ ನೋಡಿರಿ.

**(5–68) "ಓ ಗ್ರಂಥವಾಹಕರೆ! ನೀವು ತೌರಾತನ್ನು, ಇಂಜೀಲನ್ನು, ನಿಮ್ಮ ಪ್ರಭು ಕಡೆಯಿಂದ ನಿಮ್ಮ ಹತ್ತಿರಕ್ಕೆ ಕಳುಹಿಸಲ್ಪಟ್ಟಿರುವ ಖುರ್‌ಆನ್ ಗ್ರಂಥವನ್ನು ನಿಮ್ಮ ಜೀವನಗಳಲ್ಲಿ ನೆಲೆಗೊಳಿಸುವ ತನಕ ನೀವು ಯಾವ ಧರ್ಮದ ಮೇಲೆಯೂ ಇಲ್ಲದಂತೇ"**

**(62–5) "ತೌರಾತ್ ಗ್ರಂಥದ ಪ್ರಕಾರ ಆಚರಿಸಬೇಕೆಂದು ಆದೇಶಿಸಿದ್ದರೂ ಅದಕ್ಕೆ ಅನುಗುಣವಾಗಿ ಆಚರಿಸದವರು ಎಷ್ಟು ಗ್ರಂಥಗಳನ್ನು ಅನುಸರಿಸಿದರೂ ಅಂತಹವರನ್ನು ಎಷ್ಟೋ ಗ್ರಂಥಗಳನ್ನು ಬೆನ್ನಿನ ಮೇಲೆ ಹೋರುವ ಕತ್ತೆಯಂತಹವ ರೆಂದು ಉಪಮಾನವಾಗಿ ಹೇಳಬಹುದು. ದೇವರ (ಅಲ್ಲಾಹ್) ವಾಕ್ಯವನ್ನು ಧಿಕ್ಕರಿಸಿದವರ ದೃಷ್ಟಾಂತ ಬಹಳ ಕೆಟ್ಟದು. ದುರ್ಮಾರ್ಗದ ಜನರಿಗೆ ಅಲ್ಲಾಹ್ ಸನ್ಮಾರ್ಗವನ್ನು ತೋರಿಸನು."**

**(5–46) "ಆ ಪ್ರವಕ್ತರ ನಂತರ ನಾವು ಮರ್ಯಮ್ (ಮರಿಯಮ್ಮ) ಕುಮಾರ ಈಸಾವನ್ನು (ಯೇಸುವನ್ನು) ಕಳುಹಿಸಿದ್ದೇವೆ. ಆತನು ತನಗೆ ಪೂರ್ವದಲ್ಲಿ ಬಂದಿರುವ ತೌರಾತ್ ಗ್ರಂಥವನ್ನು ಸತ್ಯವೆಂದು ಧೃಢೀಕರಿಸುವನು. ನಾವು ಆತನಿಗೆ ಇಂಜೀಲ್ (ಬೈಬಲ್) ಗ್ರಂಥವನ್ನು ಕೊಟ್ಟಿದ್ದೇವೆ. ಅದರಲ್ಲಿ ಮಾರ್ಗದರ್ಶಕವು, ಜ್ಯೋತಿ ಇದ್ದವು. ಅದು ತನಗೆ ಮೊದಲಿದ್ದ ತೌರಾತ್ ಗ್ರಂಥವನ್ನು ಧೃಢೀಕರಿಸುವುದು. ಅಷ್ಟೇ ಅಲ್ಲದೆ ಅದು ದೈವಭೀತಿ ಇರುವವರಿಗೆ ಮಾರ್ಗದರ್ಶಿನಿಯಾಗಿ, ಹಿತಬೋಧಿನಿಯಾಗಿ ಇತ್ತು."**

**(5–44) "ನಾವು ತೌರಾತ್ ಗ್ರಂಥವನ್ನು ಅವತರಿಸುವಂತೆ ಮಾಡಿದ್ದೇವೆ. ಅದರಲ್ಲಿ ಮಾರ್ಗದರ್ಶನವೂ, ಜ್ಯೋತಿ ಇವೆ. ಈ ತೌರಾತ್ ಗ್ರಂಥದ ಆಧಾರವಾಗಿಯೇ ಮುಸ್ಲಿಮ್‌ರಾದ ಪ್ರವಕ್ತರು, ರಬ್ಬಾನೀಗಳು, ಧರ್ಮಜ್ಞರು, ಯೂದರ ಸಮಸ್ಯೆಗಳನ್ನು ಪರಿಷ್ಕರಿಸುತ್ತಿದ್ದರು."**

ಅಂತಿಮ ದೈವ ಗ್ರಂಥವಾದ ಖುರಾನ್ ಗ್ರಂಥದಲ್ಲಿನ ಮೇಲಿನ ವಾಕ್ಯಗಳನ್ನು ನೋಡಿದ ನಂತರ ಪ್ರತಿಯೊಬ್ಬರು ತೌರಾತ್ ಗ್ರಂಥವನ್ನು ದೊಡ್ಡದಾಗಿ

ಗುರುತಿಸುವುದು ತಪ್ಪುವುದಿಲ್ಲ. ಆದರೆ ತೌರಾತ್ ಗ್ರಂಥವೇ ಭಗವದ್ಗೀತೆಯೆಂದು, ಇಂಜೀಲ್ (ಬೈಬಲ್) ಗಿಂತ ಮೊದಲು ಬಂದಿರುವ ಗ್ರಂಥವೇ ಭಗವದ್ಗೀತೆ ಯೆಂದು, ಅದನ್ನೇ ತೌರಾತ್ ಎಂದು ಸಹ ಕರೆಯುತ್ತಿದ್ದೇವೆಂದು ಪ್ರಜೆಗಳಿಗೆ ತಿಳಿಯದೆ ಹೋಗುವುದರಿಂದ ಮುಸ್ಲಿಮ್‌ರಾದವರು ತೌರಾತ್‌ನ್ನು ಭಗವದ್ಗೀತೆ ಯೆಂದು ನಾವು ಹೇಳುವುದು ಸಹಿಸಿಕೊಳ್ಳಲಾರದೆ ಹೋಗುತ್ತಿದ್ದಾರೆ. ತೌರಾತ್‌ನ್ನು ಭಗವದ್ಗೀತೆಯೆನ್ನುವುದು ತಪ್ಪೆಂದು ಅಸತ್ಯವೆಂದು ಅನ್ನುತ್ತಿದ್ದಾರೆ. ನಮ್ಮ ಮಾತು ಅಸತ್ಯವೆಂದು ನಿರೂಪಿಸುವುದಕ್ಕೆ ನಿಮ್ಮ ಹತ್ತಿರ ಏನಾದರೂ ಆಧಾರವಿದೆಯಾ? ಎಂದು ನಾವು ಪ್ರಶ್ನಿಸುತ್ತಿದ್ದೇವೆ. ನನ್ನ ಮಾತನ್ನು ಅಸತ್ಯವೆಂದು ಹೇಳುವವರು ಯಾರಾದರೂ ಸರಿ ಪ್ರಪಂಚದಲ್ಲಿ ಇದು ತೌರಾತ್ ಗ್ರಂಥವೆಂದು ಪ್ರತ್ಯೇಕಿಸಿ ತೌರಾತ್ ಗ್ರಂಥವನ್ನು ತಂದು ತೋರಿಸಬಲ್ಲಿರಾ?

ನಾನು ದೇವರ ಸೃಷ್ಟಿಯಲ್ಲಿ ದೊಡ್ಡ ರಹಸ್ಯಗಳಾಗಿರುವ ಎಷ್ಟೋ ರಹಸ್ಯಗಳನ್ನು **"ಕೃಷ್ಣ ಮೂಸ"** ಎನ್ನುವ ಗ್ರಂಥದಲ್ಲಿ ಹೇಳಿದ್ದೇನೆ. ಆದರೇ ನನ್ನ ಮಾತನ್ನು ಯಾರೂ ನಂಬದೆ ಹೋಗಬಹುದು. ಮನುಷ್ಯರಿಗೆ ತಿಳಿಯದ ಎಷ್ಟೋ ರಹಸ್ಯಗಳಿವೆಯೆನ್ನುವುದಕ್ಕೆ ನಂಬಿಕೆಯಾಗಿ ನಾನು ಒಂದು ಮಾತನ್ನು ಹೇಳಬಲ್ಲೆನು. ನಾನು ಮನುಷ್ಯನಾಗಿ ಅಸತ್ಯ ಹೇಳುವವನಾಗಿ ಕಾಣಿಸಿದರೂ, ದೇವರು, ಅಲ್ಲಾಹ್ ಅಸತ್ಯ ಹೇಳುವವನು ಅಲ್ಲವೆಂದು ಎಲ್ಲರಿಗೂ ತಿಳಿದಿದೆ. ಬಹಳ ಜನ ಮುಸ್ಲಿಮ್‌ರು ಖುರಾನ್ ಗ್ರಂಥದಲ್ಲಿನ ವಾಕ್ಯಗಳನ್ನು ಸ್ಥೂಲವಾಗಿಯೇ ಹೇಳಿಕೊಳ್ಳುತ್ತಿದ್ದಾರೆ. ಸ್ವತಃವಾಗಿ ಖುರಾನ್ ಗ್ರಂಥದಲ್ಲಿ ಸೂಕ್ಷ್ಮ ವಾಕ್ಯಗಳು (ಮುತಷಾಬಿಹಾತ್ ವಾಕ್ಯಗಳು) ಇವೆಯೆಂದು (3–7) ರಲ್ಲಿ ಹೇಳಿದ್ದರೂ ಅದನ್ನು ಗ್ರಹಿಸದೆ ಎಲ್ಲ ವಾಕ್ಯಗಳನ್ನು ಸ್ಥೂಲವಾಗಿಯೇ ನೋಡುತ್ತಿದ್ದಾರೆ. ಆದ್ದರಿಂದ ಖುರಾನ್ ಭಾವವು ಎಲ್ಲರಿಗೂ ಸರಿಯಾಗಿ ಅರ್ಥವಾಗಲಿಲ್ಲವೆಂದು ಹೇಳಬಹುದು. ನಾನು ಈ ಮಾತನ್ನು ಹೇಳಿದಾಗ ಕೆಲವರು ಮುಸ್ಲಿಮ್ ಹಿರಿಯರು ನಮ್ಮ ಮಾತುಗಳನ್ನು ತಪ್ಪು ಹಿಡಿಯುತ್ತಾ ನಾನು ಖುರಾನ್ ಗ್ರಂಥಕ್ಕೆ ವಿರುದ್ಧವಾಗಿ ಮಾತನಾಡುತ್ತಿದ್ದೇನೆಂದು ಪ್ರಚಾರ ಮಾಡಿ ಮುಸ್ಲಿಮ್‌ರನ್ನು

ತಪ್ಪು ದಾರಿ ಹಿಡಿಸುತ್ತಿದ್ದಾರೆ. ನಮ್ಮ ಮಾತು ನಿಜವೆಂದು ಹೇಳುವುದಕ್ಕೆ **ಏಳು ಆಕಾಶಗಳು ಹೊರಗೆ ಸ್ಥೂಲವಾಗಿ ಇವೆಯೆಂದು** ಮುಸ್ಲಿಮ್ ಹಿರಿಯರು ಹೇಳುವುದರಿಂದ ಎಲ್ಲರನ್ನೂ ಅವರು ತಪ್ಪು ದಾರಿ ಹಿಡಿಸುತ್ತಿದ್ದಾರೆಂದು ಹೇಳದೆಯೇ ತಿಳಿಯುತ್ತಿದೆ. ಅಂತಹವರನ್ನು ನಾನು ಒಂದು ಪ್ರಶ್ನೆ ಕೇಳುತ್ತಿದ್ದೇನೆ. **ದೇವರು ಪ್ರತ್ಯಕ್ಷವಾಗಿ ಯಾರೊಂದಿಗೂ ಮಾತನಾಡುವು ದಿಲ್ಲವೆಂದು** 42ನೆ ಸೂರಾ 51 ನೆ ಆಯತ್‌ನಲ್ಲಿ ಹೇಳಲ್ಪಟ್ಟಿದೆ. ಆ ಮಾತನ್ನು ನಾವು ಸತ್ಯವೆಂದು ಒಪ್ಪಿಕೊಳ್ಳುತ್ತಿದ್ದೇವೆ. ಅದು ದೈವ ಗ್ರಂಥದಲ್ಲಿನ ದೈವವಾಕ್ ಎಂದು ಲೆಕ್ಕಿಸುತ್ತಿದ್ದೇವೆ. ಆ ಮಾತಿನ ಪ್ರಕಾರ ಅಲ್ಲಾಹ್ ಯಾರೊಂದಿಗೂ ಮಾತನಾಡುವುದಿಲ್ಲವೆಂದು ಪ್ರತಿ ಮುಸ್ಲಿಮ್ ಒಪ್ಪಿಕೊಳ್ಳದೆ ತಪ್ಪುವುದಿಲ್ಲ. ಆದರೆ ಅದೇ ಖುರ್‌ಆನ್ ಗ್ರಂಥದಲ್ಲಿ ಸೂರಾ ನಾಲ್ಕು (4) ಆಯತ್ 164 ರಲ್ಲಿ ಹೀಗೆ ಹೇಳಿದ್ದಾರೆ ನೋಡಿರಿ.

**(4–164) "ವಾಸ್ತವವಾಗಿ ನಾವು ಕಳುಹಿಸಿದ ಪ್ರವಕ್ತರಲ್ಲಿ ಕೆಲವರ ಗಾಥೆಗಳನ್ನು ನಿನಗೆ ತಿಳಿಸಿದ್ದೇವೆ. ಇತರೆ ಪ್ರವಕ್ತರ ಕುರಿತು ನಾವು ನಿನಗೆ ತಿಳಿಸಲಿಲ್ಲ. ಆದರೆ ಅಲ್ಲಾಹ್ ಮೂಸಾಯೊಂದಿಗೆ ನೇರವಾಗಿ ಮಾತನಾಡಿದ್ದಾನೆ."**

ಈ ವಾಕ್ಯವನ್ನು ನೋಡಿದರೆ 42–51 ರಲ್ಲಿ ಇರುವ ವಾಕ್ಯಕ್ಕೆ ವಿರುದ್ಧವಾಗಿ ಇದೆ. ಅದರಲ್ಲಿ ದೇವರು ಯಾವ ಮಾನವನೊಂದಿಗೂ ನೇರವಾಗಿ ಮಾತನಾಡುವು ದಿಲ್ಲವೆಂದು ಹೇಳಿದ್ದಾರೆ. ಈಗ 4–164 ರಲ್ಲಿ ದೇವರು ಮೂಸಾ ಪ್ರವಕ್ತನೊಂದಿಗೆ ಮಾತನಾಡಿದಂತೆ ಹೇಳಿರುವುದರಿಂದ ಯಾವುದು ಸತ್ಯ? ಯಾವುದು ಅಸತ್ಯ? ಎನ್ನುವ ಸಂಶಯ ಬರುತ್ತಿದೆ. ಇದಕ್ಕೆ ನನ್ನನ್ನು ವಿಮರ್ಶಿಸುವವರು ಸಮಾಧಾನ ಹೇಳಬಲ್ಲಿರಾ? ಹೇಳಲಾರರು. ಒಂದು ಕಡೆ **ಅಲ್ಲಾಹ್ ಮಾತನಾಡುವುದಿಲ್ಲವೆಂದು,** ಮತ್ತೊಂದು ಕಡೆ **ಅಲ್ಲಾಹ್ ಮಾತನಾಡುತ್ತಾನೆಂದು** ಹೇಳುವುದರಿಂದ ಒಂದು ವಾಕ್ಯವನ್ನು ತಪ್ಪುಯೆಂದು ಹೇಳುವುದು ತಪ್ಪುವುದಿಲ್ಲ. ಒಂದು ಕಡೆ **ಅಲ್ಲಾಹ್ ಯಾವ ಕೆಲಸ ಮಾಡುವುದಿಲ್ಲ** ಎಂದು ಹೇಳಿ ಮತ್ತೊಂದು ಕಡೆ **ಅಲ್ಲಾಹ್ ಯಾವಾಗಲೂ ಕೆಲಸ ಮಾಡುತ್ತಿದ್ದಾನೆಂದು** ಹೇಳುತ್ತಿದ್ದಾರೆ. 6–102 ರಲ್ಲಿ **'ಅಲ್ಲಾಹ್ ಕಾರ್ಯಕರ್ತನಾಗಿ**

**ಇದ್ದಾನೆಂದು'** ಹೇಳುವುದು ನಡೆದಿದೆ. ಅಲ್ಲಿಯೂ ಸಹ ಎರಡು ವಿಧಗಳಾಗಿ ಹೇಳುವುದರಿಂದ ಅಲ್ಲಾಹ್ ಕೆಲಸಮಾಡುವನಾ? ಅಥವಾ ಕೆಲಸ ಮಾಡುವುದಿಲ್ಲವಾ? ಎನ್ನುವ ಸಂಶಯ ಬರುತ್ತಿದೆ. ಸೂಕ್ಷ್ಮಜ್ಞಾನ ತಿಳಿಯದೆ ಕೇವಲ ಸ್ಥೂಲಜ್ಞಾನ ಹೇಳುವವರು ಯಾವುದೋ ಒಂದು ವಾಕ್ಯವನ್ನು ಅಸತ್ಯವೆಂದು ಹೇಳುವುದು ತಪ್ಪುವುದಿಲ್ಲ. ಕೆಲವರು ಯಾವ ಉತ್ತರ ಹೇಳದ ಸ್ಥಿತಿಯಲ್ಲಿ ನಿಂತುಹೋಗುವರು.

ತೌರಾತ್‌ನ್ನು ಭಗವದ್ಗೀತೆಯೆಂದು ತಿಳಿದವರು ಮಾತ್ರವೆ ಇಂತಹ ಕಷ್ಟವಾದ ವಾಕ್ಯಗಳಿಗೆ ಉತ್ತರವನ್ನು ಹೇಳಬಲ್ಲರು. ಏಕೆಂದರೆ! ಭಗವದ್ಗೀತೆಯಲ್ಲಿ ಸೂಕ್ಷ್ಮವಾದ ವಾಕ್ಯಗಳ ವಿವರಗಳಿವೆ. ಯಾರು ಭಗವದ್ಗೀತೆಯನ್ನು (ತೌರಾತ್‌ನ್ನು) ತಿಳಿಯುತ್ತಾನೊ, ಅವನು ಎಂತಹ ಕಷ್ಟವಾದ ವಾಕ್ಯಗಳಿಗಾದರೂ ಮತ್ತು ದ್ವಂದ್ವಾರ್ಥಗಳನ್ನು ಕೊಡುವ ವಾಕ್ಯಗಳಿಗಾದರೂ ಉತ್ತರಗಳನ್ನು ವಿವರವಾಗಿ ಹೇಳಬಲ್ಲನು. ಭಗವದ್ಗೀತೆ ಜ್ಞಾನ ತಿಳಿದವನು ಇತ್ತ ಬೈಬಲ್ ಗ್ರಂಥದಲ್ಲಿನ ವಾಕ್ಯಗಳಿಗಾದರೂ, ಅತ್ತ ಖುರಾನ್ ಗ್ರಂಥದಲ್ಲಿನ ವಾಕ್ಯಗಳಿಗಾದರೂ ಉತ್ತರವನ್ನು ಹೇಳುವ ಸಾಮರ್ಥ್ಯ ಹೊಂದಿರುತ್ತಾನೆ. ತೌರಾತ್ ಎನ್ನುವುದು ಭಗವದ್ಗೀತೆ ರೂಪದಲ್ಲಿದೆಯೆಂದು ತಿಳಿಯದವರು ತೌರಾತ್‌ನ್ನು ತಿಳಿಯದವರೆಂದೇ ಹೇಳಬಹುದು. ತೌರಾತ್‌ನ್ನು ತಿಳಿಯದವರು ಬೈಬಲ್‌ನಲ್ಲಿ ಕಷ್ಟವಾದ ಸೂಕ್ಷ್ಮ ವಾಕ್ಯಗಳಿಗು ಮತ್ತು ಖುರಾನ್‌ನಲ್ಲಿನ ಸೂಕ್ಷ್ಮ ವಾಕ್ಯಗಳಿಗೂ ವಿವರವನ್ನು ಹೇಳಲಾರರು. ನನಗೆ ಭಗವದ್ಗೀತೆಯೇ ತೌರಾತ್ ಗ್ರಂಥವೆಂದು ಸಂಪೂರ್ಣವಾಗಿ ತಿಳಿದಿದೆ. ಅಷ್ಟೇ ಅಲ್ಲದೆ ಭಗವದ್ಗೀತೆಗೆ ಹೇಗೆ ಹೆಸರು ಬಂದಿದೆ, ಅದು ಯಾರಿಂದ ಹೇಳಲ್ಪಟ್ಟಿದೆ, ಹಾಗೆ ಅದು ಯಾರಿಂದ ಬರೆಯಲ್ಪಟ್ಟಿರುವುದೂ ನನಗೆ ತಿಳಿದಿದೆ. ಇನ್ನೂ ಭಗವದ್ಗೀತೆಯಾಗಿ ಮೊದಲು ಕರೆಯಲ್ಪಟ್ಟಿರುವ ಗ್ರಂಥಕ್ಕೆ ತೌರಾತ್ ಎನ್ನುವ ಹೆಸರು ಹೇಗೆ ಬಂದಿದೆ, ಯಾವಾಗ ಬಂದಿರುವುದು ತಿಳಿದಿದೆ. ತೌರಾತ್ ಎಂದು ಹೆಸರು ಇಡಲ್ಪಟ್ಟಿರುವ ಗ್ರಂಥವನ್ನು ನೇರವಾಗಿ ದೇವರು (ಅಲ್ಲಾಹ್) ಮೋಷೇಗೆ ಹೇಗೆ ಕೊಟ್ಟಿರುವುದು (ಮೂಸಾಗೆ ಹೇಗೆ

ಕೊಟ್ಟಿರುವುದು) ನನಗೆ ತಿಳಿದಿದೆ. ಯಾರಿಗೂ ತಿಳಿಯದ ಆ ರಹಸ್ಯವನ್ನು **"ಕೃಷ್ಣ ಮೂಸ"** ಎನ್ನುವ ಗ್ರಂಥದಲ್ಲಿ ನಾವು ಬರೆಯುವುದು ಸಹ ನಡೆದಿದೆ.

ತೌರಾತ್ ಭಗವದ್ಗೀತೆ ಅಲ್ಲವೆಂದು, ನಾನು ಹೇಳಿರುವುದು ತಪ್ಪೆಂದು ಹೇಳುವವರು ಯಾರಾದರೂ ಸರಿ ಅವರು ತೌರಾತ್ ಗ್ರಂಥವನ್ನು ತೋರಿಸಬಲ್ಲಿರಾ? ತೌರಾತ್ ಗ್ರಂಥದ ನಂತರ 3000 ವರ್ಷಗಳಿಗೆ ಬೈಬಲ್, ಬೈಬಲ್ ನಂತರ 600 ವರ್ಷಗಳಿಗೆ ಖುರಾನ್ ಗ್ರಂಥ ತಯಾರಾಗಿದೆ. ತೌರಾತ್‌ಗಿಂತ ಮೊದಲು ಜಬುರ ಗ್ರಂಥವಿದೆಯೆಂದು ಅದನ್ನು ದಾವೂದ್ ಪ್ರವಕ್ತಗೆ ಕೊಟ್ಟಿದ್ದೇವೆಂದು ಹೇಳಿದಂತೆ 4–163 ರಲ್ಲಿ ಹೇಳಲ್ಪಟ್ಟಿದೆ. ಅಲ್ಲಿ ಹೇಳಿದ ದಾವೂದ್‌ಗೆ ಕೊಟ್ಟಿರುವ ಜಬುರ ಗ್ರಂಥವನ್ನಾಗಲೀ, ಮೂಸಾಗೆ ಕೊಟ್ಟಿರುವ ತೌರಾತ್ ಗ್ರಂಥವನ್ನಾಗಲಿ ಯಾರಾದರೂ ತಂದು ತೋರಿಸಬಲ್ಲಿರಾ? ಅವು ಪ್ರತ್ಯೇಕವಾಗಿ ಇವೆಯೆಂದು ನಿರೂಪಿಸಬಲ್ಲಿರಾ? ಆ ಎರಡು ಗ್ರಂಥಗಳನ್ನು ನೀವಾಗಲೀ, ನಿಮ್ಮ ಹಿರಿಯರಾಗಲಿ ನೋಡಿದ್ದಾರಾ? ಎಂದು ಪ್ರಶ್ನಿಸುತ್ತಿದ್ದೇನೆ. ಯಾರೂ ನೋಡದಂತೆ ತಮಗೆ ಎಲ್ಲಾ ತಿಳಿದಂತೆ ನಾವು ಹೇಳುವುದು ಅಸತ್ಯವೆಂದು, ಭಗವದ್ಗೀತೆ ತೌರಾತ್ ಅಲ್ಲವೆಂದು ಹೇಗೆ ಹೇಳಬಲ್ಲಿರಾ? ನನ್ನ ಪ್ರಶ್ನೆಗೆ ಬಹುಶಃ ಉತ್ತರ ಇರುವುದಿಲ್ಲ. ಆದ್ದರಿಂದ ಎದುರಿಗಿರುವ ಮನುಷ್ಯ ಹೇಳುವುದು ಸತ್ಯವಾ, ಅಸತ್ಯವಾಯೆಂದು ಆಲೋಚಿಸದಂತೆ ಮಾತನಾಡಬೇಡಿ. ಹಿರಿಯರು ತಮ್ಮವರೆಂದು, ಅವರು ಹೇಳುವುದೆಲ್ಲಾ ಸತ್ಯವೆಂದು ತಿಳಿಯಬೇಡಿ. 6–91ರಲ್ಲಿ "ತೌರಾತ್‌ನಲ್ಲಿನ ವಿಷಯಗಳು ನಿಮಗಾಗಲೀ, ನಿಮ್ಮ ಹಿರಿಯರಿಗಾಗಲೀ ತಿಳಿದಿಲ್ಲ" ಎಂದು ಹೇಳಿದ ಖುರ್‌ಆನ್ ಮಾತನ್ನು ಜ್ಞಾಪಕವಿಟ್ಟುಕೊಳ್ಳಿ. ಖುರಾನ್‌ನಲ್ಲಿನ ಸಮಾಚಾರ ತೌರಾತ್ ಗ್ರಂಥದೊಳಗಿನದೇ ಆಗಿರುವುದರಿಂದ ಪ್ರತಿಯೊಬ್ಬರೂ ವಿಚಕ್ಷಣೆಯಿಂದ, ಮೇದಸ್ಸನ್ನು ಉಪಯೋಗಿಸಿ ಖುರ್‌ಆನ್ ಗ್ರಂಥವನ್ನು ಓದಿರಿ. ಆಗ ಖುರಾನ್‌ನಲ್ಲಿನ ವಾಕ್ಯಗಳ ಔನ್ನತ್ಯ ನಿಮಗೆ ತಿಳಿಯಬಲ್ಲದು. ಆಗ ಅದನ್ನನುಸರಿಸಿ ತೌರಾತ್ ಎಂದರೆ ಹೇಗಿರುತ್ತದೋ ತಿಳಿಯಬಲ್ಲದು. ಈ ದಿನ ಭಗವದ್ಗಿತೆ ಸಾರಾಂಶ ತಿಳಿಯದ ಹಿಂದೂಗಳು,

ಬೈಬಲ್ ವಾಕ್ಯದಲ್ಲಿನ **ತಂದೆ, ಕುಮಾರನು** ಯಾರೋ ತಿಳಿಯದ ಕ್ರೈಸ್ತರು, ಖುರ್‌ಆನ್ ಗ್ರಂಥವೊಂದರ ಸೂಕ್ಷ್ಮವಾಕ್ಯಗಳನ್ನು ಬಿಟ್ಟು ಸ್ಥೂಲವನ್ನು ಆಶ್ರಯಿಸಿದ ಮುಸ್ಲಿಮ್‌ರು ಇರುವುದರಿಂದ ತೌರಾತ್ ಎಂದರೆ ಏನೋ ತಿಳಿಯದೆ, ತಮ್ಮ ಗ್ರಂಥ ತೌರಾತ್ ಗ್ರಂಥದಲ್ಲಿನ ಭಾಗವೇಯೆಂದು ಮುಸ್ಲಿಮ್‌ರು ಮತ್ತು ಕ್ರೈಸ್ತರು ತಿಳಿಯಲಾರದೆ ಹೋಗಿದ್ದಾರೆ.

**ಪ್ರಶ್ನೆ :– ನಿಮ್ಮ ಮೇಲೆ ಅಪೋಹ ಇದೆ. ನೀವು ಮತಾಂತರಿಸದಿದ್ದರೂ, ಮತ ಆಚಾರಗಳನ್ನು ಪಾಟಿಸುವವರನ್ನು ಸ್ವಲ್ಪ ತಪ್ಪು ದಾರಿ ಹಿಡಿಸುತ್ತಿದ್ದೀರೆಂದು, ಅವರ ಮತಾಚಾರಗಳನ್ನು ಅವರು ಪಾಟಿಸಿರೆಂದು ಹೇಳಿದರೂ, ಹೊಸದಾಗಿ ಮುಸ್ಲಿಮ್‌ರಿಗೆ ಹಣೆಯ ಮೇಲೆ ನಾಲ್ಕು ಚಕ್ರಗಳ ಗುರುತನ್ನು ದೇವರ ಮುದ್ರೆಯಾಗಿ ಧರಿಸಿರೆಂದು ನೀವು ಹೇಳುತ್ತಿದ್ದಂತೆ ಕೆಲವರು ಮುಸ್ಲಿಮ್‌ರು ಅಂದುಕೊಳ್ಳುವುದು ನಡೆಯುತ್ತಿದೆ. ಅವರ ಮತದಲ್ಲಿ ಇಲ್ಲದ ಆಚಾರವನ್ನು ನೀವು ಏಕೆ ಹೇಳಿದಂತೆ? ನೀವು ಹೇಳಿದ್ದೀರೆಂದು ಅದರಿಂದ ಅವರ ಮತ ವಿಚ್ಛಿನ್ನ ಆಗಬಲ್ಲದೆಂದುಕೊಳ್ಳುತ್ತಿದ್ದಾರೆ. ನೀವು ಅಂತಹ ಕೆಲಸವನ್ನು ಏಕೆ ಮಾಡುತ್ತಿದ್ದೀರ?**

**ಉತ್ತರ :–** ನಾನು ದೈವಜ್ಞಾನವನ್ನು ಹೇಳುವವನೇ ಹೊರತು ಮತ ಆಚಾರ ವಿಷಯಗಳ ತಂಟೆಗೆ ಹೋಗುವವನಲ್ಲ. ದೇವರ ಮುದ್ರೆಯನ್ನು ಮುಸ್ಲಿಮ್‌ರ ಹಣೆಯ ಮೇಲೆ ಧರಿಸಲು ನಾನು ಹೇಳಿದ್ದೇನೆನ್ನುವುದು ನೀವೆಂದಹಾಗೆ ಅದು ಒಂದು ಅಪೋಹ ಮಾತ್ರವೇ ಹೊರತು ವಾಸ್ತವವಲ್ಲ. ದೇವರ ಮುದ್ರೆಯನ್ನು ಕುರಿತು ದೈವ ಗ್ರಂಥಗಳಲ್ಲಿ ಇರುವ ಜ್ಞಾನವನ್ನು ಹೇಳಿದ್ದೇವೆ ಆದರೆ ಯಾರನ್ನೂ ಧರಿಸಿರೆಂದು ಹೇಳಲಿಲ್ಲ. ಮೂರು ಮತಗಳಲ್ಲಿ ಯಾವ ಮತದವರಿಗೂ ಪ್ರತ್ಯೇಕವಾಗಿ ದೇವರ ಮುದ್ರೆಯನ್ನು ಧರಿಸಲು ನಾನು ಹೇಳಲಿಲ್ಲ. ದೇವರ ಮುದ್ರೆಯನ್ನು ಕುರಿತು ಪ್ರತ್ಯಕ್ಷವಾಗಿ ಇಂಜೀಲ್ (ಬೈಬಲ್) ಗ್ರಂಥದಲ್ಲಿಯೂ, ಪರೋಕ್ಷವಾಗಿ ಅಂತಿಮ ದೈವಗ್ರಂಥವಾದ ಖುರ್‌ಆನ್ ಗ್ರಂಥದಲ್ಲಿಯೂ ಇರುವ ವಿಷಯವನ್ನು ವಿವರಿಸಿ ಮೂರು ಮತದವರಿಗೂ ಅರ್ಥವಾಗುವಂತೆ ಹೇಳಿದ್ದೇವೆ.

ಬೈಬಲ್ ಗ್ರಂಥದಲ್ಲಿ ಕೊನೆಯ ಪಾಠವಾದ ಯೋಹಾನ್ ಪ್ರಕಟನೆಗಳ ಗ್ರಂಥದಲ್ಲಿ ಅಧ್ಯಾಯ 9, ವಚನಗಳು 4,5,6 ರಲ್ಲಿ ಇರುವ ವಿಷಯವನ್ನು ವಿವರಿಸಿ ಹೇಳಿದ್ದೇವೆ. ಹಾಗೆಯೇ ಖುರ್‌ಆನ್ ಗ್ರಂಥದಲ್ಲಿ ಸೂರಾ 5, ಆಯತ್ 2 ರಲ್ಲಿಯೂ ಮತ್ತು ಸೂರಾ 22, ಆಯತ್ 32ರಲ್ಲಿಯೂ ಹೇಳಲ್ಪಟ್ಟಿರುವ ವಿಷಯವನ್ನು ವಿಶಧೀಕರಿಸಿ ಹೇಳಿದ್ದೇವೆ. ನಾನು ಹೇಳಿರುವುದು ಎರಡು ದೈವಗ್ರಂಥಗಳಲ್ಲಿ ವಾಕ್ಯ ರೂಪವಾಗಿರುವ ಜ್ಞಾನವನ್ನು ನನಗೆ ದೇವರು ತಿಳಿಸಿದ ವಿವರದ ಪ್ರಕಾರ ಹೇಳಿದ್ದೇವೆ. ಭಗವದ್ಗೀತೆಯಲ್ಲಿ ಅಕ್ಷರ ಪರಬ್ರಹ್ಮಯೋಗದಲ್ಲಿ ದೇವರ ಮುದ್ರೆಯನ್ನು ಪ್ರತ್ಯಕ್ಷವಾಗಿ ಹೇಳದಿದ್ದರೂ, ಪರೋಕ್ಷವಾಗಿ ಹೇಳಿರುವ ವಿಷಯವನ್ನು ಸಹ ಹೇಳಿದ್ದೇವೆ. ದೇವರ ಮುದ್ರೆ ಆಕಾರವನ್ನು ಬೈಬಲ್‌ನಲ್ಲಾಗಲೀ, ಖುರ್‌ಆನ್‌ನಲ್ಲಾಗಲೀ ಇದೂಯೆಂದು ನಿರ್ಧಾರಣೆ ಮಾಡಿ ಹೇಳಲಿಲ್ಲ. ಆದರೇ ಭಗವದ್ಗೀತೆಯಲ್ಲಿ ದೇವರ ಮುದ್ರೆ ಆಕಾರ ಸುಲಭವಾಗಿ ತಿಳಿದುಹೋಗುತ್ತಿದೆ. ಹಾಗೆ ತಿಳಿದಿರುವುದನ್ನು ನಾನು ಚಿತ್ರೀಕರಿಸಿ ಪ್ರಜೆಗಳಿಗೆ ತಿಳಿಸಿದ್ದೇವೆ ಹೊರತು ಒಂದು ಮತವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಲಿಲ್ಲ. ಮೂರು ದೈವ ಗ್ರಂಥಗಳಲ್ಲಿನ ದೈವಜ್ಞಾನ ಪ್ರಜೆಗಳ ಎಲ್ಲರ ಸ್ವತ್ತು. ಅಷ್ಟೇ ಹೊರತು ಯಾವ ಗ್ರಂಥದಲ್ಲಿನ ಜ್ಞಾನವಾದರೂ ಇಂತಹ ಮತದವರಿಗೇಯೆಂದು ಹೇಳುವುದು ತಪ್ಪು. ಹಾಗೆ ಹೇಳುವುದು ಅಲ್ಲಾಹ್ (ದೇವರು) ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ದೇವರ (ಅಲ್ಲಾಹ್) ಚಿತ್ತಾನು ಸಾರ ದೇವರ ಮುದ್ರೆಯನ್ನು ಕುರಿತು ಮೂರು ಮತಗಳಲ್ಲಿನ ಪ್ರಜೆಗಳೆಲ್ಲರಿಗೂ ಹೇಳಿದ್ದೇವೆ.

ನಾವು ಹೇಳಿದ ದೇವರ ಮುದ್ರೆ ಜ್ಞಾನವನ್ನು ಕೇಳಿದ ಕೆಲವರು ದೇವರ ಮುದ್ರೆಯನ್ನು ಅವರ ಹಣೆಯ ಭಾಗದಲ್ಲಿ ಧರಿಸುತ್ತಿದ್ದಾರೆ. ನಮ್ಮ ಹತ್ತಿರಕ್ಕೆ ಬಂದು ನಮ್ಮ ಬೋಧನೆಗಳನ್ನು ಕೇಳುತ್ತಿರುವ ಎಲ್ಲರೂ ದೇವರ ಮುದ್ರೆಯನ್ನು ಧರಿಸಲಿಲ್ಲ ಆದರೆ, ಕೆಲವರು ಕ್ರೈಸ್ಥರು, ಕೆಲವರು ಮುಸ್ಲಿಮ್‌ರು ಧರಿಸುತ್ತಿದ್ದಾರೆ. ಹಿಂದೂಗಳಲ್ಲಿ ಬಹಳ ಜನ ಧರಿಸುವುದು ನಡೆಯುತ್ತಿದೆ. ಹೊಸದಾಗಿ ಬಂದಿರುವ ಆಕಾರ **ದೇವರ ಮುದ್ರೆ** ಆಗಿರುವುದರಿಂದ ಇದನ್ನು ಕುರಿತು ಹಿಂದೂಗಳಲ್ಲಿ

ಕೂಡಾ ಕೆಲವರು ವಿಮರ್ಶಿಸುತ್ತಿದ್ದಾರೆ. ಹಾಗೆಯೇ ಕ್ರೈಸ್ಥರಲ್ಲಿಯೂ ಮುಸ್ಲಿಮ್‌ರಲ್ಲಿಯೂ ಸಹ ದೊಡ್ಡ ಮಟ್ಟದಲ್ಲಿ ವಿಮರ್ಶೆಗಳು ಇವೆ. ಎಲ್ಲ ವಿಮರ್ಶೆಗಳಿಗು ಸಹಿಸಿಕೊಂಡು, ಎಲ್ಲರಿಗು ಉತ್ತರ ಹೇಳುವ ಸಾಮರ್ಥ್ಯವಿರುವ ಕೆಲವು ಮಂದಿ ಮುಸ್ಲಿಮ್‌ರು, ಕ್ರೈಸ್ಥರು ಧೈರ್ಯವಾಗಿ ಧರಿಸುತ್ತಿದ್ದಾರೆ. ಕ್ರೈಸ್ತವಮತದಲ್ಲಿ **'ಯೋಹಾನ್ ಪ್ರಕಟನೆಗಳ ಗ್ರಂಥ'** ಎನ್ನುವ ಪಾಠದಲ್ಲಿ ಅಧ್ಯಾಯ ಒಂಭತ್ತು, ವಾಕ್ಯ ನಾಲ್ಕು, ಐದು, ಆರರಲ್ಲಿ ಹೇಳಿರುವ ವಿಷಯವನ್ನು ಈಗ ನಾವು ನೋಡೋಣ.

**(9–4) "ಹಣೆಯ ಮೇಲೆ ದೇವರಮುದ್ರೆ ಇಲ್ಲದ ಮನುಷ್ಯರಿಗೇ ಹೊರತು ಭೂಮಿ ಮೇಲೆ ಇರುವ ಹುಲ್ಲಿಗಾದರೂ, ಯಾವ ಸಸಿಗಾದರೂ, ಮತ್ತು ಯಾವ ವೃಕ್ಷಕ್ಕಾದರೂ ಹಾನಿ ಉಂಟುಮಾಡಬಾರದೆಂದು ಅವುಗಳಿಗೆ ಆಜ್ಞೆ ಕೊಡಲ್ಪಟ್ಟಿದೆ."**

**(9–5) "ಅವರನ್ನು ಸಾಯಿಸುವುದಕ್ಕೆ ಆಜ್ಞೆ ಕೊಟ್ಟಿಲ್ಲ ಆದರೆ ಐದು ತಿಂಗಳವರೆಗು ಹಿಂಸಿಸುವುದಕ್ಕೆ ಅವುಗಳಿಗೆ ಅಧಿಕಾರ ಕೊಡಲಾಗಿದೆ. ಅವುಗಳಿಂದ ಉಂಟಾಗುವ ಬಾಧೆ ಚೇಳು ಮನುಷ್ಯನನ್ನು ಕುಟುಕಿದಾಗ ಇರುವ ನೋವಿನ ಹಾಗೆ ಇರುತ್ತದೆ."**

**(9–6) "ಆ ದಿನಗಳಲ್ಲಿ ಮನುಷ್ಯರು ಮರಣವನ್ನು ಹುಡುಕುವರು ಆದರೆ ಅದು ಅವರಿಗೆ ಸಿಗುವುದೇ ಇಲ್ಲ. ಸಾಯಬೇಕೆಂದು ಆಸೆ ಪಡುವರು ಆದರೆ ಮರಣ ಅವರ ಹತ್ತಿರದಿಂದ ಓಡಿಹೋಗುತ್ತದೆ."**

ಈ ವಿಧವಾಗಿ ದ್ವಿತೀಯ ದೈವ ಗ್ರಂಥ ಬೈಬಲ್‌ನಲ್ಲಿ ಹೇಳಿದ್ದಾರೆ. ಅಲ್ಲಿ ಹೇಳಿದ ವಿಷಯವನ್ನೇ ನಾನು ವಿಶಧೀಕರಿಸಿ ದೇವರ ಮುದ್ರೆ ಆಕಾರವನ್ನು ಹೇಳಲಾಗಿದೆ. ಜ್ಞಾನ ಅರ್ಥವಾದವರು ದೇವದೂತರಿಗೆ ದೇವರು ಕೊಟ್ಟಿರುವ ಆಜ್ಞೆಯನ್ನು ಗಮನಿಸಿ ಭವಿಷ್ಯತ್ ಕಾಲದಲ್ಲಿ ದೇವರ ದೂತರ ಶಿಕ್ಷೆಗಳಿಂದ ತಪ್ಪಿಸಿಕೊಳ್ಳುವುದಕ್ಕೆ ದೇವರ ಮುದ್ರೆಯನ್ನು ಧರಿಸಿದ್ದಾರೆ. ಕೆಲವರು ಅವರವರ ಮತಗಳವರಿಗೆ ಭಯಪಟ್ಟು ದೇವರ ಮುದ್ರೆಯನ್ನು ಧರಿಸಲಿಲ್ಲ. ಧರಿಸದವರಿಗೆ ಧರಿಸಿರೆಂದು ನಾನು ಎಂದಿಗೂ, ಯಾವ ಮತಸ್ಥನಿಗೂ ಹೇಳಲಿಲ್ಲ. ಮುಸ್ಲಿಮ್‌ರು

ಕೇವಲ ನೂರಕ್ಕೆ ಶೇ.ಒಂದರಷ್ಟು ಮಾತ್ರವೇ ದೇವರ ಮುದ್ರೆಯನ್ನು ಧರಿಸುತ್ತಿದ್ದಾರೆ. ಅದೂ ಹೊರಗಿನ ಸಮಾಜದಲ್ಲಿ ಇರುವಾಗ ಧರಿಸದೆ ಜ್ಞಾನ ಬೋಧನೆಗಳು ನಡೆಯುವಾಗ ಮಾತ್ರ ಕೆಲವರು ಧರಿಸುತ್ತಿದ್ದಾರೆ. ಕೆಲವರು ಧರಿಸುತ್ತಿಲ್ಲ. ಮುದ್ರೆಯನ್ನು ಧರಿಸಿದವರನ್ನು ನೀನು ಏಕೆ ಧರಿಸಿದ್ದೀಯೆಂದಾಗಲೀ, ಧರಿಸದವರನ್ನು ನೀವು ಏಕೆ ಧರಿಸಲಿಲ್ಲವೆಂದಾಗಲೀ ನಾನು ಕೇಳುತ್ತಿಲ್ಲ. ಜ್ಞಾನ ತಿಳಿಸುವುದೇ ನನ್ನ ಕೆಲಸ ಉಳಿದಿದ್ದೆಲ್ಲಾ ನನಗೆ ಸಂಬಂಧವಿಲ್ಲ. ಮುದ್ರೆ ಧರಿಸುವವರನ್ನು ನೋಡಿ ಇವರದ್ದು ಮೂರು ಮತಗಳು ಅಲ್ಲದ ಹೊಸ ಮತವೆಂದು ಕೆಲವರು ಹೇಳುತ್ತಿರುವುದನ್ನು ಸಹ ನೋಡಿದ್ದೇವೆ. ಆದರೂ ನನ್ನ ವಿಧಾನ ದೈವಜ್ಞಾನ ತಿಳಿಸುವುದೇ ಹೊರತು, ಮತವನ್ನಾಗಲೀ, ಮತ ಆಚಾರಗಳನ್ನು ಕುರಿತು ಹೇಳುವುದಾಗಲಿ ನನ್ನ ಕೆಲಸವಲ್ಲ.

**ಪ್ರಶ್ನೆ :– ನೀವು ಭಗವದ್ಗೀತೆ (ತೌರಾತ್), ಇಂಜೀಲ್ (ಬೈಬಲ್), ಖುರ್ಆನ್ ಮೂರು ಗ್ರಂಥಗಳನ್ನು ದೈವ ಗ್ರಂಥಗಳು ಎಂದು ಅನ್ನುತ್ತಿದ್ದೀರ. ಉಳಿದ ಪ್ರಜೆಗಳು ಮೂರು ಗ್ರಂಥಗಳನ್ನು ದೈವ ಗ್ರಂಥಗಳಾಗಿ ಒಪ್ಪಿಕೊಳ್ಳದೆ ನಮ್ಮದು ಮಾತ್ರವೇ ದೈವ ಗ್ರಂಥವೆಂದು, ಉಳಿದವುಗಳು ಎರಡು ಮಾಯೆ ಗ್ರಂಥಗಳೆಂದು ಅನ್ನುತ್ತಿದ್ದಾರೆ. ಯಾರ ಗ್ರಂಥ ಅವರಿಗೆ ದೊಡ್ಡದಾಗಿಯೇ ಇರುತ್ತದೆ. ಆದ್ದರಿಂದ ಉಳಿದ ಎರಡು ಗ್ರಂಥಗಳನ್ನು ತಮ್ಮವು ಅಲ್ಲವೆಂದೂ, ಅವುಗಳನ್ನು ಮುಟ್ಟಿಕೊಳ್ಳುವುದು ಸಹ ಮಾಡದಂತೆ ದೂರವಾಗಿ ಇಡುತ್ತಿದ್ದಾರೆ. ಪ್ರಜೆಗಳೆಲ್ಲರೂ ತಮ್ಮ ತಮ್ಮ ಗ್ರಂಥಗಳನ್ನು ದೊಡ್ಡದಾಗಿ ಹೇಳಿಕೊಂಡರೂ, ದೈವಗ್ರಂಥಗಳೆಂದರೂ, ಕೊನೆಗೆ ಅವುಗಳನ್ನು ತಮ್ಮ ಮತ ಗ್ರಂಥವೆಂದು ಹೇಳುತ್ತಿದ್ದಾರೆ. ಹಾಗೆ ಅವರು ಹೇಳಿದಂತೆ ಮೂರು ಗ್ರಂಥಗಳು ಮತ ಗ್ರಂಥಗಳು ಅಲ್ಲವಾ?**

**ಉತ್ತರ :–** ಭಗವದ್ಗೀತೆ (5160 ವರ್ಷಗಳ ಪೂರ್ವದಲ್ಲಿ), ಬೈಬಲ್ (2015 ವರ್ಷಗಳ ಪೂರ್ವದಲ್ಲಿ), ಖುರ್ಆನ್ (1400 ವರ್ಷಗಳ ಪೂರ್ವದಲ್ಲಿ) ತಯಾರಾದ ಮೂರು ಗ್ರಂಥಗಳು ದೈವ ಗ್ರಂಥಗಳೆಂದು ಹೇಳುವುದಕ್ಕೆ ಅರ್ಹತೆಯಾಗಿವೆ. ಆದರೇ ಮನುಷ್ಯರಾದವರು ಹುಟ್ಟುವಿಕೆಯಿಂದಲೇ ಮೂರು

ಮತಗಳಾಗಿ ವಿಭಜಿಸಲ್ಪಟ್ಟಿರುವುದರಿಂದ ಮೂರು ಮತದವರು ಬೇರೆಬೇರೆಯಾಗಿ ಮೂರು ಗ್ರಂಥಗಳನ್ನು ತಮ್ಮ ಗ್ರಂಥಗಳೆಂದು ಹೇಳಿಕೊಳ್ಳುತ್ತಿದ್ದಾರೆ. ಭಗವದ್ಗೀತೆ ಹಿಂದೂಗಳದೆಂದು, ಬೈಬಲ್ ಕ್ರೈಸ್ತವರದೆಂದು, ಖುರ್‌ಆನ್ ಮುಸ್ಲಿಮ್‌ರ ಗ್ರಂಥವೆಂದು ಹೇಳಿಕೊಳ್ಳುವುದು ನಡೆಯುತ್ತಿದೆ. ಆದರೇ ಎಷ್ಟು ಆಳವಾಗಿ ನೋಡಿದರೂ ಮೂರು ಗ್ರಂಥಗಳಲ್ಲಿ ಯಾವ ಗ್ರಂಥ ಯಾವ ಮತಕ್ಕೂ ಸಂಬಂಧಿಸಿರುವುದು ಅಲ್ಲ. ಮೂರು ಗ್ರಂಥಗಳು ಸರ್ವಮಾನವರಿಗಾಗಿ ತಯಾರಾಗಿರುವವೇಯೆಂದು ಹೇಳಬಹುದು. **ಮೂರು ಗ್ರಂಥಗಳು ಒಂದೇ ಗ್ರಂಥದಲ್ಲಿನ ಭಾಗಗಳೆಂದು** ಹೇಳಬಹುದು. ಮೂರು ದೈವ ಗ್ರಂಥಗಳು ಒಂದೇ ದೇವರನ್ನು ಕುರಿತು ಬೋಧಿಸುತ್ತಿವೆ ಹೊರತು ಇತರೆ ಅಲ್ಲ.

ಒಂದು ಗ್ರಂಥವನ್ನು ಮಾತ್ರ ಒಂದು ಮತದವರು ತಮ್ಮದು ಎಂದು ಹೇಳಿಕೊಂಡರೂ, ಅವರು ಎಲ್ಲರೂ ಆ ಗ್ರಂಥವನ್ನು ಪೂರ್ತಿ ಅಮೂಲಾಗ್ರವಾಗಿ ಓದಿದ್ದಾರೆಂದು ಹೇಳಲಾರೆವು. ಹಿಂದೂಗಳಲ್ಲಿ ಭಗವದ್ಗೀತೆಯನ್ನು ಓದದವರು ಶೇ. 80ರಷ್ಟು ಇದ್ದಾರೆ. ಹಾಗೆಯೇ ಕ್ರೈಸ್ತರಲ್ಲಿಯೂ ಸಹ ಇದ್ದಾರೆ. ಮುಸ್ಲಿಮ್‌ರ ವಿಷಯಕ್ಕೆ ಬಂದರೆ ಶೇ.95ರಷ್ಟು ಖುರ್‌ಆನ್ ಗ್ರಂಥವನ್ನು ಓದಲಿಲ್ಲ. ಒಂದುವೇಳೆ ಯಾರಾದರೂ ಓದಿದ್ದೇವೆಂದರೆ ಅವರು ಅವರ ಭಾಷೆಯಲ್ಲಿ ಅಲ್ಲದೆ ಅರಬ್ಬೀ ಭಾಷೆಯಲ್ಲಿ ಓದುವುದರಿಂದ ಖುರ್‌ಆನ್‌ನಲ್ಲಿನ ಭಾವ ಸ್ವಲ್ಪವಾದರೂ ತಿಳಿಯದಂತೆ ಹೋಗಿದೆ. ಇದರ ಪ್ರಕಾರ ನೋಡಿದರೆ ಮುಸ್ಲಿಮ್‌ರಲ್ಲಿ ಖುರ್‌ಆನ್‌ನನ್ನು ಓದಿ ಅರ್ಥಮಾಡಿಕೊಂಡವರು ಕೇವಲ ಶೇ.5ರಷ್ಟು ಮಾತ್ರವೇ ಎಂದು ಹೇಳಬಹುದು. ಹಾಗೆ ಶೇ.5ರಷ್ಟು ಮಂದಿ ಓದಿದರೂ ಖುರಾನ್‌ನಲ್ಲಿ ಕೆಲವು ಸೂಕ್ಷ್ಮ ವಾಕ್ಯಗಳು ಅವರಿಗೆ ಅರ್ಥವಾಗಿರುವುದಿಲ್ಲವೆಂದು ಹೇಳಬಹುದು. ಮೂರು ಮತಗಳಲ್ಲಿ ಮೂರು ದೈವಗ್ರಂಥಗಳಲ್ಲಿನ ಸೂಕ್ಷ್ಮ ವಿಷಯಗಳು ಅರ್ಥವಾಗದಿರುವುದರಿಂದ ಮೂರು ಒಂದೇ ದೈವಜ್ಞಾನವನ್ನು ಬೋಧಿಸುತ್ತಿವೆ ಯೆಂದು ತಿಳಿಯಲಾರದೆ ಹೋಗಿದ್ದಾರೆ. ಅಂತಹ ಸಂದರ್ಭದಲ್ಲಿ ನಮ್ಮ ಗ್ರಂಥ ಬೇರೆ, ನಮ್ಮ ಗ್ರಂಥ ದೊಡ್ಡದೆಂದು ಹೇಳಿಕೊಳ್ಳುತ್ತಿದ್ದಾರೆ. ಮೂರು ಮತದವರು

ತಮ್ಮ ತಮ್ಮ ಗ್ರಂಥಗಳೆಂದು ಬೇರೆಬೇರೆಯಾಗಿ ಹೇಳಿಕೊಳ್ಳುವುದೇ ಅಲ್ಲದೆ ಮುಸ್ಲಿಮ್‌ರದ್ದು ಖುರಾನ್ ಗ್ರಂಥವೆಂದು, ಕ್ರೈಸ್ತರದ್ದು ಬೈಬಲ್ ಗ್ರಂಥವೆಂದು, ಹಿಂದೂಗಳದ್ದು ಭಗವದ್ಗೀತೆಯೆಂದು ಹೇಳಿಕೊಳ್ಳುವುದು ನಡೆಯುತ್ತಿದೆ.

ಮೂರು ಮತದವರು ಅಂದುಕೊಂಡಂತೆ ಯಾವ ಗ್ರಂಥವೂ ಯಾವ ಮತಕ್ಕೂ ಸಂಬಂಧಿಸಿರುವುದಲ್ಲ. ಖುರ್‌ಆನ್ ದೈವ ಗ್ರಂಥವೆಂದು ಹೇಳಲ್ಪಟ್ಟಿದೆ ಆದರೆ, ಮತ ಗ್ರಂಥವೆಂದು ಆ ಗ್ರಂಥದ ಮೇಲೆ ಇಲ್ಲ. ಅಂತಿಮ ದೈವ ಗ್ರಂಥವೆಂದಿದ್ದಾರೆ ಆದರೆ, ಮುಸ್ಲಿಮ್‌ರ ಗ್ರಂಥವೆಂದು ಹೇಳಲಿಲ್ಲ. ಹಾಗೆ ಪ್ರಥಮ ದೈವಗ್ರಂಥವೆಂದು ಭಗವದ್ಗೀತೆಯನ್ನು ಹೇಳುತ್ತಿದ್ದೇವೆ ಆದರೆ ಅದನ್ನು ಹಿಂದೂಗಳ ಗ್ರಂಥವೆಂದು ಎಲ್ಲಿಯೂ ಬರೆದಿಡಲಿಲ್ಲ. ನ್ಯಾಯ ಸ್ಥಾನಗಳಲ್ಲಿ ಭಗವದ್ಗೀತೆಯನ್ನು ಎಲ್ಲ ಮತದವರಿಗೂ ಸಾಕ್ಷಿಯಾಗಿ ಬಳಸುತ್ತಿದ್ದಾರೆ. ಅಲ್ಲಿ ಒಂದು ಮತಕ್ಕೆ ಮಾತ್ರವೇ ಅದನ್ನು ಬಳಸಲಿಲ್ಲ. ಅಷ್ಟೇ ಅಲ್ಲದೆ ಬೈಬಲ್ ಗ್ರಂಥದಲ್ಲಿ **"ಸಮಸ್ತ ಜನಗಳೇ ನನ್ನ ಹತ್ತಿರಕ್ಕೆ ಬನ್ನಿ, ನನ್ನ ಬೋಧನೆಗಳನ್ನು ಕೇಳಿ"** ಎಂದು ಹೇಳಿದ್ದಾರೆ ಹೊರತು ಓ ಕ್ರೈಸ್ತರೇ ನನ್ನ ಹತ್ತಿರಕ್ಕೆ ಬನ್ನಿ ಎಂದು ಹೇಳಲಿಲ್ಲ. ಹಾಗೇ ಖುರಾನ್ ಗ್ರಂಥದಲ್ಲಿ (81–27) ಮತ್ತು (6–90) ವಾಕ್ಯಗಳಲ್ಲಿ **"ಇದು ಸಮಸ್ತ ಜನರಿಗೂ ಜ್ಞಾನ ಸಂದೇಶ ಹಿತೋಪದೇಶ"** ಎಂದು ಹೇಳಿದ್ದಾರೆ. ಭಗವದ್ಗೀತೆಯಲ್ಲಿ ಮತಗಳ ಪ್ರಸ್ತಾಪವೇ ಇಲ್ಲ. ಮಾನವರೆಲ್ಲರಿಗೂ ಭಗವದ್ಗೀತೆ ಹೇಳಲ್ಪಟ್ಟಿದೆ. ಭಗವದ್ಗೀತೆ ತಯಾರಾದ ಕಾಲದಲ್ಲಿ ಇತರ ಮತಗಳೇ ಇಲ್ಲ. ಇರುವವರೆಲ್ಲಾ ಒಂದೇ ಸಮಾಜವಾಗಿ ಇರುತ್ತಿದ್ದರು. ನಂತರ ಕ್ರೈಸ್ತವ, ಇಸ್ಲಾಮ್ ತಯಾರಾದ ನಂತರ ಮತಗಳ ಪ್ರಸ್ತಾಪ ಬಂದಿದೆ. ಯಾವ ಮತಗಳು ಇಲ್ಲದ ಸಮಯದಲ್ಲಿ ಆಕಾಶವಾಣಿ ಮೂಲಕ ಜಬುರ (ಜಪರ) ಜ್ಞಾನ ಹೇಳಲ್ಪಟ್ಟಾಗ, ಅದು ದ್ವಾಪರ ಯುಗದ ಕೊನೆಯಲ್ಲಿ ಗ್ರಂಥವಾಗಿ (ಭಗವದ್ಗೀತೆಯಾಗಿ) ತಯಾರಾಗಿದೆ. ಅದನ್ನೇ ಪ್ರಥಮ ದೈವಗ್ರಂಥವೆಂದು ಕರೆಯುತ್ತಿದ್ದೇವೆ. ಕೊನೆಯದಾಗಿ ತಯಾರಾದ ಗ್ರಂಥ ಮತಗಳು ಇದ್ದಾಗ ತಯಾರಾದರೂ ಅದು ಒಂದು ಮತಗ್ರಂಥವಲ್ಲ ಎನ್ನುವಂತೆ ಸಮಸ್ತ ಮಾನವರಿಗೂ ಎಂದು

ತಿಳಿಯುವಂತೆ **(81–27) "ಆಯತ್ತಿನಲ್ಲಿ "ಇದು ಸಮಸ್ತ ಲೋಕ ವಾಸರಿಗಾಗಿ ಹಿತೋಪದೇಶ"** ಎಂದು ಹೇಳಿದ್ದಾರೆ. ಕುಲ, ಮತಗಳಿಗೆ ಅತೀತನು ದೇವರು. ದೇವರ ಜ್ಞಾನವೂ ಸಹ ಮತಗಳಿಗೆ ಅತೀತವಾದುದು. ಮೂರು ದೈವ ಗ್ರಂಥಗಳಲ್ಲಿ ಹೇಳಿದ ಜ್ಞಾನ ಮತಗಳಿಗೆ ಸಂಬಂಧವಿಲ್ಲವೆಂದು, ಮನುಷ್ಯರೆಲ್ಲರಿಗೂ ಸಂಬಂಧ ಪಟ್ಟಿರುವುದೆಂದು ಹೇಳಬಹುದು.

**ಪ್ರಶ್ನೆ :– ಖುರ್‌ಆನ್‌ನನ್ನು ಮುಸ್ಲಿಮ್‌ರು ತಮ್ಮದು ದೈವ ಗ್ರಂಥವೆಂದು ಹೇಳಿಕೊಳ್ಳುತ್ತಿರುವಾಗ ಅದರಲ್ಲಿನ ಜ್ಞಾನವನ್ನು ಅವರು ತಿಳಿದು ಸಂತೋಷಪಡದೆ, ಖುರ್‌ಆನ್ ಕೇವಲ ನಮ್ಮ ಮತಕ್ಕೆ ಸಂಬಂಧಪಟ್ಟಿರುವುದೆಂದು ಏಕೆ ಹೇಳಿ ಕೊಳ್ಳಬೇಕು? ನೀವು ಹೇಳುವ ಜ್ಞಾನವನ್ನು ಏಕೆ ವಿರೋಧಿಸಬೇಕು? ದೈವ ಜ್ಞಾನ ಮನುಷ್ಯರೆಲ್ಲರಿಗೂ ಅವಶ್ಯವಾದುದೆಂದು ಅಂದುಕೊಳ್ಳದೆ ಇದು ನಮಗೆ ಮಾತ್ರವೆ ಎಂದು ಕೆಲವರು ಮೊಂಡರಂತೆ ಹೇಳುವುದರಲ್ಲಿ ಏನಾದರೂ ವಿಶೇಷವಿದೆಯಾ?**

**ಉತ್ತರ :–** ಮುಸ್ಲಿಮ್‌ರು ಪ್ರತ್ಯೇಕವಾದ ಸಮಾಜವಾಗಿದ್ದರೂ ಅವರು ಬಹಳಜನ ಅಂದರೇ ಸುಮಾರು ಶೇ. 99 ರಷ್ಟು ಪೂರ್ತಿ ದೇವರ ಮೇಲೆ ವಿಶ್ವಾಸ ಹೊಂದಿರುವವರೇ ಇದ್ದಾರೆ. ದೇವರ ಮೇಲೆ ವಿಶ್ವಾಸವಿರುವಷ್ಟು ಸ್ಥಾಯಿ ದೇವರ ಜ್ಞಾನ ಅವರಿಗೆ ತಿಳಿದಿಲ್ಲ. ದೇವರ ಜ್ಞಾನವನ್ನು ಅವರ ಹಿರಿಯರು ಅಂದರೇ ಗುರುಗಳಾಗಿ ಇರುವವರು ಅವರಿಗೆ ಹೇಳಬೇಕು. 'ಮುಸ್ಲಿಮ್' ಎಂದರೆ 'ವಿಶ್ವಾಸಿ' ಎಂದು ಅರ್ಥ. ದೇವರ ಮೇಲಿರುವ ವಿಶ್ವಾಸವನ್ನು ಆಸರೆಯಾಗಿ ಮಾಡಿಕೊಂಡು ಹಿರಿಯರು ಅವರನ್ನು ದೇವರ ಮಾರ್ಗದ ಕಡೆ ನಡೆಸಬೇಕಾಗಿರುವಾಗ, ಅವರ ಹಿರಿಯರಾದವರಿಗೆ ದೇವರ ಜ್ಞಾನಕ್ಕಿಂತ ಮತವೇ ಮುಖ್ಯವಾಗಿ ಇರುವುದರಿಂದ ದೇವರ ಜ್ಞಾನವನ್ನು ಬೋಧಿಸುವ ಸ್ಥಾನದಲ್ಲಿ ಖುರ್‌ಆನ್ ಗ್ರಂಥದಲ್ಲಿನ ವಚನಗಳನ್ನು ಹೇಳದಂತೆ ಮತ ಆಚಾರಗಳನ್ನೇ ಹೆಚ್ಚಾಗಿ ಹೇಳುತ್ತಿದ್ದಾರೆ. ಆಗ ಆ ಬೋಧನೆಗಳು ಕೇಳುವ ಮುಸ್ಲಿಮರೆಲ್ಲರೂ ಮತ ಆಚಾರಗಳನ್ನೇ ದೈವ ಜ್ಞಾನವೆಂದುಕೊಳ್ಳುತ್ತಿದ್ದಾರೆ. ಆದ್ದರಿಂದ ಮುಸ್ಲಿಮ್‌ರಲ್ಲಿ ಹೆಸರಿಗೆ ತಕ್ಕಂತೆ ಅವರಿಗೆ ದೇವರ ಮೇಲೆ

ವಿಶ್ವಾಸವಿದ್ದರೂ ದೇವರ ಜ್ಞಾನ ತಿಳಿಯದಂತೆ ಹೋಗಿದೆ. ಅವರಿಗೆ ತಿಳಿದ ಮತ ಆಚಾರಗಳ ಪ್ರಕಾರ ಖುರ್‌ಆನ್ ನಮ್ಮ ಮತಗ್ರಂಥವೆಂದು ಹೇಳುತ್ತಿದ್ದಾರೆ. ಹಾಗೆ ಹೇಳುವುದಕ್ಕೆ ಅವರ ಹಿರಿಯರೇ ಕಾರಣ. ಖುರ್‌ಆನ್ ಜ್ಞಾನ ಮುಸ್ಲಿಮ್‌ರು ತಿಳಿದುಕೊಂಡರೆ ತಮ್ಮ ದೊಡ್ಡಸ್ತಿಕೆ ಇಲ್ಲದಂತೆ ಹೋಗುತ್ತದೆಂದು, ಮುಸ್ಲಿಮ್ ಸಮಾಜವೆಲ್ಲವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ತಾವು ಹೇಳಿದಂತೆ ನಡೆಯಬೇಕೆಂದು, 'ಷರಿಯತ್' ಎಂಬ ನಿಯಮವನ್ನು ಇಟ್ಟು ಮುಸ್ಲಿಮ್‌ರೆಲ್ಲರನ್ನು ಮತ ಷರಿಯತ್‌ನಿಂದ ಕಟ್ಟಿಹಾಕುತ್ತಿದ್ದಾರೆ ಹೊರತು ಖುರ್‌ಆನ್ ಜ್ಞಾನವನ್ನು ಬೋಧಿಸಿ ಮುಸ್ಲಿಮರನ್ನು ಜ್ಞಾನಿಗಳನ್ನಾಗಿ ಮಾಡುತ್ತಿಲ್ಲ. ಯಾರಾದರೂ ಅವರನ್ನು ತಪ್ಪುಹಿಡಿದರೆ ಅವರು ತಮ್ಮ ಖುರ್‌ಆನ್‌ನನ್ನು, ಪ್ರವಕ್ತನನ್ನು ಹೇಳನಮಾಡಿ ಮಾತನಾಡಿದ್ದಾರೆಂದು ಅವರ ಮೇಲೆ ಮುಸ್ಲಿಮ್‌ರನ್ನು ರೊಚ್ಚಿಗೆಬ್ಬಿಸಿ ಕಳಿಸುತ್ತಾರೆ. ಕೆಲವರಿಗೆ ಸತ್ಯ ತಿಳಿದರೂ, ಇತರರದ್ದು ತಪ್ಪಿಲ್ಲವೆಂದು ತಿಳಿದರೂ ತಮ್ಮ ಹಿರಿಯರ ಮಾತು ಕೇಳಬೇಕೆಂಬ ನಿಯಮದ ಪ್ರಕಾರ ಮುಸ್ಲಿಮರು ಹೋಗುತ್ತಿದ್ದಾರೆ. ಈ ಮಧ್ಯ ಕಾಲದಲ್ಲಿ ನಮ್ಮ ಮೇಲೆ ಇಂತಹ ಆರೋಪಣೆಗಳನ್ನೇ ಮುಸ್ಲಿಮ್ ಹಿರಿಯರು ಮಾಡುವುದು ನಡೆದಿದೆ.

ಒಂದು ಮುಸ್ಲಿಮ್ ಮತದಲ್ಲಿಯೇ ಅಲ್ಲದೆ ಪ್ರತಿ ಮತದಲ್ಲಿ ಅವರ ಗುರುಗಳನ್ನು ಅನುಸರಿಸಿ ಆ ಮತದವರು ನಡೆಯುವುದು ನಡೆಯುತ್ತಿದೆ. ಗುರುಗಳಾದವರು ಯಾವ ಮತದಲ್ಲಿ ಕೂಡಾ ದೈವಜ್ಞಾನವನ್ನು ಬೋಧಿಸದೆ ಇದು ಜ್ಞಾನವೇಯೆಂದು ನಂಬಿಸಿ, ಅವರಿಗೆ ಮತ ಜಾಡ್ಯವನ್ನು ತೇಯ್ದು ಒಯ್ಯುತ್ತಿದ್ದಾರೆ. ಮುಖ್ಯವಾಗಿ ಮೂರು ಮತಗಳಲ್ಲಿ ಮೂರು ದೈವ ಗ್ರಂಥಗಳಿರುವಾಗ, ಆಯಾ ಮತದವರಿಗೆ ದೈವ ಗ್ರಂಥಗಳಲ್ಲಿನ ಜ್ಞಾನ ತಿಳಿಯದೇ ಹೋಗಿದೆ. ಅವರ ಹಿರಿಯರೆನ್ನುವ ಗುರುಗಳು ದೈವ ಗ್ರಂಥದಲ್ಲಿನ ಜ್ಞಾನವನ್ನು ಹೇಳುತ್ತಿಲ್ಲ. ಏಕೆಂದರೇ! ನಿಜ ಹೇಳಿದರೆ ಗ್ರಂಥದಲ್ಲಿನ ಜ್ಞಾನ ಅವರಿಗೇ ತಿಳಿದಿಲ್ಲ. ಆದ್ದರಿಂದ ತಮ್ಮ ಹಿರೆತನವನ್ನು ಕಾಪಾಡಿಕೊಳ್ಳುವುದಕ್ಕೆ ಹಿಂದೂಗಳ ಹಿರಿಯರು ವೇದಗಳನ್ನು, ಕ್ರೈಸ್ಥರ ಹಿರಿಯರು ಬೈಬಲ್‌ನಲ್ಲಿನ ಆದಿಕಾಂಡವನ್ನು,

ಮುಸ್ಲಿವ್‌ರಲ್ಲಿನ ಹಿರಿಯರು ಹದೀಸು ಗ್ರಂಥದಲ್ಲಿನ ವಾಕ್ಯಗಳನ್ನು ಬೋಧಿಸುತ್ತಿದ್ದಾರೆ. ದೇವರು ಪ್ರತಿ ಮತಕ್ಕು ಒಂದು ದೈವ ಗ್ರಂಥವನ್ನು ಕೊಟ್ಟು ಅದರಲ್ಲಿ ತನ್ನ ಜ್ಞಾನವನ್ನು ತುಂಬಿರುವಾಗ, ದೈವ ಗ್ರಂಥಗಳನ್ನು ಅಲ್ಲಗಳೆದು ದೇವರ ವಾಕ್ಯಗಳು ಅಲ್ಲದವುಗಳನ್ನು, ಮನುಷ್ಯರು ಬರೆದುಕೊಂಡಿರುವವುಗಳನ್ನು ಏಕೆ ಹೇಳಿಕೊಳ್ಳಬೇಕು?

ಹಿಂದೂಗಳಲ್ಲಿ ಬಹಳಜನ ತಮ್ಮ ದೈವ ಗ್ರಂಥ ಭಗವದ್ಗೀತೆಯೆಂದು ತಿಳಿಯದ ಸ್ಥಿತಿಯಲ್ಲಿದ್ದಾರೆ. ಕೆಲವರು ತಮ್ಮ ಗ್ರಂಥ ವೇದಗಳೆಂದು ನಾಲ್ಕು ವೇದಗಳ ಹೆಸರುಗಳು ಹೇಳುತ್ತಿದ್ದಾರೆ. ವೇದಗಳನ್ನು ಮನುಷ್ಯರು ಬರೆದಿದ್ದಾರೆಂದು ಕೂಡಾ ತಿಳಿಯದೆ ಅವುಗಳನ್ನು ದೇವರೇ ಕೊಟ್ಟಿದ್ದಾನೆಂದು ಹೇಳುತ್ತಿದ್ದಾರೆ. ವೇದಗಳನ್ನು ವ್ಯಾಸನು ಬರೆದ ನಂತರ ಪ್ರಜೆಗಳು ಅಧರ್ಮ ಮಾರ್ಗದಲ್ಲಿ ಹೋಗುವ ಅವಕಾಶವಿದೆಯೆಂದು, ಭೂಮಿಮೇಲೆ ಅಧರ್ಮಗಳು ವೃದ್ಧಿಯಾಗುತ್ತಿವೆಯೆಂದು, ಧರ್ಮಗಳಿಗೆ ಮುಪ್ಪು ಏರ್ಪಟ್ಟಿದೆಯೆಂದು ತಿಳಿದ ದೇವರು ಭಗವದ್ಗೀತೆಯನ್ನು ಹೇಳುವುದು ನಡೆದಿದೆ. ಆದರೆ ಕೆಲವರು ದೈವ ಗ್ರಂಥವಾದ ಭಗವದ್ಗೀತೆಗಿಂತ ಮನುಷ್ಯರು ಬರೆದ ವೇದಗಳಿಗೇ ಹೆಚ್ಚಾಗಿ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಹಾಗೇ ಮುಸ್ಲಿಮ್ ಸಮಾಜದಲ್ಲಿ ಕೂಡಾ ದೈವ ಗ್ರಂಥವಾದ ಖುರ್‌ಆನ್ ಮೊದಲೇ ತಯಾರಾಗಿದ್ದು ನಂತರ ಮನುಷ್ಯರು ಬರೆದ ಹದೀಸುಗಳಿಗೇ ಹೆಚ್ಚಿನ ಪ್ರಾಧಾನ್ಯತೆ ಕೊಡುವುದು ನಡೆದಿದೆ. ದೈವ ಗ್ರಂಥವಾದ ಖುರ್‌ಆನ್‌ನಲ್ಲಿ ದೇವರ ಜ್ಞಾನವಿರುವಾಗ, ಹದೀಸು ಗ್ರಂಥಗಳಲ್ಲಿ ಮತಕ್ಕೆ ಸಂಬಂಧಿಸಿರುವ ಮತಾಚಾರಗಳೇ ಹೆಚ್ಚಾಗಿವೆ. ಈದಿನ ಮುಸ್ಲಿಮ್‌ರಲ್ಲಿ ಹೆಚ್ಚಾಗಿ ಹದೀಸುಗಳನ್ನು ಕೇಳುತ್ತಿರುವಾಗ, ಬಹಳ ಕಡಿಮೆಯಾಗಿ ಖುರ್‌ಆನ್ ಕೇಳುವುದು ನಡೆಯುತ್ತಿದೆ. ಹಿರಿಯರ ಮಾತೇ ಮುಖ್ಯವೆಂದು ತಿಳಿದ ಹಿಂದೂಗಳಾಗಲಿ, ಮುಸ್ಲಿವ್‌ರಾಗಲಿ ದೈವಜ್ಞಾನವನ್ನು ಆಶ್ರಯಿಸದೆ ತಮ್ಮ ಹಿರಿಯರು ಬೋಧಿಸುತ್ತಿರುವ ಮತಾಚಾರಗಳೇ ಹೆಚ್ಚಾಗಿ ತಿಳಿಯುತ್ತಿದ್ದಾರೆ. ಮತಾಚಾರಗಳನ್ನು ತಿಳಿದವರು ಅದೇ ನಿಜವಾದ ಜ್ಞಾನವೆಂದು ತಿಳಿದು, ಮತದ ಹಿಂದೆ ಓಡಿಹೋಗುತ್ತಿದ್ದಾರೆ ಹೊರತು ದೈವಜ್ಞಾನದ ಹಿಂದೆ ನಡೆಯುತ್ತಿಲ್ಲ. ಆದ್ದರಿಂದ

ದೈವಜ್ಞಾನವನ್ನು ಮಾತ್ರವೇ ಬೋಧಿಸುವ ನಮ್ಮನ್ನು ನೋಡಿ ಕೆಲವು ಹಿಂದೂ ಗುರುಗಳಿಗೆ ಸರಿಹೋಗುವುದಿಲ್ಲ. ಹಾಗೇ ಕೆಲವು ಮುಸ್ಲಿಮ್ ಹಿರಿಯರಿಗೆ ಸರಿಹೋಗಲಿಲ್ಲ.

**ಪ್ರಶ್ನೆ :– ನೀವು ದೈವ ಜ್ಞಾನವನ್ನು ಮಾತ್ರವೇ ಹೇಳಿದಾಗ ಉಳಿದ ಹಿರಿಯರು ಸಂತೋಷಪಡದೆ ನೀವು ಹಿಂದೂಗಳೆಲ್ಲರನ್ನು ತಪ್ಪುದಾರಿಯಲ್ಲಿ ಕಳಿಸುತ್ತಿದ್ದಾನೆಂದು ಹಿಂದೂಗಳು, ನಮ್ಮ ಮತವನ್ನು ವಿಚ್ಛಿನ್ನ ಮಾಡುತ್ತಿದ್ದಾನೆಂದು ಮುಸ್ಲಿಮ್‌ರು ಏಕೆ ಅನ್ನುತ್ತಿದ್ದಾರೆ?**

**ಉತ್ತರ :–** ವಾಸ್ತವವಾಗಿ ಅವರಿಗೆ ಜ್ಞಾನಕ್ಕು, ಮತಕ್ಕು ಇರುವ ವ್ಯತ್ಯಾಸ ತಿಳಿಯದೆ ಹಾಗೆ ಮಾತನಾಡುತ್ತಿದ್ದಾರೆ. ನಾನು ಹೇಳುವುದು ದೈವಜ್ಞಾನವನ್ನು ಮಾತ್ರ. ಮತ ಸಾಂಪ್ರದಾಯಗಳನ್ನು ಕುರಿತು ಎಲ್ಲಿಯೂ ಹೇಳಲಿಲ್ಲ. ವಾಸ್ತವಕ್ಕೆ ಮತ, ಮತ ಸಾಂಪ್ರದಾಯಗಳು ಬೇರೆ, ದೇವರು ದೇವರ ಸಾಂಪ್ರದಾಯಗಳು ಬೇರೆ. ಮನುಷ್ಯರೆಲ್ಲರು ಮತಗಳಲ್ಲಿ ಹುಟ್ಟುತ್ತಿದ್ದಾರೆ. ಯಾವುದೋ ಒಂದು ಮತದಲ್ಲಿ ಹುಟ್ಟಿದ ಮನುಷ್ಯ ತನ್ನ ಜೀವನದಲ್ಲಿ ದೇವರ ಜ್ಞಾನವನ್ನು ಸ್ವಲ್ಪ ತಿಳಿಯುತ್ತಿದ್ದಾನೆ. ಒಂದು ಮತದಲ್ಲಿರುವ ಮನುಷ್ಯ ತನ್ನ ಜೀವನದಲ್ಲಿ ದೇವರ ಜ್ಞಾನವನ್ನು ತಿಳಿಯಬಹುದು ಅಥವಾ ತಿಳಿಯದೆ ಹೋಗಬಹುದು. ಇದನ್ನನುಸರಿಸಿ ಮನುಷ್ಯನಿಗೆ ಜನ್ಮದಿಂದಲೇ ಮತವಿದೆ ಆದರೆ, ದೈವಜ್ಞಾನ ಇಲ್ಲವೆಂದು ತಿಳಿಯುತ್ತಿದೆ. ಜನ್ಮದಿಂದ ಇಲ್ಲದ ದೈವಜ್ಞಾನವನ್ನು ಕೆಲವರು ಮನುಷ್ಯರು ತಿಳಿಯುತ್ತಿದ್ದಾರೆ, ಕೆಲವರು ತಿಳಿಯದೆ ಅಜ್ಞಾನಿಗಳಂತೆ ಜೀವನವನ್ನು ಕಳೆಯುತ್ತಿದ್ದಾರೆ.

ಮನುಷ್ಯ ಯಾವುದೋ ಒಂದು ಮತದಲ್ಲಿ ಹುಟ್ಟುವುದರಿಂದ ಆ ಮನುಷ್ಯನಿಗೆ ಆ ಮತವೊಂದರ ಸಾಂಪ್ರದಾಯಗಳು ತಪ್ಪದೆ ತಿಳಿದಿರುತ್ತವೆ. ಅಷ್ಟೇಅಲ್ಲದೆ ತಾನು ಯಾವ ಮತದಲ್ಲಿ ಹುಟ್ಟಿದ್ದಾನೊ ಅವನಿಗೆ ಆ ಮತ ಆಚಾರಗಳು ತನ್ನ ಕುಟುಂಬದವರೊಂದಿಗು ಕೂಡಾ ಚಿಕ್ಕಂದಿನಿಂದ ಆಚರಿಸುವು ದರಿಂದ ಯಾವ ಮತದವನಿಗೆ ಆ ಮತ ಆಚಾರಗಳು ಚೆನ್ನಾಗಿ ತಿಳಿದಿರುತ್ತವೆ.

ಮತದಲ್ಲಿ ಮನುಷ್ಯ ಹುಟ್ಟುವುದರಿಂದ ಅಂದರೇ ತನ್ನ ತಾಯಿತಂದೆಯವರು ಯಾವುದೊ ಒಂದು ಮತದವರಾಗಿರುವುದರಿಂದ, ಆತನಿಗೆ ಹಿರಿಯರ ಆಸ್ತಿ ಸಂಕ್ರಮಿಸಿದಂತೆ ಮತ ಆಚಾರಗಳು ಕೂಡಾ ಬಂದಿರುತ್ತವೆ. ಮತ ಆಚಾರಗಳನ್ನು ಹೊಸದಾಗಿ ಗುರುಗಳು ಕಲಿಸಬೇಕಾದ ಅವಶ್ಯಕತೆಯಿಲ್ಲ. ಗುರುಗಳು ದೈವಜ್ಞಾನವನ್ನು ಮನುಷ್ಯರಿಗೆ ಕಲಿಸಬೇಕಾಗಿದೆ. ಆದರೆ ಈದಿನ ಗುರುಗಳು ದೈವಜ್ಞಾನವನ್ನು ಬೋಧಿಸದೆ ಮತಾಚಾರಗಳನ್ನೇ ಬೋಧಿಸುತ್ತಾ ಪ್ರಜೆಗಳಿಂದ ಆಚರಿಸುವಂತೆ ಮಾಡುತ್ತಿದ್ದಾರೆ. ಮನುಷ್ಯ ಮಧ್ಯದಲ್ಲಿ ಮತಾಚಾರಗಳನ್ನು ಮರೆತುಹೋಗದಂತೆ, ಯಾರಾದರೂ ಮತ ಆಚಾರಗಳನ್ನು ಆಚರಿಸದಂತಿದ್ದರೆ ಅಂತಹವರಿಗೆ ಮತಾಚಾರಗಳೇ ಮುಖ್ಯವೆಂದು ತಿಳಿಸಿ ಆಚರಿಸುವಂತೆ ಮಾಡುತ್ತಿರುತ್ತಾರೆ. ಮತಾಚಾರಗಳೇ ದೈವ ಆಚರಣೆಗಳಾಗಿ ವರ್ಣಿಸಿ ಹೇಳುತ್ತಿರುತ್ತಾರೆ.

ಮತಗಳು ಮತಾಚಾರಗಳು ಬೇರೆಯೆಂದು, ದೇವರು, ದೇವರ ಜ್ಞಾನ ಬೇರೆಯೆಂದು ತಿಳಿಯದ ಗುರುಗಳು ಭೂಮಿಮೇಲೆ ಇರುವುದರಿಂದ ಪ್ರಜೆಗಳಿಗೆ ಸಹ ದೇವರ ಜ್ಞಾನ ಪ್ರತ್ಯೇಕವಾದುದೆಂದು ತಿಳಿಯದಂತೆ ಹೋಗಿದೆ. ಇತ್ತೀಚ್ಚಿನ ಕಾಲದಲ್ಲಿ ನಾವು ದೇವರ ಜ್ಞಾನವನ್ನು ಬೋಧಿಸಿದರೇ ಅದನ್ನು ಸಹ ಮತ ಆಚಾರಗಳಾಗಿ ಕೆಲವರು ಅಂದುಕೊಳ್ಳುವುದು ನಡೆಯುತ್ತಿದೆ. ನಾವು ಬೋಧಿಸುವ ಜ್ಞಾನ ಕೇವಲ ದೇವರಿಗೆ ಸಂಬಂಧಿಸಿರುವುದೆಂದು, ಮತದೊಂದಿಗೆ ಯಾವುದೇ ಸಂಬಂಧ ಇರುವುದಿಲ್ಲವೆಂದು ತಿಳಿಸುತ್ತಿದ್ದೇವೆ. ದೇವರ ಜ್ಞಾನವನ್ನು ದೇವರೇ ತನ್ನ ಗ್ರಂಥದಲ್ಲಿ ತಿಳಿಸಿದ್ದಾನೆ. ದೈವ ಗ್ರಂಥಗಳು ಭಗವದ್ಗೀತೆ, ಬೈಬಲ್, ಖುರ್‌ಆನ್ ಎನ್ನುವ ಮೂರು ಗ್ರಂಥಗಳಾಗಿ ಕಾಣಿಸುತ್ತಿದ್ದರೂ ಅವು ವಾಸ್ತವವಾಗಿ ಒಂದೇ ಗ್ರಂಥದಲ್ಲಿನ ಭಾಗಗಳೇಯೆಂದು, ಒಬ್ಬ ದೇವರ ಜ್ಞಾನವನ್ನೇ ಬೋಧಿಸುತ್ತಿವೆ ಯೆಂದು ಹೇಳಬಹುದು. ಆದ್ದರಿಂದ ಕೊನೆಯ ದೈವಗ್ರಂಥವಾದ ಖುರ್‌ಆನ್ ಗ್ರಂಥದಲ್ಲಿ ಐದನೆ ಸೂರಾದಲ್ಲಿ 68, 48, 44 ಆಯತ್‌ಗಳಲ್ಲಿ ತೌರಾತ್ (ಭಗವದ್ಗೀತೆ), ಇಂಜೀಲ್ (ಬೈಬಲ್) ವೊಂದರ ವಾಕ್ಯಗಳು ದೈವಜ್ಞಾನವೆಂದು ಧೃಢೀಕರಣ (ಸಾಕ್ಷ್ಯ) ವಾಗಿ ಹೇಳಲ್ಪಡುತ್ತಿದೆ.

ಮೂರು ದೈವಗ್ರಂಥಗಳಲ್ಲಿ ದೇವರ ಜ್ಞಾನ ಹೊರತು ಮತಕ್ಕೆ ಸಂಬಂಧಿಸಿದ ವಿಷಯಗಳು ಇಲ್ಲ. ಉದಾಹರಣೆಗೆ ಭಗವದ್ಗೀತೆಯನ್ನು ತೆಗೆದುಕೊಳ್ಳೋಣ. ಅದರಲ್ಲಿ ಸಂಪೂರ್ಣವಾದ ದೈವಜ್ಞಾನ ಹೇಳಲ್ಪಟ್ಟಿದೆ. ಭಗವದ್ಗೀತೆ ಹಿಂದೂಗಳ ಗ್ರಂಥ ಎಂದು ಹೇಳಲ್ಪಟ್ಟರೂ ಅದರಲ್ಲಿ ಎಲ್ಲಾದರೂ ಹಿಂದೂಗಳ ಸಂಪ್ರದಾಯಗಳನ್ನು ಕುರಿತು ಹೇಳಿದ್ದಾರಾ? ಎಂದು ಎಷ್ಟು ಹುಡುಕಿದರೂ ಅಂತಹದ್ದೇನೂ ಕಾಣಿಸುವುದಿಲ್ಲ. ಹಿಂದೂಗಳ ಮತ ಆಚಾರದ ಪ್ರಕಾರ ಹಿಂದೂ ಸನ್ಯಾಸಿಗಳು ಕಾವಿ ವಸ್ತ್ರಗಳನ್ನು ಧರಿಸುವುದು, ಜುಟ್ಟು, ಗಡ್ಡ ಬೆಳೆಸುವುದು ನಡೆಯುತ್ತಿದೆ. ಇದು ಹಿಂದೂ ಮತದಲ್ಲಿನ ಸಾಂಪ್ರದಾಯವಾದರೂ ಭಗವದ್ಗೀತಾ ಗ್ರಂಥದಲ್ಲಿ ಸನ್ಯಾಸಿಗಳನ್ನು ಕುರಿತು ಹೇಳಿದಾಗ ಜ್ಞಾನರೀತಿ ಹೇಗೆ ಇರಬೇಕೋ ಹೇಳಿದ್ದಾರೆ ಆದರೆ, ಮತ ಆಚಾರರೀತಿ ಕಾವಿ ವಸ್ತ್ರಗಳು ಧರಿಸುವುದಾಗಲೀ, ಜುಟ್ಟು, ಗಡ್ಡವನ್ನು ಬೆಳಸುವುದಾಗಲೀ ಹೇಳಲಿಲ್ಲ. ದೈವ ಗ್ರಂಥಗಳಲ್ಲಿ ಮತ ಆಚಾರಗಳಿಗೆ ಹಾದಿಯಿರುವುದಿಲ್ಲ. ಮತ ಆಚಾರಗಳು ಉಳಿದ ಎರಡು ಗ್ರಂಥಗಳಲ್ಲಿ ಕೂಡ ಹೇಳಲಿಲ್ಲ. ದೈವ ಗ್ರಂಥಗಳಲ್ಲಿ ದೇವರ ಜ್ಞಾನ ಹೊರತು ಮತ ಆಚಾರಗಳು ಇರುವುದಿಲ್ಲ.

ನಾನು ಮೂಡು ದೈವಗ್ರಂಥಗಳಲ್ಲಿನ ಸೂಕ್ಷ್ಮವಾಕ್ಯಗಳನ್ನು ವಿವರವಾಗಿ ಹೇಳುತ್ತಿದ್ದೇನೆ. ಅಷ್ಟೇ ಹೊರತು ಯಾವ ಮತ ಆಚಾರಗಳನ್ನಾಗಲೀ ಯಾವ ಮತಸ್ಥರಿಗು ಹೇಳಲಿಲ್ಲ. ಅಷ್ಟೇ ಅಲ್ಲದೆ ಅವರು ಆಚರಿಸುತ್ತಿರುವ ಅವರ ಮತ ಆಚಾರಗಳನ್ನು ಆಚರಿಸಿರೆಂದಾಗಲೀ, ಆಚರಿಸಬೇಡ ಎಂದಾಗಲೀ ನಾನು ಎಂದಿಗೂ ಹೇಳಲಿಲ್ಲ. ಹಾಗಿರುವಾಗ ಯಾರ ಮತವನ್ನು ನಾನು ವಿಚ್ಛಿನ್ನ ಮಾಡಲಿಲ್ಲ ಅಲ್ಲವೆ! ಕೆಲವರ ಆರೋಪಣೆಗಳಲ್ಲಿ ತಮ್ಮ ಮತದಲ್ಲಿ ಇಲ್ಲದ ದೇವರ ಮುದ್ರೆಯನ್ನು ತಮ್ಮ ಮತದವರು ಹಣೆಯಮೇಲೆ ಧರಿಸುತ್ತಿದ್ದಾರೆಂದು, ಅದನ್ನು ನೀವು ಹೇಳುವುದರಿಂದಲೇ ಮುಸ್ಲಿಮ್‌ರು ಹೊಸದಾಗಿ 'ದೇವರ ಮುದ್ರೆ' ಎನ್ನುವುದನ್ನು ಧರಿಸುತ್ತಿದ್ದಾರೆಂದೂ, ಹಣೆಯ ಮೇಲೆ ಹಿಂದೂಗಳು

ಹೊರತು ಮುಸ್ಲಿಮ್‌ರು ಯಾವುದನ್ನೂ ಧರಿಸುವುದಿಲ್ಲವೆಂದು, ಅಂತಹವರು ನಿಮ್ಮ ಬೋಧನೆಗಳಿಂದ ಮತ ನಿಯಮವನ್ನು ಬಿಟ್ಟು ದೇವರ ಚಿಹ್ನೆ ಎನ್ನುವ ಅದನ್ನು ಧರಿಸುವುದರಿಂದ, ಮುಸ್ಲಿಮ್‌ರು ಇಲ್ಲದ ಆಚಾರಗಳನ್ನು ಆಚರಿಸುವುದರಿಂದ, ಅವರನ್ನು ಹಿಂದೂ ಆಚಾರಗಳಿಗೆ ಅಭ್ಯಾಸ ಮಾಡಿದಂತೆ ಆಗುತ್ತಿದೆಯೆಂದು, ಹಾಗಿರುವಾಗ ನೀವು ಮುಸ್ಲಿಮ್‌ರನ್ನು ಹಿಂದೂಗಳಾಗಿ ಬದಲಾಯಿಸುತ್ತಿದ್ದೀರೆಂದು ನಮ್ಮನ್ನು ಆರೋಪಿಸುವುದು ನಡೆಯುತ್ತಿದೆ. ನಾನು ಮುಸ್ಲಿಮ್‌ರನ್ನು ಹಿಂದೂಗಳ ಕಡೆ ಮರಳಿಸುತ್ತಿದ್ದೇನೆಂದು ಎನ್ನುವುದು ಆರೋಪಣೆ ಮಾತ್ರ ಆದರೆ ಅದರಲ್ಲಿ ಸತ್ಯವಿಲ್ಲವೆಂದು ನನು ಹೇಳುತ್ತಿದ್ದೇನೆ.

**"ಮತ ಮಾರ್ಪಾಟು ದೈವ ದ್ರೋಹ"** ಎಂದು ಗತದಲ್ಲಿ ನಾನು ಒಂದು ಗ್ರಂಥವನ್ನು ಬರೆದಿದ್ದೇನೆ. ಮತಮಾರ್ಪಾಟು ದೈವದ್ರೋಹದೊಂದಿಗೆ ಸಮಾನವಾಗುತ್ತದೆಂದು, ಆದುದರಿಂದ ಪಾಪ ಬರುತ್ತದೆಂದು, ದೇವರು ಎಲ್ಲಾ ತಿಳಿದ ವಿವೇಕಶಾಲಿಯಾಗಿರುವುದರಿಂದ ಯಾರನ್ನು ಎಲ್ಲಿ ಯಾವ ಮತದಲ್ಲಿ ಹುಟ್ಟಿಸಬೇಕೋ ತಿಳಿದು ಹುಟ್ಟಿಸಿದ್ದಾನೆಂದು ಆದ್ದರಿಂದ ದೇವರು ಕೊಟ್ಟಿರುವ ಮತದಲ್ಲಿಯೇ ಇದ್ದು ಜ್ಞಾನವನ್ನು ತಿಳಿಯಬೇಕೆಂದು, ದೈವಜ್ಞಾನವನ್ನು ತಿಳಿಯದೆ ಮತವನ್ನು ಬದಲಾಯಿಸಿದರೆ ದೇವರನ್ನು ಎದುರಿಸಿ ದೇವರ ಸೃಷ್ಠಿಯನ್ನು ತಪ್ಪುಹಿಡಿದಂತಾಗುತ್ತದೆಂದು, ಅದರಿಂದ ಪಾಪ ಬರುತ್ತದೆಂದು ಹೇಳಿದ್ದೇವೆ. ಮತ ಮಾರ್ಪಾಟು ತಪ್ಪುಯೆಂದು ಹೇಳಿದ ನಾನು ಮುಸ್ಲಿಮ್‌ರನ್ನು ಹಿಂದೂಗಳ ಆಚಾರಗಳಿಗೆ ಅಭ್ಯಾಸ ಮಾಡುತ್ತಿದ್ದೇನೆನ್ನುವುದು ಆರೋಪಣೆಯೇ ಹೊರತು ಸತ್ಯ ಅಲ್ಲವೆಂದು ಹೇಳುತ್ತಿದ್ದೇವೆ. ಯಾವ ವಿಧವಾಗಿ ನೋಡಿದರೂ ನಾನು ದೈವಜ್ಞಾನವನ್ನು ಬೋಧಿಸುವವನೇ ಹೊರತು ಮತ ಆಚಾರಗಳನ್ನು ಬೋಧಿಸುವವನಲ್ಲ, 'ದೇವರ ಮುದ್ರೆ' ಎನ್ನುವುದು ಮೂರು ಗ್ರಂಥಗಳಲ್ಲಿ ಇರುವ ಜ್ಞಾನವೇ ಹೊರತು ನಾನು ಸೃಷ್ಠಿಸಿ ಹೇಳಿರುವುದಲ್ಲ.

ದೇವರ ಜ್ಞಾನಕ್ಕು ಮತ ಆಚಾರಗಳಿಗು ಮುಡಿಹಾಕಬಾರದು. ನಾನು ಒಬ್ಬ ಬೋಧಕನಾಗಿ ಸತ್ಯವನ್ನು ಹೇಳಬೇಕೆಂದುಕೊಂಡಿದ್ದೇನೆ. ಆದ್ದರಿಂದ ದೇವರು

ನನ್ನಿಂದ ಸತ್ಯವನ್ನು ಹೇಳಿಸಿದ್ದಾನೆ. ದೇವರು ತಿಳಿಸಿದ ಸತ್ಯ ಕೆಲವರಿಗೆ ವಿರುದ್ಧವಾಗಿ ಕಾಣಿಸುತ್ತದೆ. ಅಷ್ಟು ಮಾತ್ರಕ್ಕೆ ಅದು ಮತವನ್ನು ವಿಚ್ಛಿನ್ನ ಮಾಡುವುದಲ್ಲ ಅಲ್ಲವೆ! ನಿಮಗೆ ಚೆನ್ನಾಗಿ ಅರ್ಥವಾಗಬೇಕೆಂದರೇ ಉದಾಹರಣೆಯಾಗಿ ಪ್ರಥಮ ದೈವ ಗ್ರಂಥವಾದ ತೌರಾತು (ಭಗವದ್ಗೀತೆ) ಯಲ್ಲಿನ ಒಂದು ಜ್ಞಾನ ವಿಷಯವನ್ನು ನೋಡೋಣ. ಹಿಂದೂ ಮತದಲ್ಲಿ ಮತ ಆಚಾರದ ಪ್ರಕಾರ ಸನ್ಯಾಸಿ ಎಂದರೇ ಕಾವಿ (ಕಾಷಾಯ) ವಸ್ತ್ರವನ್ನು ಧರಿಸಿದವನು, ಕೆಲಸಗಳು ಬಿಟ್ಟವನು, ಹೆಂಡತಿಮಕ್ಕಳನ್ನು ಬಿಟ್ಟವನು, ಜುಟ್ಟು, ಗಡ್ಡ ಬೆಳೆಸಿದವನು ಎಂದು ಎಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಆದರೆ ಹಿಂದೂ ಗ್ರಂಥವೆಂದು ಎಲ್ಲರೂ ಅಂದುಕೊಳ್ಳುವ ಭಗವದ್ಗೀತೆಯಲ್ಲಿ ಆತ್ಮ ಸಂಯಮ ಯೋಗದಲ್ಲಿ ಮೊಟ್ಟಮೊದಲ ಶ್ಲೋಕದಲ್ಲಿಯೇ ಹೀಗೆ ಹೇಳಲ್ಪಟ್ಟಿದೆ ನೋಡಿರಿ.

**ಶ್ಲೋ॥ ಅನಾಶ್ರಿತಃ ಕರ್ಮಫಲಮ್ ಕಾರ್ಯಂ ಕರ್ಮಕರೋತಿ ಯಃ ।**
**ಸ ಸನ್ಯಾಸೀಚ ಯೋಗೀಚ ನನಿರಗ್ನಿ ರ್ನಚಾಕ್ರಿಯಃ ॥**

ಶ್ಲೋಕದಲ್ಲಿನ ಭಾವನೆ ಪ್ರಕಾರ ಫಲಿತವನ್ನು ಆಶ್ರಯಿಸದೆ ಎಲ್ಲಾ ಕೆಲಸಗಳು ಮಾಡುವವನು ನಿಜವಾದ ಸನ್ಯಾಸಿ ಎಂದು ಹೇಳಲ್ಪಟ್ಟಿದೆ. ಅಷ್ಟೇ ಅಲ್ಲದೆ ಜ್ಞಾನವೆನ್ನುವ ಅಗ್ನಿ ಇಲ್ಲದವನು, ಕೆಲಸಗಳು ಬಿಟ್ಟವನು ಸನ್ಯಾಸಿ ಅಲ್ಲವೆಂದು ಹೇಳಲಾಗಿದೆ. ಈ ಶ್ಲೋಕವನ್ನು ಹೇಳಿದಾಗ ಕಾರ್ಯಗಳನ್ನು ಬಿಟ್ಟವನು ಸನ್ಯಾಸಿ ಅಲ್ಲವೆಂದು ತಪ್ಪದೆ ಹೇಳಬೇಕಾಗಿ ಬರುತ್ತದೆ. ಜ್ಞಾನವೆನ್ನುವ ಅಗ್ನಿ ಕಾಣಿಸುವುದಿಲ್ಲ ಆದ್ದರಿಂದ ಅಗ್ನಿ ಇಲ್ಲದವನು ಸನ್ಯಾಸಿ ಆಗುವುದಿಲ್ಲವೆಂದು ಹೇಳುವುದರಿಂದ ದೊಡ್ಡ ಆತಂಕವೇನು ಇಲ್ಲ. ಆದರೆ ಕೆಲಸಗಳು ಮಾಡದವನು ಸನ್ಯಾಸಿಯಲ್ಲ, ಸನ್ಯಾಸಿ ಆದವನು ಹೆಂಡತಿ ಮಕ್ಕಳನ್ನು ಹೊಂದಿದ್ದು ಎಲ್ಲಾ ಕೆಲಸಗಳಲ್ಲಿ ಪಾಲ್ಗೊಳ್ಳಬಹುದೆಂದು ಹೇಳುವುದು ಹಿಂದೂಗಳ ಆಚಾರಕ್ಕೆ ವಿರುದ್ಧವಾಗಿ ಹೇಳಿದಂತಾಗುತ್ತದೆ. ಏಕೆಂದರೇ! ಹಿಂದೂಗಳಲ್ಲಿ ಸನ್ಯಾಸಿ ಆದವನಿಗೆ ಎಷ್ಟೋ ಮತನಿಯಮಗಳಿವೆ. ಅದರ ಪ್ರಕಾರ ಗೌತಮನು (ಬುದ್ಧನು) ಹೆಂಡತಿಯನ್ನು, ಒಂದು ವರ್ಷದ ವಯಸ್ಸಿರುವ ಕುಮಾರನನ್ನು ಬಿಟ್ಟು ಅರ್ಧರಾತ್ರಿ

ಮನೆಯಿಂದ ಹೋಗುವುದು, ಭಿಕ್ಷಾಟನೆ ಮಾಡಿ ಬದುಕುವುದು ನಡೆದಿದೆ. ಆದರೆ ದೈವಜ್ಞಾನದ ಪ್ರಕಾರ ಹೆಂಡತಿ ಮಕ್ಕಳೊಂದಿಗೆ ಇರದಂತೆ ಹೊರಗೆ ಹೋಗಿ ಕೆಲಸಗಳು ಮಾಡುವುದು ಬಿಟ್ಟು ಬಿಕ್ಷಾಟನೆ ಮಾಡಿ ಬದುಕುವುದು ಪೂರ್ತಿ ಸರಿ ಹೋಗುವುದಿಲ್ಲ. ಅದನ್ನು ಪೂರ್ತಿ ಅಜ್ಞಾನವಾಗಿ ಲೆಕ್ಕಿಸಲ್ಪಡುತ್ತದೆ. ಮತದ ಪ್ರಕಾರ ಸನ್ಯಾಸಿಸಿದವನು ಜ್ಞಾನ ತಿಳಿದ ನಂತರ ಜ್ಞಾನವೆನ್ನುವ ಅಗ್ನಿಹೊಂದಿ ಎಲ್ಲಾ ಕೆಲಸಗಳು ಮಾಡುತ್ತಾ ಆ ಕೆಲಸಗಳ ಫಲಿತಗಳಾದ ಪಾಪವನ್ನು ಅಂಟದಂತೆ ಹೆಂಡತಿ ಮಕ್ಕಳ ಹತ್ತಿರ ಸೇರಿ ಕುಟುಂಬ ಸಮೇತವಾಗಿದ್ದು ನಾನು ನಿಜವಾದ ಸನ್ಯಾಯೆಂದರೇ ಹಿಂದೂಮತ ಆಚಾರದ ಪ್ರಕಾರ ಯಾರೂ ಅದನ್ನು ಒಪ್ಪಿಕೊಳ್ಳುವುದಿಲ್ಲ. ಯಾರಾದರೂ ಗುರು ನಿಜವಾದ ಸನ್ಯಾಸತ್ವ ಇದುಯೆಂದು ಅಜ್ಞಾನಿಯನ್ನು ಜ್ಞಾನಿಯಾಗಿ ಬದಲಾಯಿಸಿದರೂ, ಆ ಗುರುವನ್ನು ಹಿಂದೂ ಮತವನ್ನು, ಮತ ಆಚಾರಗಳನ್ನು ವಿಚ್ಛಿನ್ನ ಮಾಡುವವನು ಎಂದು ಹೇಳುವುದು ಸಮಂಜಸವಾ ನೀವೇ ಹೇಳಿರಿ. ನೀವು ಯಾವಕಡೆ ಹೇಳದಿದ್ದರೂ ನಾನು ಮಾತ್ರ ಗುರು ಹೇಳಿರುವುದು ಸ್ವಚ್ಛವಾದ ಜ್ಞಾನವೇ ಹೊರತು ಮತವನ್ನು ತಪ್ಪದಾರಿ ಹಿಡಿಸುವುದು, ಮತವಿಚ್ಛಿನ್ನ ಮಾಡುವುದು ಅಲ್ಲವೆಂದು ಹೇಳಬಲ್ಲೆನು.

ಭಗವದ್ಗೀತೆಯಲ್ಲಿ ಆತ್ಮ ಸಂಯಮಯೋಗದಲ್ಲಿನ ಮೊದಲನೇ ಶ್ಲೋಕವೊಂದರ ಭಾವನೆ ಹೇಗೆ ಹಿಂದೂಮತದವರಿಗೆ ಅವರ ಆಚಾರಗಳಿಗೆ ವಿರುದ್ಧವಾಗಿ ಕಾಣಿಸುತ್ತಿದೆಯೋ ಅದೇ ವಿಧವಾಗಿ ಅಂತಿಮ ದೈವಗ್ರಂಥವಾದ ಖುರ್ಆನ್ ಗ್ರಂಥದಲ್ಲಿ ಸೂರಾ 22, ಆಯತ್ 32ರ ಪ್ರಕಾರ (22–32) **“ಯಾರಾದರೆ ಅಲ್ಲಾಹ್ ನೇಮಿಸಿದ ಚಿಹ್ನೆಗಳನ್ನು ಗೌರವಿಸುತ್ತಾನೊ ಅದು ನಿಶ್ಚಯವಾಗಿ ಹೃದಯಗಳಲ್ಲಿರುವ ದೈವಭೀತಿಯಿಂದಲೇ”** ಈ ವಾಕ್ಯವನ್ನು ನೋಡಿದರೆ “ದೈವ ಭೀತಿ ಇರುವವನು ಯಾರಾದರೂ ದೇವರು ನೇಮಿಸಿದ ದೇವರ ಮುದ್ರೆಯನ್ನು ಧರಿಸುತ್ತಾನೆ.” ಎಂದು ಇದೆ. ಗೌರವಿಸುವುದು ಎಂದರೇ ತಲೆಮೇಲೆ ಇಟ್ಟುಕೊಂಡು ಹೊರುವುದೆಂದು ಅರ್ಥ. ದೇವರು ಕೊಟ್ಟಿರುವುದನ್ನು

ಉನ್ನತ ಸ್ಥಾನದಲ್ಲಿ ಇಟ್ಟುಕೊಳ್ಳುವುದು ಎಂದು ಅರ್ಥ. ಇಲ್ಲಿ ಹೇಳಿರುವುದೇ ಅಲ್ಲದೆ ಇದೇ ವಿಷಯವನ್ನೇ ಮಧ್ಯದೈವ ಗ್ರಂಥ ಇಂಜೀಲ್‌ನಲ್ಲಿ ಯೋಹಾನ್ ಪ್ರಕಟಣೆಗಳು (9–4)ರಲ್ಲಿ **"ದೇವರ ಮುದ್ರೆಯನ್ನು ಹಣೆಮೇಲೆ ಧರಿಸದವನು ದೈವದೂತರಿಂದ ಶಿಕ್ಷಿಸಲ್ಪಡುತ್ತಾರೆ"** ಎಂದು ಕೂಡಾ ಇದೆ. ದೈವದೂತರ ಶಿಕ್ಷೆಗಳಿಂದ ತಪ್ಪಿಸಿಕೊಳ್ಳಬೇಕೆಂದರೆ ಎರಡು ಗ್ರಂಥಗಳಲ್ಲಿ ಹೇಳಿದ ದೇವರ ಮಾತನ್ನು (ಆಯತ್‌ನ್ನು) ತಪ್ಪದೆ ಕೇಳಿ ಆಚರಿಸಬೇಕಾಗಿದ್ದೆ. ಆದರೇ ಮುಸ್ಲಿಮ್‌ರಾಗಲಿ, ಕ್ರೈಸ್ಥರಾಗಲಿ ದೇವರ ಚಿಹ್ನೆಯೇ ಅಲ್ಲ ಯಾವ ಗುರುತನ್ನು ಕೂಡಾ ಹಣೆ ಮೇಲೆ ಧರಿಸುವುದಿಲ್ಲ. ಹಾಗೆ ಧರಿಸಿದರೆ ಅವರ ಮತ ಆಚಾರಗಳಿಗೆ ವಿರುದ್ಧವಾಗಿ ಪ್ರವರ್ತಿಸಿದಂತಾಗುತ್ತದೆ. ಹಾಗೆ ಮತ ಆಚಾರಗಳಿಗೆ ಭಯಪಟ್ಟು ಮತದಲ್ಲಿ ಎಲ್ಲರೂ ಇರುವಂತೆ ದೇವರ ಚಿಹ್ನೆಯನ್ನು ಧರಿಸದೆಹೋದರೆ ದೇವರ ಮಾತನ್ನು ಲೆಕ್ಕಮಾಡದವರಾಗುತ್ತಾರೆ.

ಈ ವಿಷಯದಲ್ಲಿ ಪ್ರತಿ ಮುಸ್ಲಿಮ್, ಪ್ರತಿ ಕ್ರೈಸ್ತವನು ಸಂದಿಗ್ಧದಲ್ಲಿ ಬೀಳುತ್ತಿದ್ದಾರೆ. ಮುಸ್ಲಿಮ್‌ರನ್ನು ಕೆಲವರನ್ನು ಕೇಳಿದರೆ ಮನುಷ್ಯರು ನಿರ್ಣಯಿಸಿದ ಮತದ ಪ್ರಕಾರ ಅಲ್ಲದೆ ಅಲ್ಲಾಹ್ ಹೇಳಿದ ಆಯತ್ ಪ್ರಕಾರ ನಡೆಯುತ್ತೇವೆ, ದೇವರ ಮುದ್ರೆಯನ್ನು ಧರಿಸುತ್ತೇವೆ ಎಂದು ಕೇವಲ ಶೇಕಡ ಹತ್ತರಷ್ಟು ಜನರು ಮಾತ್ರ ಅನ್ನುತ್ತಿದ್ದಾರೆ. ಉಳಿದ ಶೇ.90 ರಷ್ಟು ಮಂದಿ ಮತವನ್ನು ಧಿಕ್ಕರಿಸಿದರೆ ಮತ ಹಿರಿಯರನ್ನು ಧಿಕ್ಕರಿಸಿದಂತಾಗುತ್ತದೆ ಮತ ಹಿರಿಯರು ಹೇಳಿದಂತೆ ನಡೆದುಕೊಳ್ಳುತ್ತೇವೆ ಎನ್ನುತ್ತಿದ್ದಾರೆ. ಅದೇ ವಿಧವಾಗಿ ಕ್ರೈಸ್ತರೂ ಸಹ ಅನ್ನುತ್ತಿದ್ದಾರೆ. ಆದರೇ ಅಂತಿಮ ದೈವ ಗ್ರಂಥ ಖುರಾನ್‌ನಲ್ಲಿ ಸೂರಾ 32, ಆಯತ್ 22ರಲ್ಲಿ ಇದೆ.

**(32–22) "ತನ್ನ ಪ್ರಭು ಸೂಚನೆ (ಆಯತ್)ಗಳಿಂದ ಹಿತಬೋಧನೆ ಮಾಡಿದ ನಂತರ ಕೂಡಾ ಅವುಗಳಿಂದ ವಿಮುಖರಾಗುವ ಅವರಿಗಿಂತ ಹೆಚ್ಚಿನ ದುರ್ಮಾರ್ಗನು ಯಾರು? ನಿಶ್ಚಯವಾಗಿ ನಾವು ಅಂತಹ ಅಪವಾದಿಗಳಿಗೆ ಪ್ರತೀಕಾರ ಮಾಡಿ ತೀರುತ್ತೇವೆ."**

ಮೇಲೆ ಹೇಳಿರುವ ಈ ಆಯತ್ ನೋಡಿದ ನಂತರ ಕೂಡಾ ದೇವರ ಜ್ಞಾನವನ್ನು ಬಿಟ್ಟು ಮತ, ಮತ ಆಚಾರಗಳನ್ನು ಹಿಡಿದುಕೊಂಡವನನ್ನು ಏನನ್ನ ಬೇಕೋ ನೀವೇ ಯೋಚಿಸಿರಿ. ಒಂದುವೇಳೇ ಮತಕ್ಕೇ ಹೆಚ್ಚಿನ ಬೆಲೆ ಕೊಟ್ಟರೆ ದೇವರ ಲೆಕ್ಕದಲ್ಲಿ ಅವನು ದುರ್ಮಾರ್ಗನಾಗಿ ಶಿಕ್ಷಾರ್ಹನಾಗಿ ಇರುತ್ತಾನೆ. ನಮಗೆ ದೇವರ ಜ್ಞಾನವೇ ಮುಖ್ಯ. ಎಲ್ಲರ ಒಳಿತನ್ನು ಕೋರಿ ನಾವು ದೇವರ ಜ್ಞಾನವನ್ನೇ ಹೇಳುತ್ತಿದ್ದೇವೆ ಹೊರತು ಮತ ಆಚಾರಗಳನ್ನು ಹೇಳಲಿಲ್ಲ. ಇಷ್ಟು ಹೇಳಿದ ನಂತರ ಕೂಡಾ ದೇವರ ಮುದ್ರೆಯನ್ನು ಗೌರವವಾಗಿ ತಲೆಮೇಲೆ ಧರಿಸುವುದನ್ನು ಮತ ವಿಚ್ಛಿನ್ನ ಎಂದು ಕೆಲವರು ಎಂದರೂ ದೇವರ ವಾಕ್ಯವನ್ನು ನಾವು ಹೇಳುವುದು ತಪ್ಪುವುದಿಲ್ಲ. ನಾವು ಯಾರನ್ನೂ ತಪ್ಪದೆ ಧರಿಸಿರೆಂದು ಹೇಳಲಿಲ್ಲ, ದೇವರ ಜ್ಞಾನವನ್ನು ಮಾತ್ರ ಹೇಳಿದ್ದೇವೆ ಎಂದು ತಿಳಿಯಬೇಕು.

**ಪ್ರಶ್ನೆ :– ಖುರ್‌ಆನ್ ಗ್ರಂಥದಲ್ಲಿ (22–32) ರಲ್ಲಿ ಹೇಳಿದ ದೇವರ ಚಿಹ್ನೆ ಎನ್ನುವ ಮಾತು, ಬೈಬಲ್ ಗ್ರಂಥದಲ್ಲಿ (ಪ್ರಕಟನೆಗಳು 9–4) ರಲ್ಲಿ ಹೇಳಿದ ಮಾತು ಎರಡೂ ಒಂದೇಯೆಂದು ನಾವು ಒಪ್ಪಿಕೊಂಡರೂ ದೇವರ ಮುದ್ರೆಯೆಂದು ನೀವು ತೋರಿಸಿರುವುದು ನಿಜವಾಗಿಯೂ ದೇವರ ಮುದ್ರೆಯೆಂದು ಹೇಗೆ ನಂಬಬೇಕು? ಅದೇ ಆಕಾರ ಅಲ್ಲದೆ ಬೇರೆ ಇನ್ನೂ ಯಾವುದಾದರೂ ಆಕಾರದೊಂದಿಗೆ ದೇವರ ಮುದ್ರೆ ಇರಬಹುದಲ್ಲವೆ!**

**ಉತ್ತರ :–** ಪ್ರಥಮ ದೈವ ಗ್ರಂಥದಲ್ಲಿ ದ್ವಿತೀಯ, ಅಂತಿಮ ದೈವ ಗ್ರಂಥಗಳಲ್ಲಿ ದೇವರ ಗುರುತು ಎನ್ನುವ ಮಾತು ಇದೆ. ಆದರೇ ಪ್ರಥಮ ದೈವ ಗ್ರಂಥವಾದ ಭಗವದ್ಗೀತೆಯಲ್ಲಿ ದೇವರ ಚಿಹ್ನೆಯನ್ನು ಕುರಿತು ಪ್ರತ್ಯೇಕಿಸಿ ಯಾವ ಶ್ಲೋಕವೂ ಇಲ್ಲ. ಆದರೇ ಅಕ್ಷರ ಪರಬ್ರಹ್ಮಯೋಗವೆನ್ನುವ ಅಧ್ಯಾಯದಲ್ಲಿ ಕೆಲವು ಶ್ಲೋಕಗಳ ಸಾರಾಂಶದಲ್ಲಿ ದೇವರ ಚಿಹ್ನೆ (ದೇವರ ಮುದ್ರೆ) ಎನ್ನುವುದು ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣಿಸುವಂತೆ ಇದೆ. ಅಕ್ಷರ ಪರಬ್ರಹ್ಮಯೋಗದಲ್ಲಿ ಕೆಲವು ಶ್ಲೋಕಗಳ ಸಾರಾಂಶದಲ್ಲಿ ದೇವರ ಮುದ್ರೆ ಇರುವಂತೆ 1970ನೇ ವರ್ಷದಲ್ಲಿಯೇ ಗುರುತಿಸಿ ಬರೆದಿದ್ದೇವೆ. ಸುಮಾರು ಇಲ್ಲಿಗೆ 47 ವರ್ಷಗಳ ಕೆಳಗೆ ಗುರುತಿಸಿದ ಚಿಹ್ನೆಯೆ

ಐದು ವರ್ಷಗಳ ಕೆಳಗೆ ಓದಿದ ಖುರ್‌ಆನ್, ಬೈಬಲ್ ಗ್ರಂಥಗಳಲ್ಲಿ ವಾಕ್ಯ ರೂಪವಾಗಿ ಪ್ರತ್ಯೇಕವಾಗಿ ಇರುವಂತೆ ತಿಳಿದಿದೆ. ಅದು ದೇವರು ತಿಳಿಸಿದ ರೂಪವಾಗಿ ತಿಳಿದು ಅದನ್ನೇ ನಾವು ಹೊರಗೆ ಹೇಳುವುದು ನಡೆದಿದೆ. ನನ್ನ ಮಾತನ್ನೇ ನಂಬಬೇಕೆಂದು ನಾನು ಹೇಳುತ್ತಿಲ್ಲ. ದೈವಗ್ರಂಥಗಳ ಪ್ರಕಾರ ನಿಮಗೆ ಇಂತಾದ್ದು ದೈವ ಚಿಹ್ನೆಯೆಂದು ತಿಳಿದಂತಾದರೆ ತಿಳಿಸಿ. ಅದು ಜ್ಞಾನರೀತಿ ಎಲ್ಲ ವಿಧಗಳಲ್ಲಿ ಸರಿಹೋದರೇ ನಾವೂ ಸಹ ವಿಶ್ವಾಸಿಸುತ್ತೇವೆ. ಆದರೇ ನಾವು ಪ್ರಕಟಿಸಿದ ಮುದ್ರೆ ಎಲ್ಲ ವಿಧಗಳಲ್ಲಿ ದೈವಜ್ಞಾನವೊಂದರ ಹೋಲಿಕೆಗಳು ಇವೆಯೆಂದು ಹೇಳುತ್ತಿದ್ದೇವೆ. ನಾವು ದೇವರ ಮುದ್ರೆಯನ್ನು ಜ್ಞಾನರೀತಿಯಲ್ಲಿ ಹೇಳಿದ್ದೇವೆ ಆದರೆ ಮತ ರೀತಿಯಲ್ಲಿ ಧರಿಸಿರೆಂದು ಹೇಳಲಿಲ್ಲ. ದೇವರ ಚಿಹ್ನೆ ಇಲ್ಲವೆ ದೇವರ ಮುದ್ರೆ ದೈವಸಂಬಂಧವಾದುದು ಆದರೆ, ಮತ ಸಂಬಂಧ ವಾದುದಲ್ಲ.

**ಪ್ರಶ್ನೆ :– ಅಸೂಯೆ ಪಡುವವನ ಮುಂದೆ ಆಡುವವನು ಇರಬಾರದೆಂದು' ಹಿರಿಯರು ಗಾದೆಮಾತನ್ನು ಹೇಳುತ್ತಿರುತ್ತಾರೆ. ಅದರ ಪ್ರಕಾರ ನಮ್ಮ ಮತ ಬಲಹೀನ ವಾಗುತ್ತಿದೆಯೆಂದು ಪ್ರತ್ಯೇಕಿಸಿ ಮುಸ್ಲಿಮ್‌ರು ನಂತರ ಕ್ರೈಸ್ತರು, ಹಿಂದೂಗಳು ಅನ್ನುತ್ತಿರುವಾಗ ನೀವು ಏಕೆ ಇಂತಹ ಬೋಧನೆಗಳನ್ನು ಹೇಳಬೇಕು? ಇತರರಿಗೆ ತೊಂದರೆಯಿಲ್ಲದ ಬೋಧನೆಗಳನ್ನು ಹೇಳಬಹುದಲ್ಲವೆ! ನೀವು ಹೇಳುವುದು ನಮ್ಮ ಮತಕ್ಕೆ ವಿರುದ್ಧವಾಗಿದೆ ಎಂದಾಗ ಅಂತಹ ವಿಷಯಗಳು ಹೇಳದೆ ಹೋಗುವುದೇ ಒಳ್ಳೆಯದಲ್ಲವೆ! ಇದಕ್ಕೆ ನೀವೇನೆನ್ನುತ್ತೀರ?**

**ಉತ್ತರ :–** ಮದುವೆ ದೈವಿಕವಾದುದೆಂದು ಎಲ್ಲರಿಗೂ ತಿಳಿದಿದೆ. ಮದುವೆ ಎಂದರೆ ದೇವರು ಎನ್ನುವ ಅರ್ಥವೂ ಸಹ ಇದೆ. ಎಲ್ಲರೂ ದೇವರ ಸಂತತಿಯೆನ್ನುವಂತೆ ಯುವತೀ ಯುವಕರನ್ನು ಮದುಮಗಳು, ಮದುಮಗ ಎನ್ನುತ್ತಿದ್ದಾರೆ. ಮದುವೆ ದೈವಿಕವಾದುದು ಆದ್ದರಿಂದ ಪವಿತ್ರವಾಗಿ ವೇದ ಮಂತ್ರಗಳೊಂದಿಗೆ, ಬ್ರಾಹ್ಮಣರ ಸಮಕ್ಷಮದಲ್ಲಿ ಮಾಡುತ್ತಿದ್ದಾರೆ. ಉಳಿದ ಎರಡು ಮತಗಳಲ್ಲಿ ಕೂಡಾ ಮದುವೆ ಕಾರ್ಯವನ್ನು ಪವಿತ್ರವಾಗಿ ಹಿರಿಯರೆಲ್ಲರೂ

ಸೇರಿ ಜ್ಞಾನ ಗುರುಗಳ ಸಮಕ್ಷಮದಲ್ಲಿ ಮಾಡುತ್ತಿರುವರು. ಮದುವೆ ಪವಿತ್ರವಾದುದು ದೈವಿಕವಾದುದು. ಆದರೇ ಪ್ರಸವವೇದನೆ ಪ್ರಕೃತಿ ಸಿದ್ಧವಾದುದು. ಪ್ರಸವ ವೇದನೆಗೆ ಭಯಪಟ್ಟು ಯಾರಾದರೂ ಮದುವೆ ಮಾಡಿಕೊಳ್ಳುವುದು ಬಿಡುತ್ತಿದ್ದಾರಾ? ಇಲ್ಲ ಅಲ್ಲವೆ! ಹಾಗೆಯೇ ಪ್ರಕೃತಿ ಸಿದ್ಧವಾದ ಮತಗಳಿಗೆ ವಿರುದ್ಧವೆಂದು ದೈವಿಕವಾದ ಜ್ಞಾನವನ್ನು ಬಿಟ್ಟುಕೊಳ್ಳಲಾರೆವು ಅಲ್ಲವೆ! ಮತಕ್ಕೆ ವಿರುದ್ಧವಾದುದು ದೈವಜ್ಞಾನ. ಮತ ನಿಯಮಗಳೊಂದಿಗೆ ಕೂಡಿಕೊಂಡಿರುವು ದಾಗಿರುವಾಗ, ನಿಯಮಗಳು ಇಲ್ಲದಿರುವುದಾಗಿ ದೈವಜ್ಞಾನವಿದೆ. ಮನುಷ್ಯರು ಮತವನ್ನು ನಿರ್ಮಿಸಿಕೊಂಡಾಗ, ಮನುಷ್ಯರು ಮತ ಮಾಯೆಯಿಂದ ಹೊರ ಬೀಳುವುದಕ್ಕೆ ದೇವರು ಪ್ರತಿ ಮತಕ್ಕೂ ಒಬ್ಬ ಪ್ರವಕ್ತನನ್ನು, ಒಂದು ಗ್ರಂಥವನ್ನು ಕೊಟ್ಟಿದ್ದಾನೆ. ಮತ ದೈವಿಕವಾದುದು ಆದರೆ, ಮತದಿಂದ ದೇವರು ತಿಳಿಯುವವನಾಗಿದ್ದರೆ ದೇವರು ಪ್ರತ್ಯೇಕಿಸಿ ಪ್ರವಕ್ತನನ್ನು, ದೈವ ಗ್ರಂಥವನ್ನು ಕೊಡುವವನಲ್ಲ. ಮತಕ್ಕಾಗಿ, ಮತ ನಿಯಮಗಳಿಗಾಗಿ ಹಿಂದೂಗಳು ವೇದಗಳನ್ನು ತಯಾರಿಸಿಕೊಂಡಂತೆ, ಕ್ರೈಸ್ತರು ಹಳೆ ನಿಬಂಧನೆ, ಮುಸ್ಲಿಮ್‌ರು ಹದೀಸುಗಳನ್ನು ತಯಾರಿಸಿಕೊಂಡಿದ್ದಾರೆ. ಅವುಗಳಿಂದ ಮನುಷ್ಯರಿಗೆ ಜ್ಞಾನ ಉಂಟಾಗುವು ದಿಲ್ಲವೆಂದು, ಅವರ ಕರ್ಮಗಳು ಕ್ಷಮಿಸಲ್ಪಡುವುದಿಲ್ಲವೆಂದು ತಿಳಿದ ದೇವರು ಪ್ರತಿ ಮತಕ್ಕೂ ಒಂದು ದೈವ ಗ್ರಂಥವನ್ನು ಕೊಟ್ಟಿದ್ದಾನೆ. ಹಾಗೆ ಗ್ರಂಥಗಳು ಬೇರೆಬೇರೆಯಾಗಿ ಇದ್ದರೂ ಅವುಗಳಲ್ಲಿನ ಸಾರಾಂಶ ಎಲ್ಲವೂ ಒಂದೇ ಎಂದು ಅಂತಿಮ ದೈವ ಗ್ರಂಥದಲ್ಲಿ ಸೂರಾ 5 ರಲ್ಲಿ 44, 46, 48, 68 ರಲ್ಲಿ ಹೇಳಿದ್ದಾರೆ.

ಮನುಷ್ಯರು ಹುಟ್ಟಿನಿಂದಲೇ ಯಾವುದೋ ಒಂದು ಮತದಲ್ಲಿ ಇದ್ದರೂ, ಅವರು ದೈವದ ಕಡೆ ಹೋಗುವುದಕ್ಕೆ ದೈವ ಗ್ರಂಥವನ್ನು ಅವರಿಗೆ ಕೊಡುವುದು ನಡೆದಿದೆ. ದೈವ ಗ್ರಂಥಗಳು ಮೂರು ಮತಗಳ ಹತ್ತಿರ ಇದ್ದರೂ, ಅದರಲ್ಲಿನ ಜ್ಞಾನ ಪೂರ್ತಿಯಾಗಿ ಮನುಷ್ಯರಿಗೆ ಅರ್ಥವಾಗಲಿಲ್ಲ. ಆದ್ದರಿಂದ ನಾನು ಒಬ್ಬ ಬೋಧಕನಾಗಿ ಮೂರು ಮತಗಳ ಜ್ಞಾನವನ್ನು ಪ್ರಜೆಗಳಿಗೆ ಹೇಳುವುದು ನಡೆಯುತ್ತಿದೆ. ಆದರೆ ಪ್ರತಿ ಮನುಷ್ಯನ ಶರೀರದಲ್ಲಿ ಪ್ರಕೃತಿ ಜನಿತ ಗುಣಗಳು

ಇರುವುದರಿಂದ ಅವರಿಗೆ ಪ್ರಕೃತಿ ಸಂಬಂಧ ಆಲೋಚನೆಗಳೇ ಬರುತ್ತಿರುತ್ತವೆ. ಪ್ರಕೃತಿಯಿಂದ ಅಜ್ಞಾನಕ್ಕೆ ಅಭ್ಯಾಸವಾದ ಮನುಷ್ಯರಿಗೆ ಜ್ಞಾನ ಸಂಬಂಧ ಮಾತುಗಳು ವಿರುದ್ಧವಾಗಿಯೇ ಇರುತ್ತವೆ. ಉದಾಹರಣಗೆ ಹೇಳಬೇಕೆಂದರೆ ಮುಸ್ಲಿಮ್‌ರು ಗಡ್ಡವನ್ನು ಬೆಳೆಸುವುದು ಸಹಜವಾಗಿಯೇ ಇದೆ. ಅದು ಮುಸ್ಲಿಮ್‌ರ ಮತಾಚಾರ. ಮತ ಆಚಾರವನ್ನು ಎಲ್ಲರೂ ಪಾಟಿಸುವುದು ನಡೆಯುತ್ತಿದೆ. ಆದರೆ ಅದನ್ನೇ ದೈವಜ್ಞಾನ ಆಚಾರವಾಗಿ ಕೆಲವರು ಭಾವಿಸುತ್ತಿದ್ದಾರೆ. ಆದ್ದರಿಂದ 'ನಾನು ದೇವರ ಮಾರ್ಗದಲ್ಲಿ ಇದ್ದೇನೆ,' ಎನ್ನುವ ಸೂಚನೆಯಾಗಿ ಮುಸ್ಲಿಮ್‌ರು ಗಡ್ಡವನ್ನು ಬೆಳೆಸುವುದು, ಟೋಪಿ ಇಡುವುದು ನಡೆಯುತ್ತಿದೆ. ಆದರೇ ದೈವ ಗ್ರಂಥವಾದ ಖುರ್‌ಆನ್‌ನಲ್ಲಾಗಲಿ ಉಳಿದ ಯಾವ ದೈವಗ್ರಂಥದಲ್ಲಾದರೂ ಗಡ್ಡ (ದಾಡಿ) ಬೆಳೆಸಿರೆಂದು ಅದು ದೈವ ಸೂಚನೆ ಎಂದು ಎಲ್ಲೂ ಇಲ್ಲ. ಹಾಗೆಯೇ ಸನ್ಯಾಸದಲ್ಲಿ ಕಾವಿ (ಕಾಷಾಯ) ವಸ್ತ್ರಗಳು ಧರಿಸಿರೆಂದು ಭಗವದ್ಗೀತೆಯಲ್ಲಿ ಇಲ್ಲ. ಅದೇರೀತಿ ಮತಾಚಾರಗಳು ದೈವ ಗ್ರಂಥಗಳಲ್ಲಿ ಇಲ್ಲದಂತೆ ದೈವ ಸಂಬಂಧ ವಿಷಯಗಳಿರುವು ದರಿಂದ ಅವು ಕೆಲವರಿಗೆ ವಿರುದ್ಧವಾಗಿ ಕಾಣಿಸುತ್ತವೆ. ಮುಸ್ಲಿಮ್ ಮತಾನುಸಾರ 'ದೇವರು ಮನುಷ್ಯನಾಗಿ ಅವತರಿಸುವುದಿಲ್ಲ' ಎಂದು ಇದೆ. ಆದರೆ ದೈವ ಗ್ರಂಥ ಖುರ್‌ಆನ್‌ನಲ್ಲಿ ಸೂರಾ 15, ಆಯತ್‌ಗಳು 28,29,30 ರಲ್ಲಿಯೂ ಮತ್ತು ಸೂರಾ 89, ಆಯತ್ 22ರಲ್ಲಿ **"ದೇವರು ಅವತರಿಸುತ್ತಾನೆಂದು"** ಇದೆ. 'ದೇವರು ಅವತರಿಸುವುದಿಲ್ಲ' ಎನ್ನುವುದು ಮತವಾದಾಗ, 'ದೇವರು ಅವತರಿಸುತ್ತಾನೆ' ಎಂದು ಹೇಳುವುದು ದೈವಜ್ಞಾನ.

ಮುಸ್ಲಿಮ್‌ರಾದವರು ತಮ್ಮ ಹಿರಿಯರು ಹೇಳಿದಂತೆ ಕೇಳಿ ಅದನ್ನೇ ಜ್ಞಾನ ಎಂದುಕೊಂಡು ಇತರೆ ಮತದವರಿಗೆ ಜ್ಞಾನ ತಿಳಿಯದೆಂದು, ತಮಗೆ ಮಾತ್ರವೇ ಜ್ಞಾನ ತಿಳಿದಿದೆಯೆಂದು ಅಂದುಕೊಳ್ಳುವುದೇ ಅಲ್ಲದೆ ತಮಗೆ ದೇವರು ಹತ್ತಿರವಾಗಿ ಇದ್ದಾನೆಂದು, ತಾವು ಮಾತ್ರವೇ ಏಕೇಶ್ವರೋಪಾಸನೆ ಮಾಡುತ್ತಿದ್ದೇವೆಂದು, ಉಳಿದ ಮತದವರು ಹಾಗೆ ಇಲ್ಲವೆಂದು, ಅವರೆಲ್ಲರೂ ದೇವರಿಗೆ ವಿರುದ್ಧವಾದವರೆಂದು ಅಂತಹವರನ್ನು ಸಾಯಿಸಬೇಕೆಂದು ತಮ್ಮ ಗ್ರಂಥದಲ್ಲಿ

ಹೇಳಿದಂತೆ ಕೂಡಾ ಹೇಳಿಕೊಳ್ಳುತ್ತಿರುವರು. ಅಂತಿಮ ದೈವ ಗ್ರಂಥದಲ್ಲಿ ಸೂರಾ9, ಆಯತ್ 5ರ ಪ್ರಕಾರ "ನಮಾಜ್ ಮಾಡದವರನ್ನು, ಜಕಾತ್ ಕೊಡದವರನ್ನು ಸಾಯಿಸೆಂದು" ಇದೆಯೆಂದು ಹೇಳುತ್ತಿರುವರು. ಯಾವ ದೈವ ಗ್ರಂಥದಲ್ಲಾದರೂ ದೈವಜ್ಞಾನವಿರುತ್ತದೆ ಆದರೆ ಮನುಷ್ಯನನ್ನು ಅಕ್ರಮ ಮಾರ್ಗದಲ್ಲಿ ಕಳುಹಿಸುವ ಅಜ್ಞಾನವಿರುತ್ತದಾ? ಅವರು ಹೇಳಿದಂತೆ (9–5) ರಲ್ಲಿ ಹಾಗೆಯೇ ಬರೆದಿಟ್ಟಿದ್ದಾರೆ. ಆ ವಾಕ್ಯವನ್ನು ವಿವರಿಸಿಕೊಂಡು ನೋಡಿದರೆ ಅದರಲ್ಲಿ ಜ್ಞಾನ ಹೊರತು ಏನೂ ಇಲ್ಲ. ಅಲ್ಲಿ 'ದೇವರು ತನ್ನ ದೂತರಿಗೆ ಹೇಳಿದ ಮಾತುಗಳು ಹೊರತು ಮನುಷ್ಯರಿಗೆ ಹೇಳಿರುವವು ಯಾವುವೂ ಇಲ್ಲ.' ವಾಸ್ತವವಾಗಿ ಆ ವಾಕ್ಯದಲ್ಲಿ ಹೇಳಿದ 'ನಮಾಜ್' ಎಂದರೆ ಪೂರ್ತಿ ವಿವರ ತಿಳಿದಿಲ್ಲ. ಹಾಗೆಯೇ 'ಜಕಾತ್' ಎಂದರೇ ಏನೋ ತಿಳಿದಿಲ್ಲ.

ಕೆಲವರು ಮುಸ್ಲಿಮ್‌ರು ನಮಗೆ ನಮಾಜ್, ಜಕಾತ್ ತಿಳಿದಿಲ್ಲವಾ! ಎಂದು ಪ್ರಶ್ನಿಸಬಹುದು. ಅದಕ್ಕೆ ನನ್ನ ಸಮಾಧಾನ ಏನೆಂದರೆ! ಖುರ್‌ಆನ್ ಗ್ರಂಥದಲ್ಲಿ ಸೂರಾ ಮೂರು, ಆಯತ್ ಏಳರಲ್ಲಿ (3–7) ಖುರ್‌ಆನ್ ಗ್ರಂಥದಲ್ಲಿ ಸ್ಥೂಲ, ಸೂಕ್ಷ್ಮವಾಕ್ಯಗಳೆಂದು ಎರಡು ವಿಧಗಳು ಇವೆಯೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಸೂಕ್ಷ್ಮವಾಕ್ಯಗಳ ಭಾವ ದೇವರಿಗೆ ಮಾತ್ರವೇ ತಿಳಿದಿದೆಯೆಂದು ಸಹ ಹೇಳಲಾಗಿದೆ. ಇದನ್ನನುಸರಿಸಿ ಮನುಷ್ಯರಿಗೆ ತಿಳಿಯದ ಸೂಕ್ಷ್ಮಜ್ಞಾನ ವಾಕ್ಯಗಳು ಅನೇಕವಾಗಿ ಖುರ್‌ಆನ್‌ನಲ್ಲಿ ಇವೆಯೆಂದು, ಅಂತಹ ವಾಕ್ಯಗಳಿಗೆ ದೇವರು ತಿಳಿಸಿದರೇನೇ ಭಾವ ತಿಳಿಯುತ್ತದೆಂದು ಹೇಳುತ್ತಿದ್ದೇವೆ. (9–5) ವಾಕ್ಯದಲ್ಲಿ ಎಷ್ಟೋ ಸೂಕ್ಷ್ಮಜ್ಞಾನವಿದೆಯೆಂದು ಅದು ಅರ್ಥವಾಗದೆ ನಮಾಜ್, ಜಕಾತ್ ಎಂದರೆ ಏನೋ ತಿಳಿಯದ ಸ್ಥಿತಿಯಲ್ಲಿ ಮನುಷ್ಯ ಇದ್ದಾನೆ. ಮಸ್ಜೀದ್‌ಗೆ ಹೋಗಿ ಮಾಡುವ ಪ್ರಾರ್ಥನೆ ಮಾತ್ರವೇ ಪೂರ್ತಿ ನಮಾಜ್ ಅಲ್ಲವೆಂದು ಯಾವಾಗಲೂ ಮಾಡುವ ನಮಾಜ್ ಪ್ರತ್ಯೇಕವಾಗಿ ಇದೆಯೆಂದು ಹೇಳಿದ್ದಾರೆ.

ಯಾವಾಗಲೂ ಪ್ರಾರ್ಥನೆ ಮಾಡದವರನ್ನು ಶಿಕ್ಷಿಸೆಂದು ದೇವರು ತನ್ನ ದೂತರಿಗೆ ಹೇಳಿದರೇ ಅದನ್ನು ದೇವರು ಮನುಷ್ಯರಿಗೆ (ಮುಸ್ಲಿಮ್‌ರಿಗೆ)

ಹೇಳಿದ್ದಾನೆಂದು ಅಂದುಕೊಳ್ಳುವುದು ಪೂರ್ತಿ ತಪ್ಪು. ಖುರ್‌ಆನ್ ಗ್ರಂಥದಲ್ಲಿ ಸ್ಥೂಲಭಾವನೆಗಳಿರುವ ಸ್ಥೂಲವಾಕ್ಯಗಳು ಮತ್ತು ಸೂಕ್ಷ್ಮ ಭಾವನೆಗಳಿರುವ ವಾಕ್ಯಗಳು ಇವೆಯೆಂದು ಗ್ರಂಥದಲ್ಲೇ ಹೇಳಿದ್ದಾರೆ. ಹೇಳಿದ ಪ್ರತಿ ವಾಕ್ಯವೂ ಸ್ಥೂಲವಾಗಿಯೇ ಕಾಣಿಸುತ್ತಿರುತ್ತದೆ.ಆದರೇ ಅವು ಸೂಕ್ಷ್ಮ ಭಾವದೊಂದಿಗೆ ಕೂಡಿಕೊಂಡಿವೆಯೆಂದು ಬಹಳ ಜನರಿಗೆ ತಿಳಿದಿಲ್ಲ. ಪ್ರತ್ಯೇಕಿಸಿ 6–95ನೇ ವಾಕ್ಯ (ಆಯತ್) ಸ್ಥೂಲವಾಗಿಯೇ ಕಾಣಿಸಿದರೂ ಅದರ ಭಾವ ಇಲ್ಲಿಯವರೆಗು ಯಾರಿಗೂ ತಿಳಿಯದೆಂದು ಹೇಳಬಹುದು. ಅಷ್ಟೇ ಅಲ್ಲದೆ ಕೆಲವು ನೂರು ವರ್ಷಗಳಿಗೆ ಕೂಡಾ ಅದರ ನಿಜಭಾವವನ್ನು ತಿಳಿಯಲಾರರೆಂದು ಹೇಳಬಹುದು. ಸ್ಥೂಲವಾಗಿ ಹೇಳಿದ ವಾಕ್ಯಗಳನ್ನೇ ಸರಿಯಾಗಿ ಅರ್ಥ ಮಾಡಿಕೊಳ್ಳದ ಸ್ಥಿತಿಯಲ್ಲಿ ಮನುಷ್ಯರಿದ್ದಾರೆಂದು ಹೇಳಬಹುದು. 'ದೇವರು ಅವತರಿಸುತ್ತಾನೆ' ಎನ್ನುವ ಮಾತು (89–22) ಸ್ಥೂಲ, ಅದಕ್ಕಿಂತ ಮೊದಲಿರುವ (89–21) ಆಯತ್ ಸೂಕ್ಷ್ಮವಾದುದು. ಈ ವಿಧವಾಗಿ ಪಕ್ಕಪಕ್ಕದಲ್ಲಿಯೇ ಸ್ಥೂಲ, ಸೂಕ್ಷ್ಮಗಳಿದ್ದಂತೆ ಬಹಳ ಜನ ಮುಸ್ಲಿಮ್‌ರಿಗೆ ತಿಳಿದಿಲ್ಲ. ಮುಸ್ಲಿಮ್‌ರಿಗೇ ತಿಳಿಯದಿರುವಾಗ ಇತರೆ ಮತದವರಿಗೆ ತಿಳಿಯುವ ಅವಕಾಶವೇ ಇಲ್ಲ. ನಾನು ಖುರ್‌ಆನ್ ಗ್ರಂಥ ಎಲ್ಲ ಮತದವರಿಗೂ ಅರ್ಥವಾಗಬೇಕೆನ್ನುವ ಉದ್ದೇಶದಿಂದ ಆ ಗ್ರಂಥದಲ್ಲಿನ ಕೆಲವು ಸೂಕ್ಷ್ಮವಾಕ್ಯಗಳಿಗೆ ಭಾವವನ್ನು ತಿಳಿಸಿದ್ದೇವೆ. ನಾವು ಹೇಳಿದ ಭಾವವನ್ನು ಕೆಲವರು ಮುಸ್ಲೀಮ್‌ರು ಗ್ರಹಿಸದೆ ನಮ್ಮ ಖುರ್‌ಆನ್ ಗ್ರಂಥವನ್ನು ತಪ್ಪಾಗಿ ಬರೆದಿದ್ದಾನೆಂದು ಖುರ್‌ಆನ್‌ನನ್ನು, ಮುಹಮ್ಮದ್ ಪ್ರವಕ್ತನನ್ನು ತಪ್ಪಾಗಿ ಹೇಳನವಾಗಿ ಬರೆದಿದ್ದಾನೆಂದು ಅನವಶ್ಯಕವಾಗಿ ಅಸತ್ಯ ಆರೋಪಣೆಗಳು ಮಾಡುತ್ತಿದ್ದಾರೆ. ಅಂತಿಮ ದೈವ ಗ್ರಂಥವೊಂದರ ವಿಶಿಷ್ಟತೆ, ಮುಹಮ್ಮದ್ ಪ್ರವಕ್ತರ ಹಿರಿಮೆ ನನಗೆ ತಿಳಿದಿದೆ. ಆದ್ದರಿಂದ ಅದನ್ನು ದೊಡ್ಡದಾಗಿಯೇ ಬರೆದಿದ್ದೇನೆ ಆದರೆ ಕಡಿಮೆಯಾಗಿ ಎಲ್ಲಿಯೂ ಬರೆಯಲಿಲ್ಲ. ಸೂಕ್ಷ್ಮ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳದವರಿಗಾಗಿ ನಾನು ಕೆಲವು ವಾಕ್ಯಗಳನ್ನು ಬರೆಯುವುದು ನಡೆದಿದೆ. ಹಾಗೆ ಬರೆದ ಗ್ರಂಥಗಳ ಹೆಸರುಗಳು **"ಅಂತಿಮ ದೈವ**

**ಗ್ರಂಥದಲ್ಲಿ ಜ್ಞಾನ ವಾಕ್ಯಗಳು", "ಅಂತಿಮ ದೈವ ಗ್ರಂಥದಲ್ಲಿ ವಜ್ರ ವಾಕ್ಯಗಳು"** ಎಂದು ಹೆಸರುಗಳನ್ನಿಟ್ಟಿದ್ದೇವೆ.

ಮೂರು ಮತದವರಿಗೂ ಅವರವರ ಗ್ರಂಥಗಳಲ್ಲಿರುವ ಸೂಕ್ಷ್ಮ ವಾಕ್ಯಗಳಿಗೆ ಇಲ್ಲಿಯವರೆಗು ಅರ್ಥ ತಿಳಿಯದೆಂದೇ ಹೇಳಬಹುದು. ಬೈಬಲ್ ಗ್ರಂಥದಲ್ಲಿ 'ಯೇಸು ತನ್ನ ಶಿಷ್ಯರಿಗೆ ರೊಟ್ಟಿಯನ್ನು ಕೊಟ್ಟು, ಇದು ನನ್ನ ಶರೀರ ತಿನ್ನಿರಿ' ಎಂದಿದ್ದಾನೆ. ಹಾಗೆಯೇ 'ದ್ರಾಕ್ಷಾರಸವನ್ನು ಕೊಟ್ಟು ಇದು ಸೋರಿಸಲ್ಪಡುತ್ತಿರುವ ನನ್ನ ರಕ್ತ' ಎಂದು ಹೇಳಿದ್ದಾನೆ. ಶಿಷ್ಯರಿಗೆ ಭೋಜನ ಸಮಯದಲ್ಲಿ ಹಾಗೆ ರೊಟ್ಟಿಯನ್ನು, ರಸವನ್ನು ಕೊಟ್ಟು ಕುಡಿಯಿರಿ, ತಿನ್ನಿರಿ ಎಂದು ಹೇಳಿದ್ದಾನೆ. ಕೆಲವರಿಗೆ ಆ ವಿಷಯ ಇಲ್ಲಿಯವರೆಗೂ ಅರ್ಥವಾಗಲಿಲ್ಲ. ಕ್ರೈಸ್ತರಿಗೇ ಅಲ್ಲದೆ ಉಳಿದವರಿಗೆ ಕೂಡಾ ಅರ್ಥವಾಗದ ಸ್ಥಿತಿಯಲ್ಲಿ ಆ ವಾಕ್ಯ ನಿಂತುಹೋಗಿದೆ. ಹೀಗೆ ಕೆಲವು ನೂರು ವಾಕ್ಯಗಳಿಗೆ ಮೂರು ಗ್ರಂಥಗಳಲ್ಲಿ ಅರ್ಥ ತಿಳಿಯುತ್ತಿಲ್ಲ. ಇದೆಲ್ಲವೂ ಚೆನ್ನಾಗಿ ಪರಿಶೀಲಿಸಿದ ನಂತರ ನಾನು ಮೂರು ಗ್ರಂಥಗಳಲ್ಲಿನ ಸೂಕ್ಷ್ಮವಾಕ್ಯಗಳಿಗೆ ವಿವರ ಹೇಳುವುದಾಗಿದೆ. ನನ್ನ ಉದ್ದೇಶ ಮೂರು ಗ್ರಂಥಗಳಲ್ಲಿನ ಪ್ರತಿ ವಿಷಯದಲ್ಲಿನ ಸತ್ಯವನ್ನು ತಿಳಿಸಬೇಕೆಂದೇ ಹೊರತು ಇತರರನ್ನು ಹೀಯಾಳಿಸಬೇಕೆಂದು ಯಾವ ವಿಧದಲ್ಲೂ ಇಲ್ಲ. ನಾನು ಹೇಳುವ ವಿಷಯಗಳನ್ನು ಸ್ವಲ್ಪ ಗಮನವಿಟ್ಟು ನೋಡಿರಿ, ತಿಳಿಯದ ರಹಸ್ಯಗಳು ನಿಮಗೆ ತಿಳಿಯುತ್ತವೆ. ಅಷ್ಟೇ ಹೊರತು ಯಾವ ಮತಕ್ಕೂ ನಾನು ವಿರೋಧವಾಗಿ ಹೇಳಲಿಲ್ಲ. ಯಾರೋ ಏನೋ ಅಂದಿದ್ದಾರೆಂದು ನಾನು ಈ ದಿನ ಮೂರು ದೈವಗ್ರಂಥಗಳ ಸೂಕ್ಷ್ಮವಾಕ್ಯಗಳಿಗೆ ವಿವರ ಬರೆಯದೆ ಹೋದರೆ ಭವಿಷ್ಯತ್ತಿನಲ್ಲಿ ಅವುಗಳ ವಿವರ ತಿಳಿಯದಂತೆ ಹೋಗುತ್ತದೆ. ಅದರಿಂದ ಮೂರು ಮತದವರಿಗೂ ತೀರದ ನಷ್ಟ ಏರ್ಪಡುತ್ತದೆ. ಆದ್ದರಿಂದ ಯಾರು ಏನೆಂದು ಕೊಂಡರೂ ಫರವಾಗಿಲ್ಲವೆಂದು ದೈವ ಗ್ರಂಥಗಳಲ್ಲಿನ ಸೂಕ್ಷ್ಮವಾಕ್ಯಗಳಿಗೆ ವಿವರವನ್ನು ಬರೆಯುವುದು ನಡೆದಿದೆ.

ನಾನು ಹಿಂದೂವಾಗಿದ್ದು ಮೂರು ಮತಗಳ ಗ್ರಂಥಗಳೆಂದು ಹೆಸರು ಪಡೆದ ಭಗವದ್ಗೀತೆ, ಬೈಬಲ್, ಖುರ್‌ಆನ್ ವಾಕ್ಯಗಳಿಗೆ ವಿವರ ಬರೆದು ಎಲ್ಲರಿಗೂ ಒಳಿತನ್ನು ಮಾಡಿದರೂ, ನಮ್ಮ ಮತ ಗ್ರಂಥವಾದ ಖುರಾನ್‌ನಲ್ಲಿನ ಆಯತ್‌ಗಳಿಗೆ (ವಾಕ್ಯಗಳಿಗೆ) ವಿವರ ಬರೆಯಬೇಕೆಂದರೆ ನಮ್ಮ ಅನುಮತಿ ಬೇಕೆಂದು ಕೆಲವರು ಮುಸ್ಲೀಮ್‌ರು ಹೇಳಿದರೂ, ಮತ್ತೆ ಕೆಲವರು ಮುಸ್ಲಿಮ್‌ರು ಮುಸ್ಲಿಮ್ ಗುರುಗಳು ನಾವು ಖುರ್‌ಆನ್ ವಾಕ್ಯಗಳಿಗೆ ವಿವರ ಬರೆದಿರುವುದಕ್ಕೆ ಸಂತೋಷಿಸಿ ನನ್ನನ್ನು ಪ್ರಶಂಸಿಸುವುದು ನಡೆದಿದೆ. ನನ್ನಿಂದ ಸುಮಾರು 30 ಸಾವಿರ ಜನ ಹಿಂದೂಗಳು, 10 ಸಾವಿರ ಮಂದಿ ಕ್ರೈಸ್ತರು ಖುರ್‌ಆನ್‌ನನ್ನು ಓದುವುದು ನಡೆದಿದೆ. ಪ್ರತಿ ಮನುಷ್ಯನ ಹತ್ತಿರ ಮತಬೇಧ ಇಲ್ಲದಂತೆ ಇರುವುದಕ್ಕೆ ಮೂರು ದೈವ ಗ್ರಂಥಗಳು ಇರಬೇಕೆಂದು ಹೇಳಿದ್ದೇವೆ. ಮೂರು ದೈವ ಗ್ರಂಥಗಳನ್ನು ಓದಬೇಕೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೆ ಮೂರು ದೈವ ಗ್ರಂಥಗಳನ್ನು ಬಹಳ ಜನರಿಗೆ ಕೊಟ್ಟು ಓದಿಸಿದ್ದೇವೆ. ಇದೆಲ್ಲವೂ ಅಲ್ಲದೆ ಪ್ರತೀ ತಿಂಗಳು ಪೌರ್ಣಮಿ ದಿನದಂದು ನಮ್ಮ ಹತ್ತಿರಕ್ಕೆ ಬರುವ ಮುಸ್ಲಿಮ್‌ರಿಗು, ಕ್ರೈಸ್ಥರಿಗೂ ಚರ್ಚಾವೇದಿಕೆ ಇಟ್ಟು ಅದರಲ್ಲಿ ಮುಸ್ಲಿಮ್‌ರು ಬೈಬಲ್ ವಾಕ್ಯಗಳಿಗೆ ವಿವರವನ್ನು ಹೇಳಿದಾಗ, ಕ್ರೈಸ್ಥರು ಖುರ್‌ಆನ್ ವಾಕ್ಯಗಳಿಗೆ ವಿವರವನ್ನು ಹೇಳುವುದು ನಡೆಯುತ್ತಿದೆ. ಅದರಿಂದ ನನ್ನ ಮತ, ನಿನ್ನ ಮತ ಎನ್ನುವ ಭೇದ ಇಲ್ಲದಂತೆ ಹೋಗಿ ಮತಗಳ ಮಧ್ಯೆ ಐಕ್ಯತೆ ಏರ್ಪಡುವುದೇ ಅಲ್ಲದೆ ಮೂರು ದೈವ ಗ್ರಂಥಗಳಲ್ಲಿನ ಜ್ಞಾನ ಎಲ್ಲ ಮತದವರಿಗೂ ತಿಳಿದುಹೋಗುತ್ತಿದೆ. ಇಂತಹ ಕಾರ್ಯಗಳು ದೇಶದಲ್ಲಿ ಯಾರೂ ಮಾಡಲಿಲ್ಲ. ನಾವು ಮಾಡುತ್ತಿದ್ದೇ ವೆಂದರೇ ಸಂತೋಷಪಡುವವರು ಬಹಳ ಜನ ಇರುವಾಗ, ಕೆಲವರು ಮಾತ್ರ ನಮ್ಮನ್ನು ವಿಮರ್ಶಿಸುತ್ತಲೇ ಇದ್ದಾರೆ. ಈ ಸಮಾಚಾರವನ್ನು ಓದುತ್ತಿರುವ ನೀವು ಸ್ವಲ್ಪ ಯೋಚಿಸಿರಿ. ನಾನು ಮಾಡುವುದು ಒಳ್ಳೆಯ ಕೆಲಸವೋ ಕೆಟ್ಟ ಕೆಲಸವೋ ನಿಮಗೇ ಅರ್ಥವಾಗುತ್ತದೆ.

**ಪ್ರಶ್ನೆ :– ಇದಕ್ಕೂ ಮೊದಲು ನೀವು ಹೇಳಿದ ಮಾತುಗಳಲ್ಲಿ ಈಗ ನಾನು ಸೂಕ್ಷ್ಮ ವಾಕ್ಯಗಳಿಗೆ ವಿವರವನ್ನು ಹೇಳದೇ ಹೋದರೇ ನಂತರ ಭವಿಷ್ಯತ್ತಿನಲ್ಲಿ ಇವುಗಳ**

**ವಿವರ ತಿಳಿಯುವ ಅವಕಾಶವೇ ಇಲ್ಲವೆಂದು ಹೇಳಿದ್ದೀರ. ಇಲ್ಲಿ ನಾವು ಕೇಳುತ್ತಿರುವುದು ಏನೆಂದರೆ ಭವಿಷ್ಯತ್ತಿನಲ್ಲಿ ನಿಮ್ಮಂತೆ ಜ್ಞಾನ ತಿಳಿದವರು ಬರುವುದಿಲ್ಲವೆನ್ನುತ್ತೀರಾ? ನಿಮಗೆ ತಿಳಿದಷ್ಟು ಇತರರಿಗೆ ತಿಳಿದಿಲ್ಲವೆನ್ನುತ್ತೀರಾ? ನೀವು ಹೇಳುವ ಬೋಧನೆಗಳು ಇತರರು ಹೇಳುವುದಿಲ್ಲವೆನ್ನುತ್ತೀರಾ? ಇನ್ನೂ ಎಷ್ಟೋ ಪ್ರಶ್ನೆಗಳಿವೆ. ಎಲ್ಲಾ ಕೇಳಲಾರೆವು ಆದರೆ ಎಲ್ಲವುಗಳಿಗೂ ಉತ್ತರ ಬರುವಹಾಗೆ ನೀವೇ ಹೇಳಿರಿ?**

**ಉತ್ತರ :–** 'ದೇವರ ಜ್ಞಾನ ದೇವರಿಗೆ ಹೊರತು ಯಾವ ಇತರ ಮಾನವನಿಗೂ ತಿಳಿದಿಲ್ಲ' ಎನ್ನುವ ಖುರ್‌ಆನ್ ವಾಕ್ಯದ ಪ್ರಕಾರ ಎಷ್ಟು ದೊಡ್ಡ ಜ್ಞಾನವನ್ನಾದರೂ ಅದು ದೇವರು ಹೇಳಿದರೇನೆ ತಿಳಿಯುತ್ತದೆ. 'ಪ್ರತಿ ಮಾತು ನೀನು ಮಾತನಾಡಲಿಲ್ಲ. ನಿನ್ನ ತಂದೆಯಾದ ದೇವರೇ ಮಾತನಾಡುತ್ತಿದ್ದಾನೆ' ಎನ್ನುವ ಬೈಬಲ್ ವಾಕ್ಯದ ಪ್ರಕಾರ ಯಾವ ಜ್ಞಾನ ವಾಕ್ಯವಾದರೂ ನಾನು ಹೇಳಲಿಲ್ಲ. ದೇವರೇ ನನ್ನಿಂದ ಹೇಳಿಸುತ್ತಿದ್ದಾನೆಂದು ಅಂದುಕೊಳ್ಳುತ್ತಿದ್ದೇನೆ. ದೇವರು ಪ್ರತ್ಯಕ್ಷವಾಗಿ ಯಾವ ಕೆಲಸವನ್ನು ಮಾಡುವುದಿಲ್ಲ, ಪ್ರತ್ಯಕ್ಷವಾಗಿ ಯಾರೊಂದಿಗೂ ಮಾತನಾಡುವುದಿಲ್ಲ. ದೇವರು ಕೆಲಸಮಾಡುವವನಲ್ಲ, ಹಾಗೆಯೇ ಮಾತನಾಡುವವನೂ ಅಲ್ಲ. ಹಾಗಿರುವಾಗ ಮನುಷ್ಯರಿಗೆ ತಿಳಿಯದ ಜ್ಞಾನವನ್ನು ದೇವರೇ ಹೇಳಬೇಕೆನ್ನುವ ಸೂತ್ರವನ್ನು ಅನುಸರಿಸಿ ನೋಡಿದರೆ ದೇವರು ಒಬ್ಬ ಮನುಷ್ಯನಿಂದ ಮಾತನಾಡಿ ತನ್ನ ಜ್ಞಾನವನ್ನು ತಿಳಿಸುವನು. ಅದರಿಂದ ದೇವರು ನೇರವಾಗಿ ಯರೊಂದಿಗೂ ಮಾತನಾಡುವುದಿಲ್ಲ. ಆದರೂ, ಆತನು ಜ್ಞಾನ ಹೇಳಿದರೇನೆ ಅದು ಮನುಷ್ಯನಿಗೆ ತಿಳಿಯುತ್ತದೆ. ದೇವರು ಯಾವರೀತಿಯಾಗಿ ಮನುಷ್ಯರಿಗೆ ಜ್ಞಾನವನ್ನು ಹೇಳುವನು ಎನ್ನುವ ವಿಷಯ ಯಾರಿಗೂ ನಿರ್ಧಾರಣವಾಗಿ ತಿಳಿದಿಲ್ಲ.

**"ದೇವರು (ಅಲ್ಲಾಹ್) ನೇರವಾಗಿ ಯಾರೊಂದಿಗೂ ಮಾತನಾಡುವುದಿಲ್ಲ"** ಎಂದು (42–51) ರಲ್ಲಿ ಒಂದು ಕಡೆ ಹೇಳಿ 4–164 ರಲ್ಲಿ **"ಅಲ್ಲಾಹ್ ಮೂಸಾಯೊಂದಿಗೆ ನೇರವಾಗಿ ಮಾತನಾಡಿದ್ದಾನೆ"** ಎಂದು ಇದೆ. ಅದು ಹೇಗೆ ಸಾಧ್ಯ? ಎಂದು ಯೋಚಿಸಿದರೆ ಅದಕ್ಕೆ ಸುಲಭವಾಗಿ

ಉತ್ತರ ಸಿಗುವುದಿಲ್ಲ. ಅಲ್ಲಾಹ್ ಈ ಎರಡು ಆಯತ್‌ಗಳಲ್ಲಿ ಹೇಳಿದ ವಾಕ್ಯಗಳು ಪೂರ್ತಿ ಸತ್ಯವೇಯೆಂದು ನಾನು ಹೇಳಬಲ್ಲೆನು. ಈ ವಿವರಗಳೆಲ್ಲವೂ ಖುರ್‌ಆನ್ ನಮ್ಮ ಗ್ರಂಥವೆಂದು ಹೇಳಿಕೊಳ್ಳುವ ಮುಸ್ಲಿಮ್‌ರಿಗೆ ತಿಳಿಯದೆಂದೇ ಹೇಳಬಹುದು. ದೇವರಿಗೆ ಇಷ್ಟವಾದರೆ ಯಾರೊಂದಿಗಾದರೂ ಮಾತನಾಡಿ ತನ್ನ ಜ್ಞಾನವನ್ನು ತಿಳಿಸಬಲ್ಲನು. ಯಾವುದೋ ಒಂದು ವಿಧವಾಗಿ ಅಲ್ಲಾಹ್ (ದೇವರು) ಮೂರು ಗ್ರಂಥಗಳ ಜ್ಞಾನ ನನಗೆ ತಿಳಿಸಿದ್ದಾನೆ ಆದ್ದರಿಂದ ನನ್ನ ಬುದ್ಧಿಗೆ ದೇವರು ತಿಳಿಸಿದ ಜ್ಞಾನ ವಿವರವನ್ನು ಹೇಳುತ್ತಿದ್ದೇನೆ. **ಎಲ್ಲಿಯಾದರೂ ಯಾರ ಮತವನ್ನು ಕುರಿತು ಅವರು ಹೇಳಿಕೊಳ್ಳುವುದು ನೀವು ನೋಡಿರುತ್ತೀರಾ. ಆದರೆ ಒಬ್ಬ ಮನುಷ್ಯ ಮೂರು ಮತದವರು ನಮ್ಮ ಗ್ರಂಥಗಳೆಂದು ಹೇಳಿಕೊಳ್ಳುವ ಮೂರು ಗ್ರಂಥಗಳಲ್ಲಿನ ಜ್ಞಾನವನ್ನು ಹೇಳುವುದನ್ನು ನೋಡಿದ್ದೀರಾ?** ಒಂದುವೇಳೆ ಹಾಗೆ ಯಾರಾದರೂ ಹೇಳಿದರೆ ಮೂರು ಗ್ರಂಥಗಳಿಗೆ ಸಮನ್ವಯ ಇರುವುದಿಲ್ಲ. ಯಾರು ಹೇಳಿದರೂ ಅವರ ಮತ ಸಂಪ್ರದಾಯಗಳಿಗೆ ಅನುಗುಣವಾಗಿ ಜ್ಞಾನ ಹೇಳುವುದು ಇದೆ. ಮುಸ್ಲಿಮ್‌ರ ಗುರುಗಳು ಹಿಂದೂ ಜ್ಞಾನವನ್ನು ಹೇಳಿದರೆ "ದೇವರು ಹುಟ್ಟುವುದಿಲ್ಲ" ಎಂದು ಹೇಳುವರು. ಕ್ರೈಸ್ತರ ಜ್ಞಾನವನ್ನು ಹೇಳಿದರೆ "ಯೇಸು ಮರಣಿಸಿ ಪುನಃ ಏಳಲಿಲ್ಲ" ಎಂದು ಹೇಳುತ್ತಿರುವರು. "ಯೇಸುವನ್ನು ಶಿಲುಬೆಗೆ ಹಾಕಲಿಲ್ಲ" ಎಂದು ಹೇಳುತ್ತಿರುವರು. ಈ ವಿಧವಾಗಿ ಮೂರು ಮತಗಳ ಸಮನ್ವಯ ಇಲ್ಲದೆ ಯಾರ ದಾರಿಯಲ್ಲಿ ಅವರು ಹೋಗುತ್ತಿರುವರು.

ನಮ್ಮ ಹತ್ತಿರ ಹಾಗೆ ನಡೆಯಲಿಲ್ಲ. ಪ್ರತಿ ದೈವ ಗ್ರಂಥದಲ್ಲಿನ ಪ್ರತಿ ವಾಕ್ಯ ಸತ್ಯವಾದುದೇ ಎಂದು ಹೇಳುತ್ತಿದ್ದೇವೆ. ಎಲ್ಲರಿಗೂ ಸೂಕ್ಷ್ಮ ಜ್ಞಾನ ಅರ್ಥವಾಗದಿರುವುದರಿಂದ ಒಂದು ಕಡೆ ಮಾತನಾಡುವುದಿಲ್ಲ ಎಂದಿರುವುದು, ಮತ್ತೊಂದು ಕಡೆ ಮಾತನಾಡಿದ್ದಾನೆಂದು ಹೇಳಿರುವುದು ಅರ್ಥವಾಗದೆ ಒಂದಕ್ಕೊಂದು ವಿರುದ್ಧವಾಗಿ ಕಾಣಿಸುತ್ತಿದೆ. ನಮಗೆ ಸೂಕ್ಷ್ಮಜ್ಞಾನ ಅರ್ಥವಾಗಿರುವುದರಿಂದ ಎರಡು ಆಯತ್‌ಗಳಲ್ಲಿನ ಮಾತುಗಳು ಸತ್ಯವೇ ಎಂದು ಹೇಳುತ್ತಿದ್ದೇವೆ. ವಿರುದ್ಧವಾಗಿ ಕಾಣಿಸುವ ವಾಕ್ಯಗಳಿಗೂ ಸಹ ಸರಿಯಾದ ಭಾವವನ್ನು

ತಿಳಿಸಿದವನು ಅಲ್ಲಾಹ್‌ನೇ ಎಂದು ನಾನು ಹೇಳುತ್ತಿದ್ದೇನೆ. ಇಲ್ಲಿಗೆ ಒಂದು ವರ್ಷದ ಕೆಳಗೆ ಬರೆದ **"ಕೃಷ್ಣ ಮೂಸ"** ಎನ್ನುವ ಗ್ರಂಥದಲ್ಲಿ ಅಲ್ಲಾಹ್ ಹೇಗೆ ಮೂಸಾಯೊಂದಿಗೆ ಮಾತನಾಡಿದ್ದಾನೋ ಹೇಳಿದ್ದೇವೆ. ವಾಸ್ತವವಾಗಿ ಆ ದಿನ ಖುರ್‌ಆನ್‌ನಲ್ಲಿರುವ 4–164 ನೆ ಆಯತ್‌ನ್ನು ನಾನು ನೋಡಿರಲಿಲ್ಲ. "ಕೃಷ್ಣ ಮೂಸ"ಕ್ಕಿಂತ ಮೊದಲು ಬರೆದಿರುವ **"ಅಂತಿಮ ದೈವ ಗ್ರಂಥದಲ್ಲಿ ಜ್ಞಾನ ವಾಕ್ಯಗಳು"** ಎನ್ನುವ 700 ಪುಟಗಳ ಗ್ರಂಥದಲ್ಲಿ (42–51) ಆಯತ್ ಪ್ರಕಾರ "ದೇವರು ನೇರವಾಗಿ ಯಾರೊಂದಿಗೂ ಮಾತನಾಡುವುದಿಲ್ಲ" ಎಂದು ಬರೆದಿದ್ದೇನೆ. ನಂತರ "ಕೃಷ್ಣ ಮೂಸ" ಎಂದು ನಾನು ಸ್ವತಃವಾಗಿ ಬರೆದ ಗ್ರಂಥದಲ್ಲಿ "ದೇವರು ಮೂಸಾ (ಮೋಷೇ) ಪ್ರವಕ್ತನೊಂದಿಗೆ ಮಾತನಾಡಿದ್ದಾನೆ." ಎಂದು ಹೇಳಿದ್ದೇವೆ. ಇಲ್ಲಿ ಮಾತನಾಡಿದ್ದಾನೆ ಎಂದು ಹೇಳಿದರೂ, ಅಲ್ಲಿ ಮಾತನಾಡಲಿಲ್ಲವೆಂದು ಹೇಳಿದರೂ ಎರಡೂ ಪೂರ್ತಿ ಸತ್ಯವೆಂದು ನನಗೆ ತಿಳಿದಿದೆ. ಈ ಮಾತುಗಳನ್ನು ಕೇಳುವ ಕೆಲವರಿಗೆ ಆಶ್ಚರ್ಯವಾಗಿ ಇರಬಹುದು. ವಿರುದ್ಧವಾಗಿ ಕಾಣಿಸುವ ಎರಡು ವಾಕ್ಯಗಳು ಹೇಗೆ ಸತ್ಯವಾಗುತ್ತವೆಂದು ಅಂದುಕೊಳ್ಳಬಹುದು. ಅದಕ್ಕೆ ನಾನು ಹೇಳುವ ಸಮಾಧಾನವೇನೆಂದರೆ! ನನಗೆ ತಿಳಿದಿರುವುದು ನಿಮಗೆ ತಿಳಿದಿಲ್ಲವೆಂದು ಹೇಳಬಲ್ಲೆನು. ನಿಮಗೆ ತಿಳಿಯದ ಎಷ್ಟೋ ವಿಷಯಗಳು ನನಗೆ ತಿಳಿದಿವೆ ಆದ್ದರಿಂದ ಸೂಕ್ಷ್ಮ ವಾಕ್ಯಗಳಿಗೆಲ್ಲಾ ವಿವರವನ್ನು ಬರೆದಿದ್ದೇನೆ. ಬಹಳ ಜನ ಮುಸ್ಲಿಮ್‌ರಿಗೆ ಖುರಾನ್ ಗ್ರಂಥದಲ್ಲಿರುವ ಸೂಕ್ಷ್ಮ ವಾಕ್ಯಗಳೇನೋ ತಿಳಿದಿಲ್ಲ. ಹಾಗೆಯೇ ಉಳಿದ ಹಿಂದೂ, ಕ್ರೈಸ್ತವ ಸಮಾಜಗಳಲ್ಲಿ ಸಹ ಭಗವದ್ಗೀತೆ, ಬೈಬಲ್ ಗ್ರಂಥಗಳಲ್ಲಿನ ಸೂಕ್ಷ್ಮವಾಕ್ಯಗಳು ಯಾವುವೋ ಅವರಿಗೆ ತಿಳಿದಿಲ್ಲ. ಆದ್ದರಿಂದ ಪ್ರತಿ ವಾಕ್ಯಕ್ಕೂ ಸ್ಥೂಲವಾಗಿ ವಿವರನ್ನು ಹೇಳಿಕೊಂಡು ತಪ್ಪುದಾರಿ ಹಿಡಿದು ಹೋಗುತ್ತಿದ್ದಾರೆ. ಆದ್ದರಿಂದ ದೈವ ಗ್ರಂಥಗಳಲ್ಲಿನ ಸತ್ಯಸಮೇತವಾದ ಜ್ಞಾನ ತಿಳಿಯದಂತೆ ಹೋಗಿದೆ. ಎರಡು ವಿಧಗಳ ಅರ್ಥವನ್ನು ಕೊಡುವ ಅನೇಕ ವಾಕ್ಯಗಳ ಹತ್ತಿರ ಯಾವುದು ಸತ್ಯವೋ, ಯಾವುದು ಅಸತ್ಯವೋ ತಿಳಿಯದೆ ಗೊಂದಲಕ್ಕೊಳಗಾಗಿ ಅಯೋಮಯ ಸ್ಥಿತಿಯಲ್ಲಿ ಸತ್ಯವನ್ನು ತಿಳಿಯಲಾರದೆ ಹೋಗುತ್ತಿದ್ದಾರೆ. ಅಂತಹವರೆಲ್ಲರಿಗೂ

ಮಾರ್ಗದರ್ಶಕತೆ ಬೇಕೆಂದರೆ ನಾನು ಬರೆದ ವಿವರವನ್ನು ತಪ್ಪದೆ ಓದಬೇಕಾಗಿದ್ದೇ. ಏಕೆಂದರೆ! ಅಲ್ಲಾಹ್ (ದೇವರು) ನನ್ನ ಬುದ್ಧಿಗೆ ಇದೇ ಸತ್ಯವೆಂದು ಸಂಪೂರ್ಣವಾಗಿ ತಿಳಿಸಿದ್ದಾನಾದ್ದರಿಂದ ನನ್ನ ಮಾತು ಸತ್ಯವೆಂದು, ನನ್ನ ಬರಹ ಸತ್ಯವೆಂದು ಧೈರ್ಯವಾಗಿ ಹೇಳುತ್ತಿದ್ದೇನೆ.

**ಪ್ರಶ್ನೆ :– ನೀವು ನಿಮ್ಮ ಧೈರ್ಯದಿಂದ ನನ್ನ ಮಾತು ಸತ್ಯವೇಯೆಂದು ಹೇಳಿದರೂ ಕೆಲವರು ಮುಸ್ಲಿಮ್‌ರು ನಿಮ್ಮ ಮಾತನ್ನು ವಿರೋಧಿಸುತ್ತಾ, ಅಸತ್ಯವೆಂದು ಅನ್ನುತ್ತಿದ್ದಾರೆ. ನಿಮಗೆ ಸತ್ಯವಾದುದು ಅವರಿಗೆ ಏಕೆ ಅಸತ್ಯವಾಗಿ ಕಾಣಿಸಿದೆ?**

**ಉತ್ತರ :–** ಅವರಿಗೆ ಸತ್ಯ ತಿಳಿಯುವುದು ದೇವರಿಗೆ ಇಷ್ಟವಿಲ್ಲ. ಆದ್ದರಿಂದ ಅವರಿಗೆ ಸತ್ಯವು ಸಹ ಅಸತ್ಯವಾಗಿ ಕಾಣುವಂತೆ ದೇವರು ಮಾಡಿದ್ದಾನೆ. ಈ ವಿಷಯವಾಗಿ ಖುರ್‌ಆನ್ ಗ್ರಂಥದಲ್ಲಿ ಅನೇಕ ಕಡೆ ಹೇಳುವುದಾಗಿದೆ. ಉದಾಹರಣೆಗೆ ಸೂರಾ 6, ಆಯತ್ 110, 111ರಲ್ಲಿ ಹೀಗೆ ಇದೆ ನೋಡಿರಿ.

**(6–110) "ಅವರು ಮೊದಲನೆಯಬಾರಿ ಇದನ್ನು ಹೇಗೆ ವಿಶ್ವಾಸಿಸಲಿಲ್ಲವೋ ಅದೇ ರೀತಿ ಅವರ ಹೃದಯಗಳನ್ನು ಮತ್ತು ಅವರ ಕಣ್ಣುಗಳನ್ನು ತಿರುಗಿಸಿ ಹಾಕುತ್ತೇವೆ. ಇನ್ನೂ ನಾವು ಅವರನ್ನು ಅವರ ಉದ್ದಟತನದಲ್ಲಿಯೇ ಅಂಧರಾಗಿ ತಿರುಗುವುದಕ್ಕೆ ಬಿಟ್ಟು ಹಾಕುತ್ತೇವೆ".**

**(6–111) "ಒಂದು ವೇಳೆ ನಾವು ಅವರ ಕಡೆಗೆ ದೈವದೂತರನ್ನು ಕಳುಹಿಸಿದರೂ, ಮತ್ತು ಮರಣಿಸಿದವರು ಅವರೊಂದಿಗೆ ಮಾತನಾಡಿದರೂ, ಪ್ರತಿ ವಸ್ತುವನ್ನೂ ಅವರ ಕಣ್ಣ ಮುಂದೆ ಸಮೀಕರಿಸಿದರೂ, ಅಲ್ಲಾಹ್ ಸಂಕಲ್ಪವಿಲ್ಲದೆ ಅವರು ವಿಶ್ವಾಸಿಸುವವರಲ್ಲ. ಏಕೆಂದರೆ! ವಾಸ್ತವಕ್ಕೆ ಅವರಲ್ಲಿ ಅನೇಕರು ಅಜ್ಞಾನಿಗಳಾದ್ದಾರೆ".**

ಇಲ್ಲಿ ಆರನೇ ಸೂರಾದಲ್ಲಿ ಹೇಳಲ್ಪಟ್ಟಿರುವ ವಾಕ್ಯಗಳನ್ನು ನೋಡಿದ ನಂತರ ಅಲ್ಲಾಹ್‌ಗೆ ಇಷ್ಟವಿಲ್ಲದವರನ್ನು ಅಜ್ಞಾನಿಗಳನ್ನಾಗಿ ಇರಿಸುತ್ತಾಂದು ತಿಳಿಯುತ್ತಿದೆ. ನಾವು ಜ್ಞಾನಿಗಳು ಎಲ್ಲರಿಗಿಂತ ಚೆನ್ನಾಗಿ ತಿಳಿದವರು, ನಾವು ಮತ ಹಿರಿಯರು, ನಮ್ಮ ಮಾತೇ ಎಲ್ಲರೂ ಕೇಳುತ್ತಾರೆ ಎನ್ನುವ ಉದ್ದಟತನದಿಂದ

ಒಂದು ಕಡೆ ಅವರಿಗೆ ತಿಳಿಯದ ಜ್ಞಾನ ತಿಳಿಯುತ್ತಿದ್ದರೂ ಲೆಕ್ಕಿಸದೆ ಅಹಂನಿಂದ ಉದ್ದಟತನದಿಂದ ಇರುವವರು ದೇವರಿಗೆ ಇಷ್ಟವಿಲ್ಲದವರಾಗಿ ಇರುತ್ತಾರೆ. ಆದ್ದರಿಂದ ನಾವು ಹೇಳುವ ಜ್ಞಾನ ಕೆಲವರಿಗೆ ಅರ್ಥವಾದರೂ, ದೇವರಿಗೆ ಅಯಿಷ್ಟರಾದವರಿಗೆ ಅರ್ಥವಾಗದೆ ಅಸತ್ಯಜ್ಞಾನವಾಗಿ ಕಾಣಿಸುತ್ತಿರುತ್ತದೆ. ಉದಾಹರಣೆಯಾಗಿ ಹೇಳಿಕೊಂಡರೆ ನಾನು ಬರೆದ ಗ್ರಂಥವನ್ನು ಓದಿದವರು ನಮಗೆ ಸುಮಾರು 200 ಮೈಲುಗಳ ದೂರದಲ್ಲಿರುವ ಪೋರುಮಾಮಿಳ್ಳ ಗ್ರಾಮದಲ್ಲಿದ್ದು "ಹಿಂದೂವಾಗಿದ್ದ ವ್ಯಕ್ತಿ ಖುರಾನ್ ವಾಕ್ಯಗಳಿಗೆ ಇಷ್ಟು ಚೆನ್ನಾಗಿ ವಿವರವನ್ನು ಬರೆಯುವುದು ಬಹಳ ದೊಡ್ಡವಿಷಯವೆಂದು" ಮುಸ್ಲಿಮ್ ಗುರುಗಳೇ ಮೆಚ್ಚಿಕೊಂಡಾಗ ಇಲ್ಲಿ ನಮಗೆ ಸಮೀಪದಲ್ಲಿರುವ ಮುಸ್ಲಿಮ್‌ರಿಗೆ ಕೆಲವರಿಗೆ ನಾವು ಖುರ್‌ಆನ್ ವ್ಯಾಕ್ಯಗಳಿಗೆ ವಿವರವನ್ನು ತಪ್ಪಾಗಿ ಬರೆದಿದ್ದೇವೆಂದು ಕಾಣಿಸುವುದು ಅವರಿಗೆ ನಮ್ಮ ಬರಹದಲ್ಲಿರುವ ಸತ್ಯ ತಿಳಿದಿಲ್ಲವೆಂದೇ ತಿಳಿಯುತ್ತಿದೆ. ಎಷ್ಟೋ ದೂರದಲ್ಲಿರುವ ಮುಸ್ಲಿಮ್ ಗುರುಗಳು ನನ್ನನ್ನು ಹೊಗಳುವುದು, ಹತ್ತಿರವಾಗಿರುವವರು ನನ್ನನ್ನು ತಪ್ಪು ಹಿಡಿಯುವುದು ನೋಡಿದರೆ ಖುರ್‌ಆನ್ ವಾಕ್ಯದ ಪ್ರಕಾರ ದೇವರಿಗೆ ಇಷ್ಟವಿಲ್ಲದವರಿಗೆ ಸತ್ಯ ಸಮೇತವಾದ ನನ್ನ ಜ್ಞಾನ ಅರ್ಥವಾಗಲಿಲ್ಲವೆಂದು ಹೇಳಬಹುದು. ಅರ್ಥವಾಗದವರು ನಾನು ತಪ್ಪು ಬರೆದಂತೆ ಖುರ್‌ಆನ್ ವಾಕ್ಯಗಳನ್ನು ಹೀಯಾಳಿಸುವಂತೆ ವರ್ಣಿಸಿ ಹೇಳಿದ್ದಾರೆ. ಹಾಗೆ ಮತದ್ವೇಷದಿಂದ ಹೇಳುವವನೇ ಆಗಿದ್ದರೆ, ಖುರ್‌ಆನ್‌ನನ್ನು ದೈವ ಗ್ರಂಥವೆಂದು ಹೇಳುತ್ತಿರಲಿಲ್ಲ ಅಲ್ಲವೆ! ಅಷ್ಟೇ ಅಲ್ಲದೆ ಖುರ್‌ಆನ್ ವಾಕ್ಯಗಳನ್ನು ವಜ್ರ ವಾಕ್ಯಗಳೆಂದು ಹೊಗಳಿ ಹೇಳುತ್ತಿರಲಿಲ್ಲ ಅಲ್ಲವೆ! ಅವರು ಹಾಗೆ ನನ್ನನ್ನು ಆರೋಪಿಸುತ್ತಿದ್ದಾರೆಂದರೆ ಅವರನ್ನು ಕುರುಡರಂತೆ, ಕಿವುಡರಂತೆ ದೇವರು ತೀರ್ಪು ತೀರಿಸಿದ್ದಾನೆಂದು ಅರ್ಥವಾಗುತ್ತಿದೆ.

**ಪ್ರಶ್ನೆ :– ಕೆಲವರು ಮುಸ್ಲಿಮ್‌ರು ನೀವು ಬರೆದ ವಿವರಗಳನ್ನು ತಪ್ಪು ಹಿಡಿಯುತ್ತಿದ್ದಾರೆ. ಅವರು ಹೀಗೆ ಅನ್ನುತ್ತಿದ್ದಾರೆ. "ನಾವು ಖುರ್‌ಆನ್ ಗ್ರಂಥ ಪಂಡಿತರಾಗಿ ಖುರ್‌ಆನ್‌ನಲ್ಲಿನ ಪ್ರತಿ ಅಕ್ಷರವೂ, ಪ್ರತಿ ಪದವನ್ನು ಕುರಿತು**

**ಸಂಪೂರ್ಣ ಜ್ಞಾನ ತಿಳಿದಿದ್ದೇವೆ. ಪ್ರಬೋಧಾನಂದರು ಮಾಡಿದ ಅಸತ್ಯ ವ್ಯಾಖ್ಯಾನಗಳಿಂದ ನಮ್ಮ ಮನೋಭಾವನೆಗಳಿಗೆ ಆತಂಕವಾಗಿದೆ" ಎಂದು ಅನ್ನುತ್ತಿದ್ದಾರೆ. ಅದಕ್ಕೆ ನೀವೇನು ಹೇಳುತ್ತೀರಾ?**

**ಉತ್ತರ :–** "ನಾವು ಖುರ್‌ಆನ್ ಪಂಡಿತರೆಂದು ಖುರ್‌ಆನ್‌ನಲ್ಲಿನ ಪ್ರತೀ ಅಕ್ಷರ, ಪ್ರತೀ ಪದವನ್ನು ಕುರಿತು ಸಂಪೂರ್ಣ ಜ್ಞಾನ ಹೊಂದಿದ್ದೇವೆ" ಎಂದು ಹೇಳುವುದು ಅಹಂಕಾರವಲ್ಲವೆ! ಉದ್ದಟತನವಲ್ಲವೆ! ವಾಸ್ತವವಾಗಿ ಯಾವ ದೈವ ಗ್ರಂಥವನ್ನು ಕುರಿತು ಸಂಪೂರ್ಣವಾಗಿ ತಿಳಿದವನು ಯಾರೂ ಇಲ್ಲವೆಂದು ಹೇಳಬಹುದು. ಒಂದುವೇಳೆ ಹಾಗೆ ಸಂಪೂರ್ಣವಾಗಿ ತಿಳಿದಿದ್ದರೇ ಅವನು ಭೂಮಿಮೇಲೆ ಮನುಷ್ಯನಾಗಿ ಇರದೆ ನೇರವಾಗಿ ಅಲ್ಲಾಹ್ (ದೇವರ) ಸಾಂಗತ್ಯದಲ್ಲಿ ಸೇರಿಹೋಗುವನು. ಅಂದರೆ ಆತನಿಗೆ ಪರಲೋಕ ಪ್ರಾಪ್ತಿ ಉಂಟಾಗುತ್ತದೆ. ಒಂದುವೇಳೆ ಮಾತಿನ ವರಸೆಗೆ ಹಾಗೆ ಹೇಳಿದರೂ ಖುರ್‌ಆನ್ ಗ್ರಂಥದಲ್ಲಿ ಇಲ್ಲಿಯವರೆಗೂ ಮನುಷ್ಯರಿಗೆ ತಿಳಿಯದ ಭಾವನೆಗಳು ಇವೆ. (6–95) ಆಯತ್‌ಗಳಂತಹ ವಾಕ್ಯಗಳಿಗೆ ಯಾವ ಸೈಂಟಿಸ್ಟಾಗಲಿ, ಯಾವ ಪರಿಶೋಧಕ ನಾಗಲೀ ಹತ್ತು ಸಾವಿರ ವರ್ಷಗಳಿಗೆ ಸಹ ನಿಜ ಭಾವವನ್ನು ಹೇಳಲಾರನು. ಅಷ್ಟೇ ಏಕೆ ಖುರ್‌ಆನ್ ಪಂಡಿತರು ಸೂಕ್ಷ್ಮ ವಾಕ್ಯಗಳನ್ನು ಬಿಟ್ಟು ಸ್ಥೂಲವಾಗಿ ಅರ್ಥವನ್ನು ಹೇಳಿಕೊಳ್ಳುತ್ತಿದ್ದಾರೆ. ಸೂಕ್ಷ್ಮವಾಕ್ಯಗಳಿಗೆ ಅಲ್ಲಾಹ್‌ನೇ ವಿವರ ಹೇಳಬೇಕೇ ಹೊರತು ಮನುಷ್ಯರು ಹೇಳಲಾರರೆಂದು ಅವರೇ ಬರೆದಿಟ್ಟಿರುವಾಗ ಎಲ್ಲಾ ನನಗೆ ತಿಳಿದಿದೆ ಎಂದು ಅನ್ನುವುದು ತಪ್ಪಲ್ಲವೆ! ಖುರ್‌ಆನ್‌ನಲ್ಲಿ ಪ್ರತಿ ಅಕ್ಷರ, ಪ್ರತಿ ಪದವನ್ನು ಕುರಿತು ಸಂಪೂರ್ಣವಾಗಿ ತಿಳಿದಿದೆಯೆನ್ನುವವರು (42–51) ರಲ್ಲಿ **'ಅಲ್ಲಾಹ್ ನೇರವಾಗಿ ಯಾರೊಂದಿಗೂ ಮಾತನಾಡುವುದಿಲ್ಲ'** ಎಂದು ಇರುವುದು ತಿಳಿದೇ ಇರುತ್ತದೆ. ಅದಕ್ಕಿಂತ ಮೊದಲು (4–164) ರಲ್ಲಿ **'ಅಲ್ಲಾಹ್ ಮೂಸಾಯೊಂದಿಗೆ ನೇರವಾಗಿ ಮಾತನಾಡಿದ್ದಾನೆ'** ಎಂದು ಇರುವಾಗ ಯಾವುದನ್ನಾದರೂ ಅಸತ್ಯ ಎಂದರೇ ಖುರ್‌ಆನ್ ವಾಕ್ಯವನ್ನು ತಪ್ಪು ಹಿಡಿದಂತಾಗುತ್ತದೆ. ಎರಡು ವಾಕ್ಯಗಳು

ಸತ್ಯವೆಂದರೇ ಅಲ್ಲಾಹ್ ಎರಡು ವಿಧಗಳಲ್ಲಿ ಮಾತನಾಡಿದಂತಾಗುತ್ತದೆ. ಅಲ್ಲಾಹ್ ಎಂದಿಗೂ ಸತ್ಯಸಮೇತ ವಾಗಿಯೇ ವಾಕ್ಯವನ್ನು ಹೇಳುವನು ಹೊರತು ಒಂದುಕಡೆ ಸತ್ಯ, ಒಂದುಕಡೆ ಅಸತ್ಯ ಹೇಳುವುದಿಲ್ಲ. ಹಾಗಿರುವಾಗ ಯಾರಾದರೂ, ಯಾವ ಮತದಲ್ಲಿನ ವ್ಯಕ್ತಿಯಾದರೂ ವಿವರವಾಗಿ ಉತ್ತರ ಹೇಳಬಲ್ಲನಾ? ಪ್ರತಿ ಪದ, ಪ್ರತಿ ಅಕ್ಷರ ತಿಳಿದಿದೆಯೆನ್ನುವವರು ವಾಸ್ತವವನ್ನು ಹೇಳಬಲ್ಲಿರಾ? ಎಂದು ಪ್ರಶ್ನಿಸುತ್ತಿದ್ದೇನೆ.

**"ಅಲ್ಲಾಹ್ ಯಾವ ಕೆಲಸವನ್ನು ಮಾಡುವುದಿಲ್ಲ, ಆತನು ಸಂಕಲ್ಪಿಸಿಕೊಂಡರೇ ಎಲ್ಲ ಕೆಲಸಗಳು ನಡೆದು ಹೋಗುತ್ತವೆ"** ಎಂದು (2–117) ರಲ್ಲಿ ಇದೆಯಲ್ಲವೆ! ಅದರಿಂದ ದೇವರು ಕಾರ್ಯಗಳು ಮಾಡುವ ಕಾರ್ಯಕರ್ತ ಅಲ್ಲಯೆಂದು ದೇವರು ಏನಾದರೂ ಮಾಡಬೇಕೆಂದುಕೊಂಡಾಗ ಆತನು ಮಾಡದೇನೆ ಆ ಕೆಲಸಗಳು ನಡೆದುಹೋಗುತ್ತಿವೆಯೆಂದು ತಿಳಿದುಹೋಗುತ್ತಿದೆ. ನಂತರ (6–102) ಆಯತ್‌ನಲ್ಲಿ **"ಆತನೇ (ಅಲ್ಲಾಹ್‌ನೇ) ನಿಮ್ಮ ಆರಾಧ್ಯ ದೈವ. ಆತನು ಹೊರತು ಬೇರೆ ಆರಾಧ್ಯ ದೈವವು ಇಲ್ಲ. ಆತನೇ (ಅಲ್ಲಾಹ್‌ನೇ) ಸರ್ವಕಾರ್ಯಗಳಿಗೂ ಕಾರ್ಯಕರ್ತನಾಗಿ ಇದ್ದಾನೆ"** ಎಂದು ಇದೆ. ಈ ವಾಕ್ಯದಲ್ಲಿ ದೇವರು ಕಾರ್ಯಕರ್ತನಾಗಿ ಕೂಡಾ ಇದ್ದಾನೆಂದು, ಪ್ರತಿ ಕಾರ್ಯವನ್ನು ಆತನೇ ಮಾಡುತ್ತಿದ್ದಾನೆಂದು ತಿಳಿಯುತ್ತಿದೆ. ಅಷ್ಟೇ ಅಲ್ಲದೆ **(2–255) ಆಯತ್‌ನಲ್ಲಿ "ದೇವರು ಅಹರ್ನಿಶೆಗಳು (ಯಾವಾಗಲೂ) ಕೆಲಸ ಮಾಡುತ್ತಿದ್ದಾನೆಂದು, ಆತನು ರಾತ್ರಿ ಹಗಲು ನಿದ್ರೆ ಕೂಡಾ ಇಲ್ಲದಂತೆ ಕೆಲಸ ಮಾಡುತ್ತಿದ್ದಾನೆಂದು, ಆತನು ಎಷ್ಟು ಕಾರ್ಯಗಳು ಮಾಡಿದರೂ ದಣಿಯುವುದಿಲ್ಲ"** ಎಂದು ಹೇಳಿದ್ದಾರೆ. ದಣಿಯುವುದಿಲ್ಲ, ನಿದ್ರೆ, ತೂಗಡಿಕೆ ಸಹ ಇಲ್ಲದವನು ಎಂದು ಹೇಳಿದ್ದನ್ನನುಸರಿಸಿ ದೇವರು ಸ್ವತಃ ಕೆಲಸ ಮಾಡುತ್ತಿದ್ದಾನೆಂದು ಅರ್ಥವಾಗುತ್ತಿದೆ. ಇಲ್ಲಿ (2–117) ನ್ನು ಅನುಸರಿಸಿ ದೇವರು ಕೆಲಸ ಮಾಡುವುದಿಲ್ಲವೆಂದೂ, (2–255) ನ್ನು ಅನುಸರಿಸಿ ದೇವರು ಕೆಲಸ ಮಾಡುತ್ತಿದ್ದಾನೆಂದೂ ಎರಡು ವಿಧಗಳಲ್ಲಿ ಅರ್ಥವಾಗುತ್ತಿದೆ. ನಾವು ಖುರ್‌ಆನ್ ಗ್ರಂಥದಲ್ಲಿ ಪಂಡಿತರೆಂದು ಹೇಳುವವರು

ದೇವರು ಕೆಲಸ ಮಾಡುತ್ತಾನಾ? ಕೆಲಸವನ್ನು ಮಾಡುವುದಿಲ್ಲವಾ? ಎರಡು ವಿಧಾನಗಳಲ್ಲಿ ಯಾವುದು ಸತ್ಯವೋ ಯಾವುದು ಅಸತ್ಯವೋ ತೀರ್ಮಾನಿಸಿ ಹೇಳಬಲ್ಲಿರಾ? ಹೀಗೆ ಖುರ್‌ಆನ್ ಗ್ರಂಥದಲ್ಲಿ ಸಂದಿಗ್ಧದಲ್ಲಿ ಬೀಳಿಸುವ ಅನೇಕ ಜ್ಞಾನ ವಿಷಯಗಳು ಇವೆ. ಅವು ಅತ್ಯಂತ ಅದ್ಭುತವಾದ ಜ್ಞಾನವೆಂದು ಯಾರಾದರೂ ಒಪ್ಪಿಕೊಳ್ಳದೆ ತಪ್ಪುವುದಿಲ್ಲ. ಖುರ್‌ಆನ್ ಗ್ರಂಥ ದೈವ ಗ್ರಂಥ. ಅದನ್ನು ತಿಳಿದವನು ಉಳಿದ ಎರಡು ಗ್ರಂಥಗಳ ಸಾರಾಂಶ ತಿಳಿದಿರುತ್ತಾನೆ. ಉಳಿದ ಎರಡು ಗ್ರಂಥಗಳ ಸಾರಾಂಶವನ್ನು ತಿಳಿಯದಿರುವಾಗ ಆ ಎರಡು ಗ್ರಂಥಗಳೊಂದಿಗೆ ಸಂಬಂಧವಿರುವ ಖುರ್‌ಆನ್ ಗ್ರಂಥವನ್ನು ಸಹ ತಿಳಿಯದಂತೇ ಆಗುತ್ತದೆ. ನನಗೆ ಖುರ್‌ಆನ್ ಒಟ್ಟಾರೆ ತಿಳಿದಿದೆ ಎಂದರೆ ಉಳಿದ ಎರಡು ಗ್ರಂಥಗಳ ವಾಕ್ಯಗಳಿಗೆ ಕೂಡಾ ವಿವರ ತಿಳಿದಿರಬೇಕು. ಹಾಗೆ ತೌರಾತ್ ಇಂಜೀಲ್ ಗ್ರಂಥಗಳೊಳಗಿನ ವಾಕ್ಯಗಳಿಗೆ ವಿವರ ಹೇಳಬಲ್ಲಿರಾ? ಹಾಗೆ ತಿಳಿಯದೆ ಹೋದರೇ ಸೂರಾ 62, ಆಯತ್ 5 ರಲ್ಲಿ ಹೀಗೆ ಬರೆದಿದ್ದಾರೆ ನೋಡಿರಿ.

**(62–5) "ತೌರಾತ್ ಗ್ರಂಥದ ಪ್ರಕಾರ ಆಚರಿಸಬೇಕೆಂದು ಆದೇಶಿಸಿದರೂ ಅದಕ್ಕೆ ಅನುಗುಣವಾಗಿ ಆಚರಿಸದವರು ಎಷ್ಟು ಗ್ರಂಥಗಳನ್ನು ಅನುಸರಿಸಿದರೂ, ಅಂತಹವರನ್ನು ಎಷ್ಟೋ ಗ್ರಂಥಗಳನ್ನು ಬೆನ್ನಿನ ಮೇಲೆ ಹೊರುವ ಕತ್ತೆಯಂತ ಹವರೆಂದು ಉಪಮಾನವಾಗಿ ಹೇಳಬಹುದು. ದೇವರ ವಾಕ್ಯಗಳನ್ನು (ಉಳಿದ ಎರಡು ಗ್ರಂಥಗಳನ್ನು) ಧಿಕ್ಕರಿಸಿದವರ ದೃಷ್ಟಾಂತ ಬಹಳ ಕೆಟ್ಟದು. ದುರ್ಮಾರ್ಗದ ಜನರಿಗೆ ಅಲ್ಲಾಹ್ ಸನ್ಮಾರ್ಗವನ್ನು ತೋರಿಸುವುದಿಲ್ಲ."**

ಈ ವಿಧವಾಗಿ ಅಂತಿಮ ದೈವ ಗ್ರಂಥವಾದ ಖುರ್‌ಆನ್‌ನಲ್ಲಿ ಹೇಳಿದಾಗ ನನಗೆ ಖುರ್‌ಆನ್ ಗ್ರಂಥ ಸಂಪೂರ್ಣವಾಗಿ ತಿಳಿದಿದೆ ಎನ್ನುವವರು ಉಳಿದ ಎರಡು ಗ್ರಂಥಗಳನ್ನು ತಿಳಿದಿದ್ದಾರಾ? ಎಂದು ನಾವು ಕೇಳದೆ ತಪ್ಪುವುದಿಲ್ಲ. ಹಾಗೆ ಮೂರು ಗ್ರಂಥಗಳ ವಿಷಯಗಳನ್ನು ತಿಳಿದಾಗ ಭಗವದ್ಗೀತೆಯಲ್ಲಿ **"ದೇವರು ಮನುಷ್ಯನಾಗಿ ಅವತರಿಸುತ್ತಾನೆ"** ಎಂದು ಹೇಳಿದ ಶ್ಲೋಕವನ್ನು ಒಪ್ಪಿಕೊಳ್ಳುತ್ತಾರಾ? ವಾಸ್ತವವಾಗಿ ದೇವರು ಮನುಷ್ಯನಾಗಿ ಅವತರಿಸುತ್ತಾನೆ ಎಂದು ಯಾವ ಮುಸ್ಲಿಮ್

ಒಪ್ಪಿಕೊಳ್ಳುವುದಿಲ್ಲ. ಹಾಗೆಯೇ ಬೈಬಲ್ ಗ್ರಂಥದಲ್ಲಿ **"ಯೇಸು ದೇವರ ಕುಮಾರನು"** ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತಾರಾ? ಹಾಗೆ ಯಾವ ಮುಸ್ಲಿಮ್ ಸಹ ಒಪ್ಪಿಕೊಳ್ಳುವುದಿಲ್ಲ. ಅಂತಿಮ ದೈವ ಗ್ರಂಥವಾದ ಖುರ್‌ಆನ್‌ನಲ್ಲಿ **"ಮನುಷ್ಯನಿಗೆ ಪುನರ್ಜನ್ಮಗಳಿವೆ"** ಎಂದು ಹೇಳಿದ್ದಾರೆಂದರೂ ಸಹ ಒಪ್ಪಿಕೊಳ್ಳುವುದಿಲ್ಲ. ಮನುಷ್ಯ ಒಂದೇಬಾರಿ ಹುಟ್ಟಿ ಒಂದೇಬಾರಿ ಮರಣಿಸುವನೆಂದು ಹೇಳುತ್ತಿರುವರು. ಆದರೇ ಅವರ ಮಾತಿಗೆ ವಿರುದ್ಧವಾಗಿ ಖುರ್‌ಆನ್ ವಾಕ್ಯವಿದೆ ನೋಡಿರಿ.

**(7–29) "ಮೊದಲಬಾರಿ ನಿಮ್ಮನ್ನು ಅಲ್ಲಾಹ್ ಹೇಗೆ ಹುಟ್ಟಿಸಿದ್ದಾನೋ ಪುನಃ ಕೂಡಾ ನೀವು ಹಾಗೆಯೇ ಹುಟ್ಟಿಸಲ್ಪಡುತ್ತೀರ."**

**(53–46) "ಪ್ರವಹಿಸಲ್ಪಟ್ಟಿರುವ ವೀರ್ಯ ಬಿಂದುವಿನಿಂದ"**

**(53–47) "ಮತ್ತೊಂದು ಜೀವನವನ್ನು ಪ್ರಸಾದಿಸುವುದು ಆತನಿಗೇ (ಅಲ್ಲಾಹ್‌ಗೇ) ಸಲ್ಲುತ್ತದೆ."**

ಈ ವಾಕ್ಯಗಳನ್ನು ನೋಡಿದ ನಂತರ ಮನುಷ್ಯನಿಗೆ ಪುನರ್ಜನ್ಮ ಗಳಿವೆಯೆಂದು ಖುರ್‌ಆನ್ ಪಂಡಿತರೆಂದು ಹೇಳಿಕೊಳ್ಳುವವರು ಒಪ್ಪಿಕೊಳ್ಳುತ್ತಾರಾ? ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ! ಮುಸ್ಲಿಮ್ ಮತ ಸಂಪ್ರದಾಯಗಳ ಪ್ರಕಾರ ಮನುಷ್ಯ ಪುನಃ ಹುಟ್ಟುವುದಿಲ್ಲವೆಂದು ಹೇಳುತ್ತಿರುವರು. ಆದ್ದರಿಂದ ಮತದ ಹೆಸರು ಹೇಳಿಕೊಳ್ಳುವವರು ಮತ ಸಾಂಪ್ರದಾಯದ ಪ್ರಕಾರ ಹೇಳುತ್ತಿರುವರು ಆದರೆ, ಮತಕ್ಕೆ ಅತೀತವಾಗಿರುವ ಖುರ್‌ಆನ್ ವಾಕ್ಯದ ಪ್ರಕಾರ ಎಂದಿಗೂ ಹೇಳುವುದಿಲ್ಲ. ಯಾವ ಮುಸ್ಲಿಮ್ ಆದರೂ ಖುರ್‌ಆನ್ ವಾಕ್ಯದ ಪ್ರಕಾರ ನಡೆಯಬೇಕೆಂದು ನೋಡಿದರೂ, ಹೇಳಬೇಕೆಂದು ನೋಡಿದರೂ ಅವರ ಹಿರಿಯರು ಅವನನ್ನು ಮುಸ್ಲಿಮ್ ಅಲ್ಲವೆಂದು ಅನ್ನುತ್ತಾರೆ.

ಮನುಷ್ಯ ಮರಣಿಸಿ ಮತ್ತೆ ಹುಟ್ಟುತ್ತಾನೆಂದು ಭಗವದ್ಗೀತೆಯಲ್ಲಿ ಸಾಂಖ್ಯಯೋಗದಲ್ಲಿ 27ನೇ ಶ್ಲೋಕದಲ್ಲಿ ಹೇಳಿದ್ದಾರೆ.

**ಶ್ಲೋ॥ 27: ಜಾತಸ್ಯ ಹಿಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯಚ ।**

**ತಸ್ಮಾದ ಪರಿಹಾರ್ಯೇಽರ್ಥೇ ನ ತ್ವಂ ಶೋಚಿತು ಮರ್ಹಸಿ ॥**

ಹಾಗೆ **ಖುರ್‌ಆನ್ ಗ್ರಂಥದಲ್ಲಿ (7–29), (53–46), (53–47) ಆಯತ್‌ಗಳಲ್ಲಿ** ಮನುಷ್ಯನಿಗೆ ಮರುಜನ್ಮ ಕೂಡಾ ಇದೆಯೆಂದು ಹೇಳಿದ್ದಾರೆ. ಅದೇ ವಿಷಯವನ್ನೇ **ಬೈಬಲ್‌ನಲ್ಲಿ ಯೋಹಾನ ಸುವಾರ್ತೆ 15ನೇ ಅಧ್ಯಾಯದಲ್ಲಿ 27ನೇ ವಚನದಲ್ಲಿ** ಪುನರ್ಜನ್ಮ ವಿಷಯವಿದೆ. ದೈವ ಗ್ರಂಥಗಳಲ್ಲಿ ಮನುಷ್ಯನಿಗೆ ಪುನರ್ಜನ್ಮಗಳಿವೆ ಎಂದು ಹೇಳಿದ್ದರೆ ಮುಸ್ಲಿಮ್ ಆದವರು ಕೆಲವರು ಅವರ ಮತವನ್ನು ಅನುಸರಿಸಿ ಮನುಷ್ಯನಿಗೆ ಪುನರ್ಜನ್ಮಗಳು ಇಲ್ಲ ಎಂದು ಅನ್ನುತ್ತಿದ್ದಾರೆ. ಹಾಗೆ ಅವರು ಮೂರು ದೈವ ಗ್ರಂಥಗಳ ಮೇಲೆ ಅಸತ್ಯ ಪ್ರಚಾರ ಮಾಡುವುದರಿಂದ ದೈವಜ್ಞಾನಿಗಳಾದ ಎಷ್ಟೋಜನ ಅವರ ಮನೋಭಾವನೆಗಳು ಆತಂಕಕ್ಕೊಳಗಾಗಿವೆಯೆಂದು ಹೇಳುತ್ತಿದ್ದೇವೆ. ನಾವು ದೈವವನ್ನು ಕುರಿತು ಸತ್ಯ ಹೇಳಿದರೆ ಅವರ ಮನೋಭಾವನೆಗಳು ಆತಂಕಕ್ಕೊಳಗಾಗಿವೆಯೆಂದು ಅನ್ನುತ್ತಿದ್ದಾರೆ. ಹಾಗೆ ಅವರು ಹೇಳುವ ಅಸತ್ಯಗಳನ್ನು ನೋಡಿ ದೈವದ ಮೇಲೆ ನಂಬಿಕೆ ಹೋಗುವಂತಿದೆ ಆದ್ದರಿಂದ ನಮಗೂ ಸಹ ಮನೋಭಾವನೆಗಳಿವೆ, ನಮ್ಮ ಮನೋಭಾವನೆಗಳು ಕೂಡಾ ಆತಂಕಕ್ಕೊಳಗಾಗಿವೆಯೆಂದು ನಾವು ಹೇಳುತ್ತಿದ್ದೇವೆ. ಪುನರ್ಜನ್ಮಗಳ ವಿಷಯ ಬಹಳ ಸೂಕ್ಷ್ಮವಾಕ್ಯಗಳಾಗಿ ಬಹಳಕಡೆ ಖುರ್‌ಆನ್ ಗ್ರಂಥದಲ್ಲಿ ಬರೆದರೂ, ಸ್ಥೂಲವಾಗಿ ಕೂಡಾ ಕೆಲವುಕಡೆ ಇದೆ. ಹಾಗಿರುವಾಗ ಅವರ ಗ್ರಂಥಕ್ಕೆ ಅವರೇ ವಿರುದ್ಧವಾಗಿ ಹೇಳುವುದು ವಿಚಿತ್ರವಾಗಿದೆ. ಇಂತಹ ಎಷ್ಟೋ ವಾಕ್ಯಗಳಿಗೆ ಸರಿಯಾದ ಭಾವವನ್ನು ತಿಳಿಯದಿದ್ದಾರೆ.

ಅಂತಹವರು ನಾವು ಖುರ್‌ಆನ್‌ನಲ್ಲಿ ಹೇಳುವ ಉನ್ನತವಾದ ಜ್ಞಾನವನ್ನು ಅರ್ಥಮಾಡಿಕೊಳ್ಳಲಾರದೆ ಆ ವಾಕ್ಯಗಳಿಗೆ ಅವರು ಸರಿಯಾದ ಭಾವವನ್ನು ತಿಳಿದಂತೆ ಭ್ರಮಿಸಿ ನಮ್ಮನ್ನು ತಪ್ಪುಹಿಡಿಯುತ್ತಿದ್ದಾರೆ. ಆ ವಾಕ್ಯಗಳಿಗೆ ನಿಜವಾದ ಭಾವನೆ ಅವರಿಗೆ ತಿಳಿಯದೆಂದು ಅವರು ಗುರುತಿಸಲಾರದೆ ಹೋಗಿದ್ದಾರೆ. ಅವರು ನಮ್ಮನ್ನು ತಪ್ಪು ಹಿಡಿದ ಒಂದು ವಾಕ್ಯವನ್ನು ಈಗ ನೋಡೋಣ.

**(5–73) “ನಿಶ್ಚಯವಾಗಿ ಅಲ್ಲಾಹ್ ಮೂವರಲ್ಲಿ ಮೂರನೆಯವನೆಂದು ಅನ್ನುವವರು ವಾಸ್ತವಕ್ಕೆ ಸತ್ಯತಿರಸ್ಕಾರರೆ. ಒಂದೇವೊಂದು ಆರಾಧ್ಯ ದೇವರು (ಅಲ್ಲಾಹ್) ಹೊರತು ಮತ್ತೊಂದು ಆರಾಧ್ಯ ದೇವರು ಇಲ್ಲ. ಅವರು ತಮ್ಮ ಈ ಮಾತುಗಳನ್ನು ಮಾತನಾಡುವುದು ಬಿಡದಿದ್ದರೆ, ಅವರಲ್ಲಿ ಸತ್ಯ ತಿರಸ್ಕಾರರಾದವರಿಗೆ ಕಷ್ಟಕರವಾದ ಶಿಕ್ಷೆ ಬೀಳುತ್ತದೆ.”**

ಇದು ದೈವ ಗ್ರಂಥದಲ್ಲಿರುವ ವಾಕ್ಯ. ದೇವರು (ಅಲ್ಲಾಹ್) ನಿಂದ ಜಿಬ್ರಯೇಲ್ ದೂತನ ಮೂಲಕ ಬಂದಿರುವ ಈ ವಾಕ್ಯದಲ್ಲಿ ಸಂಪೂರ್ಣವಾದ ಜ್ಞಾನವಿದೆ. ಆದರೇ ಈ ವಾಕ್ಯವನ್ನು ಓದಿದಷ್ಟು ಸುಲಭವಾಗಿ ಯಾರ ಬುರಡೆಗೂ ಅರ್ಥವಾಗುವುದಿಲ್ಲ. ಒಟ್ಟಾರೆ ಮುಸ್ಲಿಮ್‌ರ ಉದ್ದೇಶ ಎಲ್ಲರಿಗೂ ಆರಾಧ್ಯದೈವ ಒಬ್ಬನೇಯೆಂದು ಹೇಳುವುದು. ಅವರ ಮಾತಿನೊಂದಿಗೆ ನಾವು ಕೂಡಾ ಏಕೀಭವಿಸುತ್ತಿದ್ದೇವೆ. ಆದರೇ ನಾವು ಹಾಗೆ ಒಪ್ಪಿಕೊಳ್ಳಲಿಲ್ಲವೆಂದು ಮೂವರಲ್ಲಿ ಮೂರನೆಯವನನ್ನೇ ದೇವರೆಂದು ಕರೆಯುತ್ತಿದ್ದೇವೆಂದು ಹೇಳುತ್ತಿದ್ದಾರೆ. ದೇವರ ಜ್ಞಾನ ತಿಳಿಯದವರು ಮೂರನೆಯವನನ್ನು ದೇವರೆಂದು ಅನ್ನಬಹುದು ಆದರೆ ನಾವು ಮೂರನೆಯವನೇ ದೇವರೆಂದು ಎಲ್ಲೂ ಹೇಳಲಿಲ್ಲ ಅಲ್ಲವೆ! ಮೂರನೆಯವ ನನ್ನು ಆರಾಧಿಸೆಂದು ನಾವು ಎಲ್ಲೂ ಬರೆಯಲಿಲ್ಲ ಅಲ್ಲವೆ!

ಅಲ್ಲಾಹ್ ಮೂರಾಗಿ ವಿಭಜಿಸಲ್ಪಟ್ಟಿದ್ದಾನೆಂದು ನಾವು ಈ ಮಧ್ಯೆ ಕಾಲದಲ್ಲಿ 40 ವರ್ಷಗಳಿಂದ ಹೇಳುತ್ತಿದ್ದೇವೆ. ಹಾಗೆ ಹೇಳುವುದನ್ನೇ “ತ್ರೈತ ಸಿದ್ಧಾಂತ” ಎಂದು ಕರೆಯುತ್ತಿದ್ದೇವೆ. ನಾನು ತ್ರೈತ ಸಿದ್ಧಾಂತವನ್ನು ಈಗ ಹೇಳಿದರೇ ನನ್ನನ್ನು ಕೆಲವರು ತಪ್ಪುಹಿಡಿಯಬಹುದು. ತ್ರೈತ ಸಿದ್ಧಾಂತ ಸೃಷ್ಠಿ ಆದಿಯಲ್ಲಿಯೇ ಹೇಳಲ್ಪಟ್ಟಿದೆ. ಅದನ್ನೇ ತೌರಾತ್ ಗ್ರಂಥದಲ್ಲಿ ಬರೆದಿದ್ದಾರೆ. ಹಾಗೇ ಇಂಜೀಲ್ ಗ್ರಂಥದಲ್ಲಿ ಬರೆದಿದ್ದಾರೆ. ಅಷ್ಟೇ ಅಲ್ಲದೆ 1400 ವರ್ಷಗಳ ಕೆಳಗೆ ಬರೆಯಲ್ಪಟ್ಟಿರುವ ಅಂತಿಮ ದೈವ ಗ್ರಂಥ ಖುರ್‌ಆನ್‌ನಲ್ಲಿ ಕೂಡಾ ಬರೆದಿದ್ದಾರೆ. ಆದರೇ ಆ ವಿಷಯವನ್ನು ಬಹಳ ಜನ ಗ್ರಹಿಸಲಾರದೆ ಹೋಗಿದ್ದಾರೆ. ಅಲ್ಲಾಹ್ (ದೇವರು) ಮೂವರಾಗಿ ಇದ್ದಾನೆಂದು, ಆದರೇ ಮೂರನೆಯವನನ್ನು

ದೇವರೆಂದು ಹೇಳುವುದು ಅಜ್ಞಾನವೆಂದು ಹೇಳಿದ್ದಾರೆ. ಇಲ್ಲಿ ಬುರಡೆ ಉಪಯೋಗಿಸಿ ನೋಡಿದರೆ ದೇವರು ಮೂವರಾಗಿ ಇದ್ದಾರೆಂದು ಖುರ್‌ಆನ್ ಗ್ರಂಥವೇ ಹೇಳುತ್ತಿದೆ. ಮೂವರಲ್ಲಿ ಮೂರನೆಯವನು ಆರಾಧ್ಯದೈವ ಅಲ್ಲಾಹ್ ಅಲ್ಲವೆಂದು ಮೂವರಲ್ಲಿ ಒಬ್ಬನೇ ಒಬ್ಬನು ಮಾತ್ರವೇ ಆರಾಧ್ಯ ದೈವ ಎಂದು ಹೇಳಿದ್ದಾರೆ ಹೊರತು ದೇವರು ಮೂವರಾಗಿ ಇಲ್ಲವೆಂದು ಖುರ್‌ಆನ್ ಗ್ರಂಥ ಎಲ್ಲೂ ಹೇಳಲಿಲ್ಲ. ನಾನು ಹೇಳುತ್ತಿರುವ ಮೂವರು ಎನ್ನುವ ಮಾತನ್ನು 1400 ವರ್ಷಗಳ ಕೆಳಗೇ ಹೇಳಿದ್ದಾರೆ. ಅದರಲ್ಲಿ ಒಬ್ಬನೇ ಆರಾಧ್ಯ ದೈವವೆಂದು ನಾನೂ ಸಹ ಹೇಳುತ್ತಿದ್ದೇನೆ. ಮೂರನೆಯವನನ್ನು ಆರಾಧ್ಯ ದೈವವೆಂದು ನಾನು ಹೇಳಲಿಲ್ಲ. ಹಾಗಿರುವಾಗ ನಾನು ತಪ್ಪಾಗಿ ಹೇಳಿರುವುದು ಏನಿದೆಯೆಂದು ಪ್ರಶ್ನಿಸುತ್ತಿದ್ದೇನೆ. ವಾಕ್ಯವನ್ನು ಸರಿಯಾಗಿ ಪರಿಶೀಲಿಸದೆ ತಪ್ಪು ಹಿಡಿಯುವುದೇ ಕೆಲಸವಾಗಿ ಹೇಳುವುದು ಹೊರತು ನನ್ನ ವಾಕ್ಯದಲ್ಲಿ ತಪ್ಪಿಲ್ಲವೆಂದು ಹೇಳುತ್ತಿದ್ದೇನೆ.

ಜ್ಞಾನದಲ್ಲಿ ಹಿರಿಯರೆಂದುಕೊಳ್ಳುವ ಕೆಲವರು ಮುಸ್ಲಿಮ್‌ರು ಅಸೂಯ ದಿಂದ ನಾನು ಹೇಳಿರುವುದು ತಪ್ಪುಯೆಂದು ಆರೋಪಿಸುವುದು ಹೇಗಿದೆಯೋ ನೋಡೋಣ. "ಜೀವಾತ್ಮ, ಆತ್ಮ, ಪರಮಾತ್ಮ" ಎನ್ನುವ ಮೂವರ ಸಿದ್ಧಾಂತಗಳನ್ನು ಮುಸ್ಲಿಮ್‌ರ ಮೇಲೆ ಲೇಪಿಸಬೇಕೆಂದು, ದೇವರು ಹೀಗೆ ಮೂರು ಭಾಗಗಳಾಗಿ ಇದ್ದಾನೆಂದು ನಮ್ಮ ವಿಶ್ವಾಸಗಳನ್ನು ಹೀಯಾಳಿಸುತ್ತಿದ್ದಾರೆ" ಎಂದು ನನ್ನನ್ನು ಆರೋಪಿಸುವುದು ನಡೆದಿದೆ. ಇಲ್ಲಿ ದೇವರು ಮೂವರಾಗಿ ಇದ್ದಾನೆಂದು ಹೇಳುವುದೇ ತಪ್ಪಾಗಿ ಮೂವರ ಸಿದ್ಧಾಂತವನ್ನು ಅವರು ಖಂಡಿಸುತ್ತಿದ್ದಾರೆ. ದೇವರು ಮೂವರು ಎನ್ನುವ ಭಾವವನ್ನು ಮುಸ್ಲಿಮ್‌ರ ಮೇಲೆ ನಾವು ಬಲವಂತವಾಗಿ ಹೊರೆಸಬೇಕೆಂದುಕೊಂಡಿರುವಂತೆ ಅವರು ಹೇಳಿದ್ದಾರೆ. ಖುರ್‌ಆನ್ ಗ್ರಂಥದಲ್ಲಿ ಹೇಳಿದ ಮೂವರನ್ನು ನಾನು ಹೇಳಲಿಲ್ಲ ಅಲ್ಲವೆ! ಎಂದೋ ಖುರ್‌ಆನ್ ಗ್ರಂಥದಲ್ಲಿ ದೇವರು ಮೂವರಾಗಿ ಇದ್ದಾನೆಂದು ಹೇಳಿದ್ದಾರೆ. ಮೂರನೆಯವನು ಆರಾಧಿಸಲ್ಪಡುವ ದೇವರು ಅಲ್ಲವೆಂದು ಹೇಳಿದ್ದಾರೆ. ಮೂವರಲ್ಲಿ ಆರಾಧ್ಯ ದೈವ (ಅಲ್ಲಾಹ್) ಇಲ್ಲವೆಂದು ಹೇಳಲಿಲ್ಲ.

ಮುವ್ವರಲ್ಲಿ ಒಬ್ಬನೇ ಆರಾಧ್ಯ ದೈವ ಎಂದು ಹೇಳಿದ್ದಾರೆ. ಮೂರನೆಯವನು ದೇವರು ಅಲ್ಲವೆಂದು ಹೇಳಿದ್ದಾರೆ. ಮುವ್ವರಲ್ಲಿ ಮೂರನೆಯವನು ದೇವರು ಅಲ್ಲವೆಂದು ಗ್ರಂಥದಲ್ಲೇ ಇದೆ. ಆ ಮಾತನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಮೂವರಲ್ಲಿ ಒಬ್ಬನೇ ಆರಾಧ್ಯದೈವ ಇದ್ದಾನೆಂದು ಸಹ ಗ್ರಂಥದಲ್ಲಿ ಹೇಳಿದ್ದಾರೆ. ಅಷ್ಟೇ ಹೊರತು ತ್ರೈತ ಸಿದ್ಧಾಂತ ಇಲ್ಲವೆಂದು, ಮೂವರು ಇಲ್ಲವೆಂದು ಹೇಳಲಿಲ್ಲ ಅಲ್ಲವೆ!

ವಿಶ್ವದಲ್ಲಿ ಪ್ರಕೃತಿ, ಪರಮಾತ್ಮ ಎನ್ನುವ ಎರಡೇ ಎರಡು ಇವೆ. ಆದರೇ ಪ್ರಕೃತಿ ಐದು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಹಾಗೆಯೇ ಪರಮಾತ್ಮ (ಅಲ್ಲಾಹ್) ಎನ್ನುವಾತನು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದ್ದಾನೆ. ಈ ವಿಷಯ ಜಗವರಿತ ಸತ್ಯ. ಮೂರು ದೈವ ಗ್ರಂಥಗಳಲ್ಲಿ ಹೇಳಿರುವ ವಿಷಯ. ದೇವರು (ಅಲ್ಲಾಹ್) ಮೂರಾಗಿ ವಿಭಜಿಸಲ್ಪಟ್ಟಿರುವುದರಿಂದ ಪ್ರಥಮ ದೈವ ಗ್ರಂಥವಾದ ಅದಕ್ಕೆ ಮನುಷ್ಯರು ಭಗವದ್ಗೀತೆಯೆಂದು ಹೆಸರು ಇಟ್ಟರೂ ಸ್ವತಃವಾಗಿ ದೇವರು ಆ ಹೆಸರನ್ನು ಅಲ್ಲಗಳೆದು **'ತೌರಾತ್'** ಎನ್ನುವ ಹೆಸರು ಇಟ್ಟಿದ್ದಾನೆ. ದೇವರು ಮೂರಾಗಿ ವಿಭಜಿಸಲ್ಪಟ್ಟಿರುವ ವಿಷಯ ಗ್ರಂಥದಲ್ಲಿ ಮುಖ್ಯವಾಗಿ ಹೇಳಿರುವುದರಿಂದ ಅದೇ ಕೆಲಸವಾಗಿ ಆ ವಿಷಯವನ್ನು ಎಲ್ಲರೂ ತಿಳಿಯಬೇಕೆನ್ನುವ ಉದ್ದೇಶದಿಂದ ದೇವರು ಪ್ರಥಮ ದೈವ ಗ್ರಂಥಕ್ಕೆ ತೌರಾತ್‌ಯೆಂದು ಹೆಸರಿಟ್ಟಿದ್ದಾನೆ. **ತೌ** ಎಂದರೆ **ಮೂರು** ಎಂದು ಅನೇಕ ಭಾಷೆಗಳಲ್ಲಿ ಅರ್ಥವಿದೆ. **ತೌರಾತ್** ಎಂದರೆ **ಮೂರು ಆತ್ಮಗಳು** ನೆನಪಿರುವಹಾಗೆ ಆ ಹೆಸರನ್ನು ದೇವರು ಮೋಷೇಗೆ (ಮೂಸಾಗೆ) ಗ್ರಂಥವನ್ನು ಕೊಟ್ಟಾಗ ಅದರ ಹೆಸರು ಭಗವದ್ಗೀತೆಯೆಂದು ಹೇಳದೆ ತೌರಾತ್ ಯೆಂದು ಹೇಳುವುದು ನಡೆದಿದೆ. ಪ್ರಥಮ ದೈವಗ್ರಂಥವಾದ ತೌರಾತ್‌ನ್ನು ಮೋಷೇಗೆ (ಮೂಸಾಗೆ) ಕೊಟ್ಟಾಗ ದೇವರು ಮೂಸಾಯೊಂದಿಗೆ ಮಾತನಾಡುವುದು ನಡೆದಿದೆ. ಆದ್ದರಿಂದ ಆ ವಿಷಯವನ್ನು ಅಂತಿಮ ದೈವ ಗ್ರಂಥದಲ್ಲಿ ಸೂರಾ 4, ಆಯತ್ 164 ರಲ್ಲಿ "ಅಲ್ಲಾಹ್ ಮೂಸಾಯೊಂದಿಗೆ ಮಾತನಾಡಿದ್ದಾನೆ" ಎಂದು ಆಯತ್‌ನಲ್ಲಿ ಹೇಳಿದ್ದಾರೆ.

ದೇವರು ಮೂವರಾಗಿರುವ ವಿಷಯ ತೌರಾತ್‌ನಲ್ಲಿ ಇರುವುದರಿಂದ ನಂತರ ಬಂದಿರುವ ಎರಡು ಗ್ರಂಥಗಳು ತೌರಾತ್‌ನ್ನು ಅನುಸರಿಸಿ ಬರೆದಿರುವವು ಆಗಿರುವುದರಿಂದ, ಒಂದು ವಿಧವಾಗಿ ತೌರಾತ್‌ನಲ್ಲಿನ ಭಾಗಗಳೇ ಆಗಿರುವು ದರಿಂದ ದ್ವಿತೀಯ, ಅಂತಿಮ ದೈವ ಗ್ರಂಥಗಳಲ್ಲಿ ದೈವತ್ವ ಮೂರು ಆತ್ಮಗಳಾಗಿ ಇದೆಯೆಂದು ಹೇಳಿದ್ದಾರೆ ಹೊರತು ಹಾಗೆ ಇಲ್ಲವೆಂದು ಖಂಡಿಸಲಿಲ್ಲ. ದ್ವಿತೀಯ ದೈವ ಗ್ರಂಥದಲ್ಲಿ **ಕುಮಾರ, ತಂದೆ, ಪರಿಶುದ್ಧಾತ್ಮ**ಯೆಂದು, ಅಂತಿಮ ದೈವ ಗ್ರಂಥದಲ್ಲಿ **ನಡೆಸಲ್ಪಡುವವನು, ನಡೆಸುವವನು, ಸಾಕ್ಷಿಯಾಗಿ ನೋಡುವವನು** ಎಂದು ಮೂವರನ್ನು ಅಂದರೆ ದೇವರ ಮೂರು ಭಾಗಗಳನ್ನು ಹೇಳಿದ್ದಾರೆ. ಪ್ರಕೃತಿ ಐದು ಭಾಗಗಳಾಗಿ ವಿಭಜಿಸಲ್ಪಟ್ಟಿರುವಾಗ ಐದು ಭಾಗಗಳಿಗೆ ಐದು ಹೆಸರುಗಳು ಇವೆ. ಅವುಗಳೇ ಮೇಲಿನಿಂದ ಕೆಳಗಿನವರೆಗು ಹೀಗೆ ಇವೆ. 1) ಆಕಾಶ, 2) ಗಾಳಿ, 3) ಅಗ್ನಿ, 4) ನೀರು, 5) ಭೂಮಿಯೆಂದು ಇವೆ. ಪ್ರಕೃತಿ ಎಂದರೆ ಮುಖ್ಯವಾಗಿ ಮಾಡಲ್ಪಟ್ಟಿರುವುದೆಂದು ಅರ್ಥ. 'ಕೃತಿ' ಎಂದರೆ ಮಾಡಲ್ಪಟ್ಟಿರುವು ದೆಂದೂ, 'ಪ್ರ' ಎಂದರೆ ಮುಖ್ಯವಾದುದೆಂದು ಹೇಳಬಹುದು. ಈ ಐದರಲ್ಲಿ ಆಕಾಶ ಪ್ರಧಾನ ಪಾತ್ರವನ್ನು ಪೋಷಿಸುತ್ತಿದೆ. ಆದ್ದರಿಂದ ಪ್ರಕೃತಿಯಲ್ಲಿ ಆಕಾಶ ಪ್ರಾಧಾನ್ಯವಾದುದೆಂದು ಹೇಳಬಲ್ಲೆವು. ದೇವರ ವಿಷಯದೊಳಗೆ ಬಂದರೆ ಆತನು ಮೂರು ಭಾಗಗಳಾಗಿದ್ದರೂ ಅದರಲ್ಲಿ ಎರಡನೆ ಭಾಗವಾದ ಆತ್ಮವೇ ದೇವರೆಂದೂ, ಎಲ್ಲರೂ ಆರಾಧಿಸುವಂತಹವನೆಂದು ಪರಮಾತ್ಮಯಿಂದಲೇ ನಿರ್ಣಯಿಸಲ್ಪಟ್ಟಿದೆ. ಇಲ್ಲಿ ಎಲ್ಲರಿಗೂ ತಿಳಿಯದ ವಿಷಯ ಏನೆಂದರೆ! ದೇವರ ಮೂರು ಭಾಗಗಳಲ್ಲಿ ಮೊದಲ ಭಾಗವನ್ನು ಜೀವಾತ್ಮಯೆಂದು ಹೇಳಿದಾಗ, ಎರಡನೆ ಭಾಗವನ್ನು ಆತ್ಮಯೆಂದು ಹೇಳಿದ್ದಾರೆ. ಮೂರನೆ ಭಾಗಕ್ಕೆ ಹೆಸರು ಇಲ್ಲ ಆದ್ದರಿಂದ ಯಾವಾಗಾದರೂ ಮೂರನೆ ಭಾಗವನ್ನು ಹೇಳಬೇಕೆಂದು ಕೊಂಡರೇ ಎರಡನೆಯವನ ಹೆಸರೇ ಬಳಸಿ ಹೇಳುತ್ತಿರುವರು. ಆದ್ದರಿಂದ ಮೊದಲನೆಯವನು ಜೀವಿಯು ಆದಾಗ, ಎರಡನೆಯವನು ದೇವರಾಗಿ ಇದ್ದಾನೆ. ಮೂರನೆಯವನನ್ನು ಕುರಿತು ಹೇಳಬೇಕಾಗಿ ಬಂದಾಗ ಎರಡನೆಯವನ ಹೆಸರಿನಿಂದಲೇ ಹೇಳುವು ದಾಗಿದೆ. ಈ ವಿಧಾನ ಮೂರು ಗ್ರಂಥಗಳಲ್ಲಿ ಇದ್ದರೂ

ಪ್ರಥಮ, ದ್ವಿತೀಯ ಗ್ರಂಥಗಳಲ್ಲಿ ಎರಡನೆ ಪುರುಷನನ್ನು ಆತ್ಮ ಅಥವಾ ದೇವರು ಎಂದು ಹೇಳುತ್ತಾ ಮೂರನೆಯುವನನ್ನು ಪ್ರತ್ಯೇಕವಾದ ಹೆಸರಿನಿಂದ ಹೇಳುವುದಾಗಿದೆ. ಪ್ರಥಮ ದೈವ ಗ್ರಂಥದಲ್ಲಿ ಆತ್ಮಗಿಂತ ಬೇರೆಯಾಗಿರುವುದೆನ್ನುವ ಉದ್ದೇಶದಿಂದ ಪರಮಾತ್ಮಯೆಂದು ಕರೆದಿದ್ದಾರೆ. ಹಾಗೆಯೇ ದ್ವಿತೀಯ ದೈವ ಗ್ರಂಥದಲ್ಲಿ ಆತ್ಮಗಿಂತ ಪರಿಶುದ್ಧವಾದುದೆನ್ನುವ ಭಾವನೆಯಿಂದ ಪರಿಶುದ್ಧಾತ್ಮ ಯೆಂದು ಹೇಳಲ್ಪಟ್ಟಿದ್ದಾನೆ. ಅಂತಿಮ ದೈವ ಗ್ರಂಥದಲ್ಲಿ ಮೂರನೆ ಆತ್ಮವನ್ನು ಕುರಿತು ಪ್ರತ್ಯೇಕವಾದ ಹೆಸರು ಇಡಲಿಲ್ಲ. ಎರಡನೆ ಆತ್ಮವನ್ನು ಅಲ್ಲಾಹ್‌ಯೆಂದು ಕರೆದಂತೇ ಮೂರನೆ ಆತ್ಮವನ್ನು ಸಹ ಅಲ್ಲಾಹ್‌ಯೇ ಎಂದು ಕರೆದಿದ್ದಾರೆ.

ಉದಾಹರಣೆಗೆ ಒಂದು ವಿಷಯವನ್ನು ಹೇಳಿಕೊಳ್ಳೋಣ. ಸ್ವಚ್ಛವಾದ ತೆಲುಗು ಭಾಷೆಯಲ್ಲಿ ತಂದೆಯನ್ನು 'ಅಬ್ಬ'ಯೆಂದು ಕರೆಯುತ್ತಾರೆ. ಹಾಗೆಯೇ ತಾಯಿಯ ತಂದೆಯನ್ನು ತಾತ ಎನ್ನುತ್ತಾರೆ. ಆದರೇ ತಂದೆಯ ತಂದೆಯನ್ನು ತಾತ ಎನ್ನದೆ ತಂದೆಯನ್ನು ಕರೆದಂತೇ 'ಅಬ್ಬ'ಯೆಂದು ಕರೆಯುವುದು ನಡೆಯುತ್ತಿದೆ. ಯಾವ ವಿಧವಾಗಾದರೆ ತಂದೆಯನ್ನು ತಾತನನ್ನು ಒಂದೇ ಹೆಸರೊಂದಿಗೆ ಅಬ್ಬ ಎಂದು ಕರೆಯುತ್ತಿದ್ದಾರೋ ಹಾಗೆಯೇ ದೇವರ ಮೂರು ಭಾಗಗಳಲ್ಲಿ ಎರಡನೆಯದನ್ನು ದೇವರು (ಅಲ್ಲಾಹ್) ಎಂದು ಕರೆದಂತೆ ಅಂತಿಮ ದೈವ ಗ್ರಂಥದಲ್ಲಿ ಮೂರನೆಯವನನ್ನು ಸಹ ಅಲ್ಲಾಹ್ ಎಂದೇ ಹೇಳುವುದು ನಡೆಯುತ್ತಿದೆ. ಭಗವದ್ಗೀತೆಯಲ್ಲಿ ಸಹ ಇರುವ 18 ಅಧ್ಯಾಯಗಳಲ್ಲಿ 15ನೇ ಅಧ್ಯಾಯದವರೆಗು ಮೂರು ಭಾಗಗಳನ್ನು ಆತ್ಮಯೆನ್ನುವ ಹೆಸರಿನಿಂದಲೇ ಕರೆದಿದ್ದಾರೆ. ಕೊನೆಯಲ್ಲಿ 15ನೇ ಅಧ್ಯಾಯದಲ್ಲಿ ಮೂರು ಆತ್ಮಗಳಿಗೆ ಮೂರು ಹೆಸರುಗಳನ್ನಿಟ್ಟು **ಕ್ಷರನು, ಅಕ್ಷರನು, ಪುರುಷೋತ್ತಮನು** ಎಂದು ಕರೆದಿದ್ದಾರೆ. ದ್ವಿತೀಯ ದೈವ ಗ್ರಂಥದಲ್ಲಿ ಮೂರು ದೈವ ಭಾಗಗಳಿಗೆ ಮೊದಲಿನಿಂದ **ಕುಮಾರ** ಎಂದು ಮೊದಲನೆಯದ್ದನ್ನು, **ತಂದೆ**ಯೆಂದು ಎರಡನೆಯದ್ದನ್ನು, **ಪರಿಶುದ್ಧಾತ್ಮ** ಯೆಂದು ಮೂರನೆಯದ್ದನ್ನು ಕರೆಯುವುದಾಗಿದೆ. ಅಂತಿಮ ದೈವ ಗ್ರಂಥದಲ್ಲಿ ಸೂರಾ 50ರಲ್ಲಿ 21ನೇ ವಾಕ್ಯದಲ್ಲಿ ಮೊದಲ ಭಾಗವನ್ನು **ನಡೆಸಲ್ಪಡುವವನು,**

ಎರಡನೆ ಭಾಗವನ್ನು **ನಡೆಸುವವನು** ಎಂದು ಹೇಳಿ ಮೂರನೆ ಭಾಗಕ್ಕೆ **ಸಾಕ್ಷಿ**ಯೆಂದು ಪ್ರತ್ಯೇಕವಾಗಿ ಹೇಳಿದ್ದಾರೆ. ಇದರಿಂದ ದೇವರು ಮೂರು ಭಾಗಗಳಾಗಿ ಇದ್ದಾನೆಂದು ಸುಲಭವಾಗಿ ತಿಳಿದುಹೋಗುತ್ತಿದೆ. ಖುರ್‌ಆನ್ ಗ್ರಂಥದಲ್ಲಿ ಸೂರಾ 5, ಆಯತ್ 73ರಲ್ಲಿ ಅಲ್ಲಾಹ್ ಮೂವರಾಗಿ ಇದ್ದಾನೆಂದು ಹೇಳಿದಂತೇ ಇದೆ. ಆದರೇ ಮೂರನೆ ಭಾಗವನ್ನು ಅಥವಾ ಮೂರನೆಯವನನ್ನು ಆರಾಧ್ಯದೈವವೆಂದು ಹೇಳಬಾರದು, ಹಾಗೆ ಹೇಳುವುದು ಅಜ್ಞಾನವೆಂದು ಹೇಳಿದ್ದಾರೆ.

ಮೂರು ದೈವ ಗ್ರಂಥಗಳಲ್ಲಿ ದೇವರ ಮೂರು ಭಾಗಗಳಲ್ಲಿ ಎರಡನೆ ಭಾಗವನ್ನೇ ಎಲ್ಲರೂ ಆರಾಧಿಸುವ ಅಲ್ಲಾಹ್‌ಯೆಂದು ಹೇಳಿದ್ದಾರೆ. ಮೂರು ದೈವ ಗ್ರಂಥಗಳಲ್ಲಿ ಎರಡನೆ ಆತ್ಮವನ್ನು ಕರೆದ ಹೆಸರಿನಿಂದಲೇ ಮೂರನೆ ಆತ್ಮವನ್ನು ಸಹ ಬಹಳ ಕಡೆ ಕರೆಯುವುದು ನಡೆದಿದೆ. ಬೈಬಲ್‌ನಲ್ಲಿ ಆತ್ಮವನ್ನು ತಂದೆಯೆಂದು ಹೇಳಿದ್ದಾರೆ. ಹಾಗೇ ಕೆಲವು ಸಂದರ್ಭಗಳಲ್ಲಿ ಮೂರನೆ ಆತ್ಮವನ್ನು ಕೂಡಾ ತಂದೆಯೆಂದು ಹೇಳಿದ್ದಾರೆ. ಯೋಹಾನ ಐದನೆ ಅಧ್ಯಾಯದಲ್ಲಿ 21ರಿಂದ 27ರವರೆಗು ಇರುವ ವಾಕ್ಯಗಳಲ್ಲಿ ಮೂರನೆಯವನಾದ ಪರಿಶುದ್ಧಾತ್ಮ ನನ್ನು ತಂದೆಯೆಂದೂ, ಎರಡನೆಯವನಾದವನನ್ನು ಕುಮಾರನು ಎಂದು ಹೇಳಿದ್ದಾರೆ. ಆದರೇ ಎರಡನೆಯವನಾದವನೇ ನಿಮಗೆ ದೇವರು, ಆತನನ್ನೇ ನೀವು ಆರಾಧಿಸಬೇಕಾಗಿರುವುದೆಂದು ಆ ವಾಕ್ಯಗಳಲ್ಲಿ ಹೇಳಿದ್ದಾರೆ. ಜೀವಿಗೆ ತಂದೆ ಆತ್ಮ ಆದಾಗ, ಆತ್ಮಕ್ಕೆ ತಂದೆ ಪರಮಾತ್ಮಯೆಂದು ತಿಳಿಯಬೇಕು. ಆದರೇ ಎರಡನೆಯವನನ್ನು ಮೂರನೆಯವನನ್ನು ಭಗವದ್ಗೀತೆಯಲ್ಲಿ ಆತ್ಮಯೆಂದೂ, ಬೈಬಲ್‌ನಲ್ಲಿ ತಂದೆಯೆಂದೂ ಖುರ್‌ಆನ್‌ನಲ್ಲಿ ಅಲ್ಲಾಹ್‌ಯೆಂದು ಒಂದೇ ಹೆಸರಿನಿಂದ ಕೆಲವು ಕಡೆ ಕರೆಯುವುದರಿಂದ ಆರಾಧ್ಯ ದೈವ ಯಾರು? ಎನ್ನುವ ಸಂದಿಗ್ಧದಲ್ಲಿ ಎಲ್ಲರೂ ಬಿದ್ದು ಹೋಗಿದ್ದಾರೆ. ಎರಡನೆಯವನೇ ಆರಾಧ್ಯ ದೈವಯೆಂದು ಮೂರನೆಯವನಾದ ಪರಿಶುದ್ಧಾತ್ಮ ಬೈಬಲ್‌ನಲ್ಲಿ ಹೇಳಿದಾಗ, ಹಾಗೇ ಭಗವದ್ಗೀತೆಯಲ್ಲಿ ಮೂರನೆಯವನಾಗಿರುವ ಪರಮಾತ್ಮ ‘ಆತ್ಮವೇ

ನಿಮಗೆ ದೇವರು' ಎಂದು ಹೇಳಲಾಗಿದೆ. ಇನ್ನು ಅಂತಿಮ ದೈವಗ್ರಂಥವಾದ ಖುರಾನ್‌ನಲ್ಲಿ ಸೂರಾ 3 ಆಯತ್ 18 ರಲ್ಲಿ ಅಲ್ಲಾಹ್ ಎನ್ನಲ್ಪಡುವ ಮೂರನೆಯವನು, ಅಲ್ಲಹ್ ಎನ್ನಲ್ಪಡುವ ಎರಡನೆಯವನೇ ನಿಮಗೆ ಆರಾಧ್ಯ ದೈವವೆಂದು ಹೇಳಲಾಗಿದೆ. ಒಂದು ಸಲ ಆ ವಾಕ್ಯವನ್ನು ಗಮನಿಸಿದರೆ ಆ ವಾಕ್ಯದಲ್ಲಿ ಪ್ರತ್ಯಕ್ಷವಾಗಿರುವ ಸತ್ಯ ತಿಳಿಯುತ್ತದೆ. ಮಂದ ಬುದ್ಧಿ ಇರುವವರು ನಾವು ಜ್ಞಾನಿಗಳು ಎಂದರೆ, ನಮಗೆ ಎಲ್ಲಾ ತಿಳಿದಿದೆಯೆಂದರೆ ಸರಿಹೋಗುತ್ತದಾ? ವಾಕ್ಯದಲ್ಲಿರುವ ಸಾರಾಂಶ ವನ್ನು ನೋಡಿರಿ. ಈ ವಾಕ್ಯವನ್ನು ಯಾರು ಹೇಳಿದ್ದಾರೋ ನೋಡಿರಿ.

**(3–18) "ಅಲ್ಲಾಹ್ ಹೊರತು ಮತ್ತೊಂದು ಆರಾಧ್ಯ ದೈವ ಇಲ್ಲವೆಂದು ಸ್ವತಃವಾಗಿ ಅಲ್ಲಾಹ್ ಮತ್ತು ಆತನ ದೂತರು, ಜ್ಞಾನ ಸಂಪನ್ನರಾದವರು ಸಾಕ್ಷಿ ಕೊಟ್ಟಿದ್ದಾರೆ. ಆತನು ನ್ಯಾಯ ಪರಿರಕ್ಷಕನು, ಆತನು ಹೊರತು ಮತ್ತೊಬ್ಬ ಆರಾಧ್ಯನು ಇಲ್ಲ. ಆತನು ಸರ್ವ ಶಕ್ತಿವಂತನು, ಮಹಾವಿವೇಕವಂತನು".**

ಈ ವಾಕ್ಯವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಾದರೆ ದೇವರ ವಿಧಾನ ಚೆನ್ನಾಗಿ ಅರ್ಥವಾಗುತ್ತದೆ. ದೇವರು ಮೂವರಾಗಿ ಇದ್ದಾನೆ ಎನ್ನುವ ಮಾತು ಮೂರು ದೈವಗ್ರಂಥಗಳೊಳಗಿನದ್ದು. ಅದು ಈಗ ನಾನು ಹೇಳುವ ಮಾತಲ್ಲ. ಆದರೆ ಮೂವರಲ್ಲಿ ಮೂರನೆಯವನು ಆರಾಧ್ಯ ದೈವವಲ್ಲ. ಆತನು ಮೊದಲ ಇಬ್ಬರಿಗಿಂತ ದೊಡ್ಡವನಾದರೂ, ನಿಜವಾದ ಸೃಷ್ಟಿಕರ್ತ ಮೂರನೆಯ ವನೇ ಆದರೂ, ಆತನ ಗ್ರಂಥದಲ್ಲಿ ಅಲ್ಲಾಹ್ ಎಂದು ಕರೆಯಲ್ಪಟ್ಟರೂ, ತಾನು ಆರಾಧ್ಯದೈವ ಅಲ್ಲವೆಂದು, ಎಲ್ಲರಿಗೂ ಆರಾಧ್ಯ ದೈವವು ಎರಡನೆಯವನಾದ ಅಲ್ಲಾಹ್‌ನೇ ಎಂದು, ಸ್ವತಃವಾಗಿ ಮೂರನೆಯವನಾದ ಅಲ್ಲಾಹ್ ಮೇಲಿನ ವಾಕ್ಯದಲ್ಲಿ ಹೇಳಿದ್ದಾನೆ. ಆದರೆ ತಂದೆಯಾದ ಅಲ್ಲಾಹ್ ತನ್ನ ಕುಮಾರನಾದ ಅಲ್ಲಾಹ್‌ನೇ ನಿಜವಾದ ದೈವವೆಂದು ಆತನನ್ನೇ ಆರಾಧಿಸಲು ಹೇಳಿದ್ದಾನೆಂದು ಯಾರೂ ಗ್ರಹಿಸಲಾರದೆ ಹೋಗಿದ್ದಾರೆ. ಒಬ್ಬರು ಮನುಷ್ಯ ಆದಾಗ, ಅಲ್ಲಾಹ್

ಎನ್ನಲ್ಪಡುವವರು ಇಬ್ಬರಿದ್ದಾರೆಂದು, ಇಬ್ಬರಲ್ಲಿ ಎರಡನೆಯವನೇ ಆರಾಧ್ಯದೈವ ವೆಂದು **ಮೂರನೆಯವನು** ವಾಕ್ಯದಲ್ಲಿ ಹೇಳಿದ್ದಾನೆಂದು ತಿಳಿಯದೆ ಇಬ್ಬರು ಅಲ್ಲಾಹ್‌ರು ಇದ್ದಾರೆಂದು ಹೇಳಿ ನಮ್ಮ ಮನೋಭಾವನೆಗಳಿಗೆ ಆತಂಕ ಉಂಟುಮಾಡುತ್ತಿದ್ದಾರೆಂದು ನಮ್ಮನ್ನು ಕೆಲವರು ಮುಸ್ಲಿಮ್‌ರು ಆರೋಪಿಸುವುದು ಜ್ಞಾನವೋ ಅಜ್ಞಾನವೋ ನೀವೇ ಆಲೋಚಿಸಿರಿ. ಅವರ ಮಾತು ಸತ್ಯವೋ ಅಸತ್ಯವೋ ನೀವೇ ಗ್ರಹಿಸಿರಿ.

ಬೈಬಲ್ ಯೋಹಾನ್ ಸುವಾರ್ತೆ 5ನೇ ಅಧ್ಯಾಯ 21ನೆ ವಾಕ್ಯದಿಂದ 27 ನೆ ವಾಕ್ಯದವರೆಗು ಹೇಳಿದ ಮಾತುಗಳಲ್ಲಿ ಖುರ್‌ಆನ್‌ನಲ್ಲಿನ (3–18) ರಲ್ಲಿ ವಾಕ್ಯವನ್ನು ನೋಡಬಹುದು. 'ತಂದೆ ಯಾರಿಗೂ ತೀರ್ಪು ತೀರಿಸುವುದಿಲ್ಲ ಆದರೆ ತಂದೆಯನ್ನು ಘನಪಡಿಸಿದಂತೆ ಎಲ್ಲರೂ ಕುಮಾರನನ್ನು ಘನಪಡಿಸಬೇಕೆಂದು ತೀರ್ಪು ತೀರಿಸುವುದಕ್ಕೆ ಸರ್ವ ಅಧಿಕಾರ ಕುಮಾರನಿಗೆ ಒಪ್ಪಿಸಿದ್ದಾನೆ.' ಇಲ್ಲಿ ಹೇಳಿದ ಯೋಹಾನ್ 5–22, 23 ವಾಕ್ಯಗಳಲ್ಲಿ ಖುರ್‌ಆನ್ 3–18 ವಾಕ್ಯಕ್ಕೆ ಸಮಾನ ಭಾವವಿದೆ. ಅಲ್ಲಾಹ್ ಸ್ವತಃವಾಗಿ ನಿಮ್ಮ ಆರಾಧ್ಯ ದೈವ ಅಲ್ಲಾಹ್‌ನೇಯೆಂದು 2ನೆಯವನ ಮೇಲೆ ಮೂರನೆಯವನು ಹೇಳಿದಂತೆ ಬೈಬಲ್‌ನಲ್ಲಿ ಸಹ ಸರ್ವ ಅಧಿಕಾರಗಳು ಎರಡನೆ ಆತ್ಮಕ್ಕೆ ಅಂದರೆ ಕುಮಾರನಿಗೆ ಕೊಟ್ಟು ಆತನನ್ನೇ ಆರಾಧಿಸೆಂದು ಹೇಳಿದ್ದಾರೆ. ಘನಪಡಿಸೆಂದು ಹೇಳುವುದಲ್ಲಿ ಅರ್ಥ ಆತನನ್ನೇ ಆರಾಧಿಸೆಂದು ಆತನೊಬ್ಬನೇ ನಿಮ್ಮ ಆರಾಧ್ಯ ದೈವವೆಂದು ಖುರ್‌ಆನ್‌ನಲ್ಲಿ ಹೇಳಿದಂತೇ ಹೇಳಿದ್ದಾರೆ.

ದೇವರು ಮೂರು ಭಾಗಗಳಾಗಿ ಮೂವರಾಗಿ ಇರುವುದು ದೈವ ಗ್ರಂಥಗಳಲ್ಲಿ ಹೇಳಿರುವುದೇ. ಆದರೆ ಅದರಲ್ಲಿ ಒಬ್ಬನು ಜೀವಾತ್ಮವಾಗಿ (ಮನುಷ್ಯನಾಗಿ) ಇರುವಾಗ ಉಳಿದ ಎರಡು ಆತ್ಮಗಳು ದೈವವಾಗಿ ಇವೆ. ಆದರೆ ಮನುಷ್ಯ ಆರಾಧಿಸಬೇಕಾಗಿರುವುದು ಇಬ್ಬರಲ್ಲಿ ಒಬ್ಬರನ್ನು ಮಾತ್ರ. ಇಬ್ಬರೂ ದೈವಗಳೇ ಆದರೂ ಆರಾಧ್ಯ ದೈವ ಇಬ್ಬರಲ್ಲಿ ಒಬ್ಬನೇ. ಆ ವಿಷಯವನ್ನು ಮೂವರಲ್ಲಿ ದೊಡ್ಡವನಾದವನೇ ತನಗಿಂತ ಚಿಕ್ಕವನಾದ ಆತ್ಮವನ್ನೇ

ಆರಾಧ್ಯದೈವವಾಗಿ ಹೇಳಿದ್ದಾನೆ. ಮೂರನೆಯವನಾದ ತನ್ನನ್ನು ಯಾರೂ ಮುಗಿಯಬಾರದೆಂದು, ಎಂತಹ ಆರಾಧನೆಗಳು ಮಾಡಬಾರದೆಂದು ಹೇಳಿದ್ದಾನೆ. ಆದ್ದರಿಂದ ಇಬ್ಬರಲ್ಲಿ ಒಬ್ಬರೇ ಆರಾಧ್ಯದೈವವೆಂದು ಖುರ್‌ಆನ್‌ನಲ್ಲಿ ಸೂರಾ 16, ಆಯತ್ 51 ರಲ್ಲಿ ಸಹ ಹೇಳಿದ್ದಾರೆ.

**(16–51) "ಅಲ್ಲಾಹ್ ಹೀಗೆ ಹೇಳಿದ್ದಾನೆ ಇಬ್ಬರನ್ನು ಆರಾಧ್ಯದೈವಗಳಾಗಿ ಮಾಡಿಕೊಳ್ಳಬೇಡಿ. ಆರಾಧ್ಯ ದೈವ ಮಾತ್ರ ಆತನು ಒಬ್ಬನೇ. ಆದ್ದರಿಂದ ನೀವೆಲ್ಲಾ ನನಗೆ ಭಯಪಡಿ."**

ಇಲ್ಲಿಯೂ ಸಹ ಖುರಾನ್ (3–18) ರಲ್ಲಿ ಹೇಳಿದಂತೆ, ಬೈಬಲ್ ಯೋಹಾನ್ 5–22, 23 ವಾಕ್ಯಗಳಲ್ಲಿ ಹೇಳಿದಂತೆ ಮೂರನೆಯವನಾದ ದೊಡ್ಡ ಅಲ್ಲಾಹ್ ತನ್ನ ನಂತರ ಇರುವ ಎರಡನೆ ಅಲ್ಲಾಹ್‌ನನ್ನೇ ಆರಾಧಿಸೆಂದು ಆರಾಧ್ಯ ದೈವ ಆತನೊಬ್ಬನೇ ಎಂದು ಹೇಳಿದ್ದಾನೆ. ಅಷ್ಟೇ ಅಲ್ಲದೆ ಮೂರನೆಯವನು ಸೃಷ್ಠಿ ಕರ್ತನಾದ ಅಲ್ಲಾಹ್ ಒಬ್ಬನಿದ್ದಾನೆಂದು ಆತನನ್ನು ಆರಾಧಿಸಬಾರದೆಂದು ಎಂದಿಗೂ ಆರಾಧ್ಯರು ಇಬ್ಬರು ಅಲ್ಲವೆಂದು ಅಲ್ಲಾಹ್ ಒಬ್ಬನೇ ಎಂದು ಹೇಳುತ್ತಾ ಮೂರನೆಯವನಾದ ತನಗೆ ಭಯಪಡಿಯೆಂದು ಹೇಳಿದ್ದಾನೆ. ಈ ವಾಕ್ಯದಿಂದ ಖುರಾನ್ ಓದಿದ ಯಾರಿಗಾದರೂ ಭಯ ಮೂರನೆಯವನ ಮೇಲೆ, ಭಕ್ತಿ ಆರಾಧನೆಗಳು ಎರಡನೆಯವನಾದ ಅಲ್ಲಾಹ್ ಮೇಲೆ ಇರಬೇಕೆಂದು ವಾಸ್ತವವಾಗಿ ತನ್ನೊಂದಿಗೆ ಸಹ ಮೂವರಿದ್ದಾರೆಂಬುದನ್ನು ತಿಳಿದಿರಬೇಕೆಂದು ಹೇಳಿದ್ದಾರೆ. ಹಾಗೆ ತಿಳಿದವನೇ ನಿಜವಾದ ಜ್ಞಾನಿ ಆಗಬಲ್ಲನು. ಹಾಗಲ್ಲದೆ ವಾಕ್ಯದಲ್ಲಿ ಬಹಳ ಜನರನ್ನು ದೇವರುಗಳಾಗಿ ಲೆಕ್ಕಿಸದೆ ಒಬ್ಬನನ್ನೇ ಆರಾಧಿಸೆಂದು ಹೇಳದೆ ಇಬ್ಬರನ್ನು ಆರಾಧಿಸಬಾರದೆಂದು ಏಕೆ ಹೇಳಿದ್ದಾರೋ ಸ್ವಲ್ಪ ಯೋಚಿಸಿ ನೋಡಿರಿ. ಅಷ್ಟೇ ಅಲ್ಲದೆ (5–73) ರಲ್ಲಿ ನಿಶ್ಚಯವಾಗಿ ಅಲ್ಲಾಹ್ ಮೂವರಲ್ಲಿ ಮೂರನೆಯವನು ಅಲ್ಲವೆಂದು ಸಹ ಹೇಳಿದ್ದಾರೆ.

ಹಾಗೆ ಹೇಳುವುದರಿಂದ ಅಲ್ಲಾಹ್ ಮೂವರಾಗಿ ಇದ್ದಾನೆಂದು ಒಬ್ಬನು ಜೀವಾತ್ಮ ಆದಾಗ, ಎರಡನೆಯವನು ಆರಾಧ್ಯ ದೈವ ಆದಾಗ, ಮೂರನೆಯವನು

ಸಾಕ್ಷಿಯಾಗಿ ಇದ್ದಾನೆಂದು, ಎರಡನೆಯವನೇ ಎಲ್ಲರನ್ನೂ ಆಡಿಸುತ್ತಿದ್ದಾನೆಂದು, ಮೊದಲನೆಯವನು ಎರಡನೆಯವನು ಆಡಿಸಿದಂತೆ ಆಡುತ್ತಿದ್ದಾನೆಂದು, ಇದೆಲ್ಲವನ್ನೂ ಮೂರನೆಯವನು ನೋಡುತ್ತಾ ಸಾಕ್ಷಿಯಾಗಿ ಇದ್ದಾನೆಂದು ತಿಳಿಯುತ್ತಿದೆ. ಇದನ್ನನುಸರಿಸಿ ಪ್ರತಿ ದಿನ ಪ್ರತಿ ಮನುಷ್ಯ ಅಲ್ಲಾಹ್‌ನಿಂದ ಆಡಿಸಲ್ಪಡುತ್ತಿದ್ದಾನೆಂದು ತಿಳಿಯುತ್ತಿದೆ. ಈ ವಿಧವಾಗಿ ಸಕ್ರಮವಾಗಿ ಖುರ್‌ಆನ್ ವಾಕ್ಯಗಳನ್ನು ಅರ್ಥಮಾಡಿಕೊಂಡರೆ ಎಷ್ಟೋ ಉನ್ನತವಾದ ಜ್ಞಾನ ತಿಳಿಯುವುದೇ ಅಲ್ಲದೆ ಮೂರು ದೈವ ಗ್ರಂಥಗಳಿಗೆ ಸಮನ್ವಯ ಏರ್ಪಡುತ್ತದೆ. ಹಾಗಾಗದಿದ್ದಲ್ಲಿ ಖುರ್‌ಆನ್‌ಗಿಂತ ಮೊದಲು ಬಂದಿರುವ ಎರಡು ದೈವ ಗ್ರಂಥಗಳಲ್ಲಿ ದೈವ ಜ್ಞಾನವಿದೆಯೆಂದು ಖುರ್‌ಆನ್ ಗ್ರಂಥ ಧೃಢೀಕರಿಸುತ್ತಿದೆ ಯೆಂದು ಸೂರಾ 5, ಆಯತ್ 48ರಲ್ಲಿ ಹೇಳಿದ ಮಾತು ವೃಥಾ ಆಗುತ್ತದೆ. ದೇವರು ಮೂವರಾಗಿ ಇಲ್ಲ ಪುನರುತ್ಥಾನ ದಿನದಂದು ಇಬ್ಬರು ದೇವದೂತರು ಬರುತ್ತಾರೆಂದು (50–21) ರಲ್ಲಿ ಹೇಳಿದ್ದಾರೆಂದರೆ ಮೊದಲ ದೈವ ಗ್ರಂಥಗಳಲ್ಲಿ ಹೇಳಿದ ಮಾತನ್ನು ಅತಿಕ್ರಮಿಸಿದಂತಾಗುತ್ತದೆ. ದೇವರು ಮೂವರಾಗಿ ಇಲ್ಲವೆಂದು ಒಬ್ಬನೇಯೆಂದು ಉಳಿದ ಇಬ್ಬರು ಪುನರುತ್ಥಾನದಿನದಂದು ಮನುಷ್ಯನ ಹಿಂದೆ ಬರುವ ದೇವದೂತರು ಎಂದರೆ ಮೂರು ಗ್ರಂಥಗಳಲ್ಲಿ ಸಮನ್ವಯ ಜ್ಞಾನ ಇಲ್ಲದಂತಾಗುತ್ತದೆ. ಮನುಷ್ಯ ಅಂತಿಮ ದೈವ ಗ್ರಂಥದಲ್ಲಿನ ಸೂಕ್ಷ್ಮ ವಾಕ್ಯಗಳ ವಿವರವನ್ನು ತಿಳಿಯದೆ ತಪ್ಪು ದಾರಿ ಹಿಡಿದಂತಾಗುತ್ತದೆ.

ಮನುಷ್ಯ ಹೇಗೆ ತಪ್ಪು ದಾರಿ ಹಿಡಿದಿದ್ದಾನೆ ಎಂದರೆ ಸೂಕ್ಷ್ಮ ವಿಷಯವನ್ನು ಸ್ಥೂಲವಾಗಿ ಅರ್ಥಮಾಡಿಕೊಂಡರೆ ಅದು ದಾರಿತಪ್ಪಿ ದಂತಾಗುತ್ತದೆಂದು ತಿಳಿಯಬೇಕು. ಉದಾಹರಣೆಗೆ ಹೇಗೆ ತಪ್ಪು ದಾರಿ ಹಿಡಿದಿದ್ದಾನೋ ನನ್ನನ್ನು ವಿಮರ್ಶಿಸಿದ ಒಂದು ವಿಮರ್ಶೆಯಲ್ಲಿ ತಿಳಿಯುತ್ತಿದೆ ನೋಡಿರಿ. "ಖುರ್‌ಆನ್ 22–44 ವಾಕ್ಯದ ಪ್ರಕಾರ ಏಳು ಆಕಾಶಗಳು ಹೊರಗೆ ಎಲ್ಲೂ ಇಲ್ಲವೆಂದು ಪ್ರಬೋಧಾನಂದರವರು ಬರೆದಿದ್ದಾರೆ. ಇದನ್ನು ನಾವು ಖಂಡಿಸುತ್ತಿದ್ದೇವೆ. ಆತನಿಗೆ ಈ ಆಯತ್ ಅರ್ಥವಾಗದೆ ಹಾಗೆ ಬರೆದಿದ್ದಾನೆ. ಸೂರಾ 2, ಆಯತ್ 29ರಲ್ಲಿ ನೋಡಿದರೆ ಏಳು ಆಕಾಶಗಳು ಇವೆಯೆಂದು

ತಿಳಿಯಬಲ್ಲವು." ಎಂದು ಹೇಳಿದ್ದಾರೆ. ಈಗ 2–29ನ್ನು ನೋಡೋಣ.
**(2–29) "ಆತನು ಭೂಮಿಯಲ್ಲಿರುವ ಸಮಸ್ತವನ್ನು ನಿಮಗಾಗಿ ಸೃಷ್ಠಿಸಿದ್ದಾನೆ. ನಂತರ ತನ್ನ ದೃಷ್ಠಿಯನ್ನು ಆಕಾಶಗಳ ಕಡೆ ಮರಳಿಸಿ ಅವುಗಳನ್ನು ಸಪ್ತಾಕಾಶಗಳಾಗಿ ಏರ್ಪಡಿಸಿದ್ದಾನೆ. ಮತ್ತು ಆತನು ಪ್ರತಿ ವಿಷಯಕ್ಕೂ ಸಂಬಂಧಿಸಿದ ಜ್ಞಾನ ಇರುವವನು".**

ಈ ವಾಕ್ಯಪೂರ್ತಿ ಸೂಕ್ಷ್ಮಜ್ಞಾನವಿರುವ ವಾಕ್ಯ. ಇದನ್ನು ಸ್ಥೂಲವಾಗಿ ಅರ್ಥ ಮಾಡಿಕೊಂಡು ಹೊರಗೆ ಏಳು ಆಕಾಶಗಳಿವೆಯೆಂದು ಏಳನೆಯ ಆಕಾಶದಲ್ಲಿ ಅಲ್ಲಾಹ್ ಇದ್ದಾನೆಂದು ಮುಸ್ಲಿಮ್‌ರು ಹೇಳುತ್ತಿದ್ದಾರೆ. ಸ್ಥೂಲವಾಗಿ ಹೊರಗೆ ಆಕಾಶ ಒಂದೇ ಇದೆ. ಏಳನೆಯ ಆಕಾಶವಿದೆಯೆಂದು ಯಾವ ಶಾಸ್ತ್ರಜ್ಞನು ಸಹ ನಿರೂಪಿಸಲಾರನು. ಸೂಕ್ಷ್ಮವಾಗಿ ಆದರೆ ಮನುಷ್ಯನ ಶರೀರದಲ್ಲಿ ನಾಡೀ ಕೇಂದ್ರಗಳು ಏಳಾಗಿ ವಿಭಜಿಸಲ್ಪಟ್ಟಿವೆ. ಏಳು ನಾಡೀಕೇಂದ್ರಗಳನ್ನೇ ಏಳು ಆಕಾಶಗಳಾಗಿ ಗ್ರಂಥದಲ್ಲಿ ಹೇಳಿದ್ದಾರೆ. ಏಳನೆ ಆಕಾಶದಲ್ಲಿ ಅಲ್ಲಾಹ್ ಸಿಂಹಾಸನವನ್ನು ಅದಿಷ್ಠಿಸಿದ್ದಾನೆಂದು ಹೇಳುವುದರಿಂದ ಮನುಷ್ಯನ ಶರೀರದಲ್ಲಿ ತಲೆಯಲ್ಲಿರುವ ಏಳನೇ ನಾಡೀಕೆಂದ್ರದಲ್ಲಿ ದೇವರಿದ್ದಾನೆಂದು ಹೇಳಬಹುದು. ಸೂಕ್ಷ್ಮ ಜ್ಞಾನ ತಿಳಿಯದವರು ದೇವರು ಏಳನೆಯ ಆಕಾಶದಲ್ಲಿ ಮೇಲೆ ಇದ್ದಾನೆಂದು ಹೇಳುತ್ತಿರುವರು. ಹಾಗಾದರೆ ಮನುಷ್ಯನಿಗೆ ದೇವರು ಬಹಳ ದೂರದಲ್ಲಿ ಇದ್ದಂತಾಗುತ್ತದೆ. ದೇವರು ಹೊರಗೆ ಏಳನೆಯ ಆಕಾಶದಲ್ಲಿ ಇದ್ದಾನೆಂದು ಹೇಳುವವರು (2–186) ಆಯತ್‌ಗೆ ವಿರುದ್ಧವಾಗಿ ಮಾತನಾಡಿ ದಂತಾಗುತ್ತದೆ. ಸೂರಾ 2, ಆಯತ್ 186ರಲ್ಲಿ ಹೀಗಿದೆ ನೋಡಿರಿ.

**(2–186) "ನನ್ನ ದಾಸರು ನನ್ನನ್ನು ಕುರಿತು ನಿನ್ನನ್ನು ಕೇಳಿದರೆ ನಾನು ಅವರಿಗೆ ಅತಿ ಸಮೀಪದಲ್ಲಿದ್ದೇನೆಂದು ಹೇಳು. ಕರೆಯುವವನು ನನ್ನನ್ನು ಕರೆದಾಗ ನಾನು ಆತನ ಕರೆಯನ್ನು ಕೇಳಿ ಉತ್ತರ ಕೊಡುತ್ತೇನೆ. ಆದ್ದರಿಂದ ಅವರು ಸರಿಯಾದ ಮಾರ್ಗವನ್ನು ಹೊಂದುವುದಕ್ಕೆ ನನ್ನ ಆಜ್ಞೆ (ಜ್ಞಾನವನ್ನು) ಅನುಸರಿಸಬೇಕು. ಮತ್ತು ನನ್ನಲ್ಲಿ ವಿಶ್ವಾಸ ಹೊಂದಿರಬೇಕು ಎಂದು ಹೇಳು".**

(2–29) ವಾಕ್ಯವನ್ನು ಸ್ಥೂಲವಾಗಿ ಹೇಳಿಕೊಂಡರೆ ದೇವರು ದೂರವಾಗಿ ಎಲ್ಲೋ ಏಳನೆಯ ಆಕಾಶದಲ್ಲಿ ಇದ್ದಂತಾಗುತ್ತದೆ. ಆಗ (2–186) ವಾಕ್ಯಕ್ಕೆ ಆ ಮಾತು ಪೂರ್ತಿ ವಿರುದ್ಧವಾಗುತ್ತದೆ. ದೇವರು ಪ್ರತಿ ಮನುಷ್ಯನ ಶರೀರದಲ್ಲಿ ತಲೆಯಲ್ಲಿರುವ ಏಳನೆಯ ನಾಡೀ ಕೇಂದ್ರದಲ್ಲಿದ್ದು ಮನುಷ್ಯ ಅಂದುಕೊಳ್ಳುವ ಪ್ರತಿ ವಿಷಯವನ್ನು ತಿಳಿಯುತ್ತಿದ್ದಾನೆ. ದೇವರು ನಮಗೆ ಅತ್ಯಂತ ಸಮೀಪದಲ್ಲಿದ್ದಾನೆ ಎನ್ನುವ ಮಾತು (2–186) ಆಯತ್ ಪ್ರಕಾರ ಸತ್ಯ. ಆಕಾಶಗಳು ಏಳು ಹೊರಗೆ ಇಲ್ಲ, ಒಳಗೆ ಇವೆಯೆನ್ನುವ ಸೂಕ್ಷ್ಮ ಜ್ಞಾನವನ್ನು ತಿಳಿಯಬೇಕು. ಹಾಗೆ ತಿಳಿಯದೆ ನಾನು ಹೇಳಿರುವ ಮಾತು ಅಸತ್ಯವೆಂದು ಹೇಳಿ ಆರೋಪಿಸಿದ್ದಾರೆ. (2–186) ಆಯತ್ ಪ್ರಕಾರ **ಯಾವುದು ಸತ್ಯವೋ ಯಾವುದು ಅಸತ್ಯವೋ** ಏಳು ಆಕಾಶಗಳ ವಿಷಯದಲ್ಲಿ ತಿಳಿಯಬಲ್ಲದು. ನನ್ನನ್ನು ಅಸತ್ಯವಾದಿಯೆಂದು ಆರೋಪಿಸಿದರೂ ಫರವಾಗಿಲ್ಲ ನೀವು ದೇವರಿಗೆ ಹತ್ತಿರವಾಗಿ ಹೋಗುತ್ತಿದ್ದೀರಾ, ದಾರಿ ತಪ್ಪಿ ದೂರವಾಗಿ ಹೋಗುತ್ತಿದ್ದೀರಾ ಒಂದು ಬಾರಿ ಹಿಂತಿರುಗಿ ನೋಡಿಕೊಳ್ಳಿ. ನೀವು ಸತ್ಯದಲ್ಲಿ ಇಲ್ಲವೆಂದು ನಾನು ಎಲ್ಲ ವಿಧಗಳಲ್ಲಿ ಸತ್ಯವನ್ನೇ ಬೋಧಿಸುತ್ತಿದ್ದೇನೆಂದು ತಿಳಿಯಬಲ್ಲದು. ದೇವರು ಸೂಕ್ಷ್ಮವಾಗಿ ಕಾಣಿಸದವನು, ಆತನ ಜ್ಞಾನವೂ ಸಹ ಸೂಕ್ಷ್ಮದೊಂದಿಗೆ ಕೂಡಿಕೊಂಡಿರುತ್ತದೆ. ಸೂಕ್ಷ್ಮ ವಿವರ ತಿಳಿಯದವರು ಸೂಕ್ಷ್ಮವಾದ ದೇವರನ್ನು ತಿಳಿಯಲಾರರು. ನೀವು ಸರಿಯಾದ ಮಾರ್ಗದಲ್ಲಿ ಇದ್ದೀರೋ ಇಲ್ಲವೋ ಒಂದು ಸಲ ಹಿಂತಿರುಗಿ ನೋಡಿಕೊಳ್ಳಿ. ಆಗ ಯಾವುದು ಸತ್ಯವೋ ಯಾವುದು ಅಸತ್ಯವೋ ತಿಳಿಯಬಲ್ಲದು.

## ಸಮಾಪ್ತಿ

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರ ಎಷ್ಟು ಅವಶ್ಯವೋ, ಹಾಗೇ ಒಂದು ವಿಷಯವನ್ನು ಖಂಡಿಸುವುದಕ್ಕೂ ಶಾಸ್ತ್ರ ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರ ಮಂದಿ ಹೇಳಿದರೂ, ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರ ಮಂದಿ ಅಲ್ಲಗಳೆದರೂ, ಅದು ಅಸತ್ಯವಲ್ಲ.**

1. ನಾಲ್ಕು ಅಧರ್ಮಗಳು ಶೇ. ಹತ್ತರಷ್ಟು ಮನುಷ್ಯರಲ್ಲಿರುವಾಗ,
ಒಂದು ಮತವೆಂಬ ಅಧರ್ಮ 99 ರಷ್ಟು ಇದೆ.
2. ಯಜ್ಞ, ದಾನ, ವೇದ, ತಪಸ್ಸುಗಳು ನಾಲ್ಕು ಆದಾಗ, ಐದನೆಯ ಅಧರ್ಮ ಮತ.
3. ದೈವ ಮಾರ್ಗಕ್ಕೆ ದೊಡ್ಡ ಆತಂಕ ಮತ.
4. ಎಲ್ಲ ಅಧರ್ಮಗಳನ್ನು ಮೀರಿರುವುದು ಮತವೆಂಬ ಅಧರ್ಮ.
5. ಪ್ರಪಂಚ ಮಾರ್ಗದಲ್ಲಿ ಮತವಿದ್ದರೇ ದೈವ ಮಾರ್ಗದಲ್ಲಿ ಹತವಾಗಿ ಹೋಗುತ್ತೀಯ.
6. ಕಲಿಯುಗದಲ್ಲಿ ಹೊಸದಾಗಿ ಹುಟ್ಟಿ ಬಂದಿರುವ ಐದನೆಯ ಅಧರ್ಮವೇ ಮತ.

ಮತಗಳು ನಿಷೇಧ, ನಿಷಿದ್ಧ. ಕುಲಗಳು ಅಹೇತುಕ, ಅಶಾಸ್ತ್ರೀಯ.

ಭಗವದ್ಗೀತಾ, ಬೈಬಲ್, ಖುರಾನ್ ಮೂರೂ ಒಂದೇ ದೈವಗ್ರಂಥಗಳಲ್ಲಿನ ಭಾಗಗಳೇ.

ನಿಮ್ಮ ಮನೋಭಾವನೆಗಳು ಕುಲಮತಗಳಿಗೆ ಅತೀತವಾದರೇ ಕೂಡಲೇ "ಪ್ರಬೋಧ ಸೇವಾಸಮಿತಿ"

ಯಲ್ಲಿ ಸದಸ್ಯರಾಗಿ ಸೇರಿರಿ. ದೇವರು ನಿಮ್ಮನ್ನು ಜ್ಞಾನಿಗಳಾಗಿ ಮಾಡಬೇಕೆಂದು ಕೋರುತ್ತಿರುವ

––ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು

**Cell:09705864675, 09440556968, 09611133635**